# ಅಪರಂಜಿ

ತಿಳಿನಗೆಯ ಕಾರಂಜಿ

ಜುಲೈ 2017



**ಸಂಪಾದಕ ಮಂಡಳಿ**

**ಸಂಪಾದಕರು**

ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**

ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**

ಶ್ರೀ ಎಚ್.ಎನ್. ಆನಂದ

ಶ್ರೀ ಎಚ್. ಗೋಪಾಲಕೃಷ್ಣ

**ಆಡಳಿತ ಮಂಡಳಿ**

**ಮ್ಯಾನೇಜಿಂಗ್ ಟ್ರಸ್ಟಿ**

ಶ್ರೀ ಎಂ. ಶಿವಕುಮಾರ್

**ಟ್ರಸ್ಟಿಗಳು**

ಶ್ರೀ ಬೇಲೂರು ರಾಮಮೂರ್ತಿ

ಶ್ರೀ ವಿ.ಆರ್. ನಾಥ್

ಶ್ರೀ ಎಚ್.ಎನ್. ಆನಂದ

ಶ್ರೀ ಸಿ.ಆರ್. ಸತ್ಯ

ಶ್ರೀ ಕೆ. ರವೀಂದ್ರ ರಾವ್

**ಚಂದಾ ವಿವರ:**

**ಬಿಡಿ ಪ್ರತಿ: ರೂ. 10/-**

**ವಾರ್ಷಿಕ ಚಂದಾ: ರೂ. 100/-**

**ಹತ್ತು ವರ್ಷದ ಚಂದಾ: ರೂ. 750-**

ಸಂಪರ್ಕ ಸಮಯ:

ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ:

ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ.



# ಅಪರಂಜಿ

ತಿಳಿನಗೆಯ ಕಾರಂಜಿ

**ಸಂಪುಟ 34**

**ಸಂಚಿಕೆ - 9**

**ಜುಲೈ - 2017**

## ಈ ಸಂಚಿಕೆಯಲ್ಲಿ.....

| | | |
|---|---|---|
| ಅಪರಂಜಿ ಕಿಡಿ | ***ಪ್ರಕಾಶ್*** | 2 |
| ನಮ್ಮ ನಿಮ್ಮಲ್ಲಿ | ***ಶಿವಕುಮಾರ್*** | 3 |
| ಕನ್ನ ಕೊರೆಯಲು..... | ***ಎಸ್. ಆರ್. ವಿಜಯಶಂಕರ*** | 6 |
| ಮೂಷಿಕ ಬಂಧನ | ***ನಂನಾಗ್ರಾಜ್*** | 11 |
| ಪರದೆಯ ಹಿಂದೆ.... | ***ಇ. ಆರ್. ರಾಮಚಂದ್ರನ್*** | 14 |
| ವ್ಯಾಕರಣ ಭಾಗ್ಯ | ***ಎನ್. ರಾಮನಾಥ್*** | 17 |
| ಪಂಚ್ ಪದ್ಯಗಳು | ***ಎಚ್. ಡುಂಡಿರಾಜ್*** | 19 |
| ಆಲಾಪವೋ ಪ್ರಲಾಪವೋ | ***ಅರುಂಧತಿ ಜೋಶಿ*** | 20 |
| ಸತ್ವಪರೀಕ್ಷೆ | ***ಗೌತಮ*** | 22 |
| ಅಯ್ಯೋꜱꜱꜱ...ಜಿರಳೆ | ***ಗಾಯತ್ರಿ ಮೂರ್ತಿ*** | 25 |
| ತುಂತುರು | ***ದಂನಿಅ*** | 30 |
| ಫಿಟ್ ಆಗುವುದೆ?..... | ***ಸಹನಾ ಪ್ರಸಾದ್*** | 31 |
| ವ್ಯಂಗ್ಯ ಮೆಲುಕು | ***ಪ್ರಕಾಶ್ ಶೆಟ್ಟಿ*** | 33 |
| ಸುಕುಮಾರನ ಸಂಜೀವಿನಿ | ***ಪಾಲಹಳ್ಳಿ ವಿಶ್ವನಾಥ್*** | 34 |

**ಮುಖಪುಟ ವ್ಯಂಗ್ಯಚಿತ್ರ - ಜಿ.ಎಸ್. ನಾಗನಾಥ್**

**ವ್ಯಂಗ್ಯ ಚುಟುಕಗಳು - ಸುಕೇಶವ**

ಪ್ರಕಾಶಕರು *:* ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003. email: koravanji42@hotmail.com

ಸಂಪರ್ಕ ವಿಳಾಸ: **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು - 560 068. ದೂರವಾಣಿ: 080-26688488. email: belururamamurthy@gmail.com

*ಮುದ್ರಣ : ರವಿ ಗ್ರಾಫಿಕ್ಸ್ - ಅಕ್ಷರ ಜೋಡಣೆ : ಒಮೇಗಾ ಲೇಸರ್‌ಟೆಕ್*

# ಅಪರಂಜಿ ಕಿಡಿ

● ಪ್ರಕಾಶ್



'ಚುನಾವಣೆಗೆ ಸಜ್ಜಾಗಿ' ಶಾಸಕರಿಗೆ ಸೂಚನೆ – ಸುದ್ದಿ

***● ಅರ್ಥವಾಯಿತು !!***

★★★

ರೇಸ್‌ಗಳಿಗೆ ಅನುಮತಿ – ಬೆಂಗಳೂರು ಸುದ್ದಿ

***● ಹಯಗಳ ಹೇಶಾರವ !!***

★★★

ಉಗ್ರರ ವಿರುದ್ಧ ಹೋರಾಡೋಣ – ಮೋದಿ, ಪುಟಿನ್ ಹೇಳಿಕೆ

***● ಅರಣ್ಯ ರೋದನ !!***

★★★

'ನಕಲಿ ದಾಖಲೆ ಪ್ರಾಧ್ಯಾಪಕರು' – ಸುದ್ದಿ

***● ಬೇಲಿಯೇ ಎದ್ದು..... !!***

★★★

ಮಧುಮೇಹ ಸಂಸ್ಥೆಗೆ 35 ಕೋಟಿ ಭರವಸೆ – ಮಾನ್ಯ ಮಂತ್ರಿಗಳು

***● ಸಿಹಿ ಸುದ್ದಿ !!***

★★★

8ನೇ ತರಗತಿಯವರೆಗೆ ಫೇಲ್ ಮಾಡುವಂತಿಲ್ಲ – ಪತ್ರಿಕೆ

***● ಆಹಾ! ನಮ್ಮ ಬಾಲ್ಯ ನೆನಪಿಗೆ ಬರುತ್ತೆ !!***

★★★

ಪಾಕ್ ನೌಕಾಪಡೆಗೆ ಚೀನಾದಿಂದ ತರಬೇತಿ – ಸುದ್ದಿ

***● ಹಾಗಲಕಾಯಿಗೆ.... !!***

★★★

ಕಲ್ಲು ತೂರುವವರಿಗೆ ಸದ್ಭಾವನಾ ಪ್ರವಾಸ – ಶ್ರೀನಗರ ಸುದ್ದಿ

***● ಆಧುನಿಕ ಶಿಲಾಯುಗ !?***

★★★

ಕತಾರ್ ವಿಚಾರಣೆಗೆ ಅಮೆರಿಕದ ನ್ಯಾಯಾಧೀಶರ ನೇಮಕ – ಸುದ್ದಿ

***● ಇನ್ನೇನು ತಕರಾರಾಗುತ್ತೋ ?!***

★★★

# ನಮ್ಮ ನಿಮ್ಮಲ್ಲಿ

**ಮೊ**ನ್ನೆ ಅಂದರೆ ಜೂನ್ ಮೂರರಂದು ಅಪರಂಜಿ ಬಳಗದ ಹಿರಿಯ ಲೇಖಕಿ ಶ್ರೀಮತಿ ಭುವನೇಶ್ವರಿ ಹೆಗ್ಗಡೆಯವರು ವೃತ್ತಿಯಿಂದ ನಿವೃತ್ತಿ ಹೊಂದುವ ಸಂದರ್ಭದಲ್ಲಿ ಅವರನ್ನು ಅಭಿನಂದಿಸಲು ಒಂದು ಸಮಾರಂಭವನ್ನು ಅವರ ಅಭಿಮಾನಿಗಳು ಮಂಗಳೂರಿನಲ್ಲಿ ಏರ್ಪಡಿಸಿದ್ದರು. ಇದಕ್ಕೆ ಒಂದು ತಿಂಗಳ ಮುಂಚೆಯೇ ಭುವನೇಶ್ವರಿಯವರು ನನ್ನನ್ನು ಸಂಪರ್ಕಿಸಿ ಸಮಾರಂಭಕ್ಕೆ ಬರಲೇಬೇಕೆಂದು ಆಹ್ವಾನಿಸಿದ್ದೇ ಅಲ್ಲದೇ ಅಭಿನಂದನಾ ಗ್ರಂಥದ ಬಿಡುಗಡೆಯ ಹೊಣೆಗಾರಿಕೆಯನ್ನೂ ನನಗೆ ವಹಿಸಿಬಿಟ್ಟರು. ಭುವನೇಶ್ವರಿಯವರೊಂದಿಗೆ ನಮ್ಮ ಮನೆಯವರೆಲ್ಲರ ಗೆಳೆತನ ಮೂರು ದಶಕಗಳಿಗೂ ಮಿಕ್ಕಿದ್ದು. ಭುವನೇಶ್ವರಿಯವರು ಬೆಂಗಳೂರಿಗೆ ಬಂದಾಗ ಅನೇಕ ಬಾರಿ ನಮ್ಮ ಅಕ್ಕ ಕಮಲಾ (ಅವರು ಈಗಿಲ್ಲ) ಅವರ ಮನೆಯಲ್ಲೇ ಇಳಿದುಕೊಳ್ಳುತ್ತಿದ್ದರು. ನಾವೆಲ್ಲಾ ಅಲ್ಲೇ ಒಟ್ಟುಗೂಡಿ ಹರಟೆ ಹೊಡೆಯುತ್ತಿದ್ದ ಸಮಯಗಳು ಲೆಕ್ಕವಿಲ್ಲ. ಹಾಗಾಗಿ ನಮ್ಮ ಅಕ್ಕ ಲೀಲ ಮತ್ತು ನಾನು ಸಮಾರಂಭಕ್ಕೆ ಎರಡು ದಿನ ಮುಂಚೆಯೇ ಘಟ್ಟ ಇಳಿಯುವ ನಿರ್ಧಾರ ಮಾಡಿದ್ದೆವು.

ನಮಗೆಲ್ಲಾ ಭುವನೇಶ್ವರಿಯವರ ಪರಿಚಯ ಆದದ್ದು ಅವರ ಕೃತಿಗಳ ಮೂಲಕ. ಅದಾದದ್ದು ಹೀಗೆ. ಆಗಿನ್ನೂ ಅಪರಂಜಿ ಪತ್ರಿಕೆಯ ಪ್ರಾರಂಭದ ಸಮಯ. ಅ.ರಾ.ಸೇ. ಮತ್ತು ನಾನು ಅಪರಂಜಿಗಾಗಿ ಹೊಸ ಲೇಖಕರನ್ನು ಹುಡುಕಲು ಪರದಾಡುತ್ತಿದ್ದ ದಿನಗಳವು. ಹಾಗಿದ್ದಾಗ ಒಮ್ಮೆ ಒಟ್ಟಿಗೆ ಎರಡು ಲೇಖನಗಳು ಬಂದವು. ಮೊದಲನೆಯದು ''ಬಿದ್ದೂರಿನ ಬಿಗ್‌ಬೆನ್'' ಎಂಬ ಲೇಖನ. ಇದು ಆಗಾಗಲೇ ಅಪರಂಜಿ ಬಳಗವನ್ನು ಸೇರಿದ್ದ ಶ್ರೀನಿವಾಸ ವೈದ್ಯರ ಲೇಖನ. ಇನ್ನೊಂದು ಲೇಖನ ''ನಮ್ಮ ಹಳ್ಳಿಯ ಸಾಹಿತ್ಯ ಸಮ್ಮೇಳನ'' ಇದನ್ನು ಮಂಗಳೂರಿನ ಲೇಖಕಿಯೊಬ್ಬರು ಬರೆದು ಕಳಿಸಿದ್ದರು. ಎರಡೂ ಬರಹಗಳು ಪುಟಗಳ ಸಂಖ್ಯೆಯಲ್ಲಿ ಒಂದನ್ನೊಂದು ಮೀರಿಸುವಂತಿದ್ದು ನಮ್ಮ ನಲವತ್ತು ಪುಟಗಳ ಸಂಚಿಕೆಯ ಅರ್ಧಭಾಗವನ್ನು ಆಕ್ರಮಿಸುವಂತಿದ್ದವು. ಆದರೂ ಲೇಖನಗಳು ಬಹು ಚೆನ್ನಾಗಿದ್ದುದರಿಂದ ಅವುಗಳನ್ನು ಕೈಬಿಡುವ ಪ್ರಶ್ನೆಯೇ ಇರಲಿಲ್ಲ. ಹಾಗಾಗಿ ಅಪರಂಜಿಯ 1985ರ ಮೇ ತಿಂಗಳ ಸಂಚಿಕೆಯಲ್ಲಿ ಭುವನೇಶ್ವರಿಯವರ ಮೊದಲ ಅಪರಂಜಿ ಲೇಖನ ಪ್ರಕಟವಾಯಿತು. ಆಗ ಪ್ರಾರಂಭವಾದ ಅವರ ಅಪರಂಜಿ ನಂಟಸ್ಥಿಕೆ ಮೂರು ದಶಕಗಳನ್ನು ಮೀರಿ ಇಂದಿನವರೆಗೂ ಅವ್ಯಾಹತವಾಗಿ ಬೆಳೆದು ಬಂದಿದೆ.

ಅಪರಂಜಿಗೆ ಭುವನೇಶ್ವರಿಯವರ ಎರಡನೆ ಕೊಡುಗೆಯೆಂದರೆ ಒಂದು ಕವನ – ''ಮಂಗ್ಳೂರ್ನಾಗೆ ಬೆವ್ರು''

ಕಾಶ್ಮೀರ್ದಾಗೆ ಐಸಿದ್ದಂಗೆ
ಮಡಿಕೇರೀಲಿ ಮಂಜಿದ್ದಂಗೆ
ಬಳ್ಳಾರೀಲಿ ಧೂಳಿದ್ದಂಗೆ
ಮಂಗ್ಳೂರ್ನಾಗೆ ಬೆವ್ರು

ಎಂದು ಪ್ರಾರಂಭವಾಗುವ ಮತ್ತು ಬಹು ಸರಳವಾಗಿ ಮೂಡಿಬಂದಿರುವ ಈ ಕವನ ನನ್ನ ಆಲ್ ಟೈಮ್ ಫೇವರೇಟ್.

ಇದಾದ ನಂತರ 1987ರಲ್ಲಿ ಒಂದು ಮದುವೆಯ ಕಾರ್ಯಕ್ರಮದ ಪ್ರಯುಕ್ತ ನಾನು ಮತ್ತು ಲೀಲಕ್ಕ ಮಂಗಳೂರಿಗೆ ಹೋಗಿದ್ದೆವು. ಮದುವೆಯ ಕಾರ್ಯಕ್ರಮವೇ ಅಲ್ಲದೇ ನಮ್ಮಿಬ್ಬರಿಗಿದ್ದ ಇನ್ನೊಂದು ಮುಖ್ಯ ಕಾರ್ಯಕ್ರಮವೆಂದರೆ ಭುವನೇಶ್ವರಿಯವರನ್ನು ಭೇಟಿ ಮಾಡುವುದು. ಅಷ್ಟು ಹೊತ್ತಿಗಾಗಲೇ ಅವರು ಅಪರಂಜಿ ಬಳಗದ ಒಂದು ಮುಖ್ಯ ಅಂಗವಾಗಿದ್ದರು. ನಾವು ತಂಗಿದ್ದ ಅತಿಥಿಗೃಹಕ್ಕೆ ಭುವನೇಶ್ವರಿಯವರು ಬಂದು ನಮ್ಮನ್ನು ಭೇಟಿಯಾದರು. ನಮ್ಮ ಮೊದಲ ಭೇಟಿಯಲ್ಲೇ ನಮ್ಮೆಲ್ಲರ ನಡುವೆ ಒಂದು ಅನ್ಯೋನ್ಯತೆ, ಒಂದು ಆತ್ಮೀಯತೆ ಮೂಡಿಬಂದಿತು. ''ಸೇಮ್ ಫ್ರೀಕ್ವೆನ್ಸಿ'' ಅಂತಾರಲ್ಲಾ ಅದನ್ನು ಅಂದು ನಾವು ಪರಸ್ಪರ ಕಂಡುಕೊಂಡೆವು. ಬಾಲ್ಯದಿಂದ ಸಾಹಿತ್ಯ ಮತ್ತು ನಗೆ ವಾತಾವರಣದಲ್ಲಿ ಬೆಳೆದು ಬಂದಿದ್ದರೆ ಹೀಗೆ ಆಗುತ್ತದೇನೋ ನನಗೆ ತಿಳಿಯದು. ಅವತ್ತು ನಾವು ಹರಟುತ್ತಾ ಕುಳಿತಾಗ ಸಮಯ ಸರಿದದ್ದೇ ತಿಳಿಯಲಿಲ್ಲ.

ಜೂನ್ ಮೂರರಂದು ಕದ್ರಿಯ ಮಲ್ಲಕಟ್ಟೆಯಲ್ಲಿರುವ ಲಯನ್ಸ್ ಸೇವಾ ಮಂದಿರದಲ್ಲಿ ಸಮಾರಂಭವನ್ನು ಏರ್ಪಡಿಸಿತ್ತು. ನಾಲ್ಕು ಗಂಟೆಗೆ ಪ್ರಾರಂಭವಾಗುವ ಸಮಾರಂಭಕ್ಕೆ ಲೀಲಕ್ಕ ಮತ್ತು ನಾನು ಸರಿಯಾಗಿ ಮೂರೂಕಾಲು ಗಂಟೆಗೆ ಹಾಜರಿದ್ದೆವು. ದೂರದ ಕಾಪುವಿನಿಂದ ನಾವು ಬಂದದ್ದರಿಂದ, ಅಲ್ಲಿಂದ ಇಲ್ಲಿಗೆ ಬರಲು ಬೇಕಾಗುವ ಸಮಯದ ಅಂದಾಜು ಇಲ್ಲದ್ದರಿಂದ, ಅಲ್ಲಿನ ರಸ್ತೆಗಳ ಟ್ರಾಫಿಕ್ ಸಾಂದ್ರತೆಯ ಬಗ್ಗೆ ನಮಗಿದ್ದ ಅಜ್ಞಾನದ ಬಗ್ಗೆ ಅರಿವಿದ್ದಿದುದರಿಂದ ಹಾಗೂ ಭುವನೇಶ್ವರಿಯವರ ಸಮಾರಂಭಕ್ಕೆ ತಡವಾಗಬಾರದೆಂಬ ಉತ್ಕಟ ಇಚ್ಛೆಯಿಂದ (ಅಥವಾ ಇವೆಲ್ಲ ಸಬೂಬುಗಳ ಬದಲು ಆತಂಕ ಕಾತರಗಳು ನಮ್ಮಿಬ್ಬರಿಗೂ ಹುಟ್ಟಿನಿಂದ ಬಂದಿರುವ ವಾಸ್ತವತೆಯ ದೆಸೆಯಿಂದ) ಹೀಗೆ ಮುಕ್ಕಾಲು ಗಂಟೆ ಮುಂಚೆ ನಮ್ಮ ಟ್ಯಾಕ್ಸಿ ಸಭಾಂಗಣದ ಮುಂದೆ ನಿಂತಿತ್ತು. ಬಾಗಿಲಿನಲ್ಲಿ ಸ್ವಯಂ ಸೇವಕ ಸೇವಕಿಯರು ತಳಿರು ತೋರಣಗಳನ್ನು ಇನ್ನೂ ಕಟ್ಟುತ್ತಿದ್ದರು. ಅವರನ್ನು ದಾಟಿಹೋಗಲು ನಾಚಿಕೆಯಾಗಿ ಅವರುಗಳು ಕೆಲಸ ಮುಗಿಸಿ ಹೋಗುವುದನ್ನೇ ಕಾಯುತ್ತಾ ಕಾರಿನಲ್ಲೇ ಅವಿತು ಕುಳಿತಿದ್ದೆವು. ಮೂರೂವರೆಗೆ ಬಾಗಿಲು ತೆರಪಾಯಿತು. ಜಿನುಗುತ್ತಿದ್ದ ಮಳೆಯಲ್ಲೇ ನಾವು ಸಭಾಂಗಣದೊಳಗೆ ಕಾಲಿಟ್ಟೆವು.

ಹತ್ತು ನಿಮಿಷಗಳಲ್ಲೇ ಸಮಾರಂಭದ ಹೀರೋಯಿನ್ ಭುವನೇಶ್ವರಿಯವರ ಆಗಮನವಾಯಿತು. ಬಹುದಿನಗಳ ನಂತರದ ಭೇಟಿ ಸಹಜವಾಗಿಯೇ ಎಲ್ಲರಲ್ಲೂ ಸಂತಸ ಸಂಭ್ರಮಗಳು ಉಕ್ಕುವಂತೆ ಮಾಡಿತು. ಅನಂತರ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಶ್ರೀಮತಿ ವೈದೇಹಿಯವರು ಬಂದರು. ಅನೇಕ ವರ್ಷಗಳ ಹಿಂದೆ ವೈದ್ಯ ಮತ್ತು ನಾನು ಉಡುಪಿಗೆ ಹೋಗಿದ್ದಾಗ ಕಿದಿಯೂರು ಹೋಟೆಲಿನಲ್ಲಿ ನಡೆದ ಸಮಾರಂಭವೊಂದರಲ್ಲಿ ಈ ಖ್ಯಾತ ಲೇಖಕಿಯವರನ್ನು ಭೇಟಿ ಮಾಡಿದ್ದೆ. ಈಗ ಅವರೊಂದಿಗೆ ಬಹು ವಿಶ್ವಾಸದ ಮಾತುಕತೆ ನಡೆಯಿತು. ಅಭಿನಂದನಾ ಗ್ರಂಥವನ್ನು ನಮ್ಮ ಅಪರಂಜಿ ಬಳಗದವರೇ ಆದ ಶ್ರೀ ರಾಮನಾಥ್ ಪ್ರಕಟಿಸಿದ್ದರು. ಅವರು ಸಭಾಂಗಣ ಪ್ರವೇಶಿಸಿದಾಗ ಅವರು ಧರಿಸಿದ್ದ ಶೆರ್ವಾನಿ




ಎಲ್ಲರ ಕಣ್ಣು ಕೋರೈಸುವಂತಿತ್ತು. ''ದೃಷ್ಟಿ ತೆಗೆಸಬೇಕಾಗುತ್ತೆ ರಾಮನಾಥ್'' ಅಂತ ನಾನು ತಮಾಷೆ ಮಾಡಿದೆ. ಉಡುಪಿಯಿಂದ ಬಂದಿದ್ದ ಬಹು ನಿಕಟ ಮಿತ್ರರಾದ ಗೋಪಾಲಭಟ್ಟರು ಬಂದು ಕೈ ಕುಲುಕಿ, ಅಪರಂಜಿ ಪತ್ರಿಕೆ ತಮ್ಮ ಹಲವು ಮಿತ್ರರಿಗೆ ತಲುಪುತ್ತಿಲ್ಲದ ವಿಷಯ ತಿಳಿಸಿದರು. ಪತ್ರಿಕೆಯನ್ನು ಮಿಸ್ ಮಾಡುವವರೂ ಇದ್ದಾರಲ್ಲ ಅಂತ ಸಂತಸವಾಯಿತು.

ಅಲ್ಲಿ ನೆರೆದಿದ್ದ ಅಭಿಮಾನಿಗಳನ್ನು ನೋಡಿದಾಗ ಭುವನೇಶ್ವರಿಯವರು ಎಂತಹ ಸ್ನೇಹಜೀವಿ ಎಂಬುದು ಬಹು ಸ್ಪಷ್ಟವಾಗುತ್ತಿತ್ತು. ಅಭಿನಂದನಾ ಸಮಿತಿಯ ಎಲ್ಲ ಸದಸ್ಯರೂ ಒಂದು ಟೀಮಿನಂತೆ ಕೆಲಸಮಾಡಿ ಬಹು ಅಚ್ಚುಕಟ್ಟು ಸಮಾರಂಭವನ್ನು ನಿಯೋಜಿಸಿದ್ದರು. ಕಾರ್ಯಕ್ರಮದ ಎಲ್ಲ ಭಾಷಣಗಳೂ ನಿಗದಿತ ಸಮಯದಲ್ಲೇ ಮುಕ್ತಾಯ ಗೊಳ್ಳುತ್ತಿದುದರಿಂದ ಸಭೆಯಲ್ಲಿ ಸಂತಸ ತೃಪ್ತಿಗಳು ತುಂಬಿದ್ದವು.

ಸಭೆಯ ನಂತರದ ಊಟದ ವ್ಯವಸ್ಥೆಯನ್ನು ಮರೆಯುವಂತೆಯೇ ಇಲ್ಲ. ಅವರು ಬಡಿಸಿದ ಮಂಡಿಗೆ, ಅದರ ಜೊತೆಗಿದ್ದ ಮಾವಿನ ಹಣ್ಣಿನ ಸೀಕರಣೆ, ಇವುಗಳಿಗೆ ನಾನು ಅಂದಿನ ಭೋಜನದ ತಿನಿಸುಗಳಲ್ಲಿ ಅಗ್ರಸ್ಥಾನವನ್ನು ಕೊಟ್ಟುಬಿಟ್ಟೆ. ಊಟದ ನಂತರ ಭುವನೇಶ್ವರಿ ದಂಪತಿಗಳನ್ನು ಬೀಳ್ಕೊಟ್ಟು ಕಾಪು ಸೇರಿದಾಗ ರಾತ್ರಿ ಹನ್ನೊಂದಾಗಿತ್ತು.

ಭುವನೇಶ್ವರಿಯವರು ಅಪರಂಜಿಗೆ ಈ ಕಳೆದ ಮೂರು ದಶಕಗಳಲ್ಲಿ ನಿರಂತರವಾಗಿ ಲೇಖನಗಳನ್ನು ಬರೆದು ಅಪರಂಜಿ ಪತ್ರಿಕೆಯ ಮೌಲ್ಯವನ್ನು ಹೆಚ್ಚಿಸಿದ್ದಾರೆ. ವೃತ್ತಿ ಜೀವನದಿಂದ ನಿವೃತ್ತರಾಗಿ ತಮ್ಮ ಪ್ರವೃತ್ತಿಯಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಳ್ಳಲು ಸನ್ನದ್ಧರಾಗುತ್ತಿರುವ ಈ ಸಂಧ್ಯಾಕಾಲದಲ್ಲಿ ಭುವನೇಶ್ವರಿಯವರಿಗೆ ಅಭಿಮಾನಿಗಳು ಒಂದು ಅಭಿನಂದನಾ ಗ್ರಂಥವನ್ನು ಪ್ರಕಟಿಸಿ, ಒಂದು ಸಾರ್ವಜನಿಕ ಸಮಾರಂಭವನ್ನು ಏರ್ಪಡಿಸಿದ್ದು ಬಹು ಸೂಕ್ತ. ಭುವನೇಶ್ವರಿಯವರ ಜೀವನೋತ್ಸಾಹ, ಸೃಜನಶೀಲತೆ ಇವೆಲ್ಲಾ ಇನ್ನು ಮುಂದೆಯೂ ಲೇಖನಗಳ ಮೂಲಕ ಹರಿದು ಬಂದು ನಮ್ಮನ್ನೆಲ್ಲಾ ರಂಜಿಸಲಿ ಎಂಬುದೇ ನನ್ನ ಹಾರೈಕೆ.

**ಎಂ. ಶಿವಕುಮಾರ್**

# ಕನ್ನ ಕೊರೆಯಲು ಜನಿವಾರದಲ್ಲಿ ಅಳೆಯುವವರು ಬ್ರಾಹ್ಮಣರಾ?

**- ಎಸ್.ಆರ್. ವಿಜಯಶಂಕರ**

**ಮಾ**ತು ಹೀಗೆ ತಿರುಗೀತೆಂದು ನಾನು ಅಂದುಕೊಂಡಿರಲಿಲ್ಲ.

ಇದ್ದಕ್ಕಿದ್ದಂತೆ ಪೊಮ್ಮಚ್ಚ ''ಬ್ರಾಹ್ಮಣರೆಲ್ಲಾ ಬಿರ್‌ಸೇರಾ?'' ಎಂದು ಅರ್ಥ ತುಳು ಸೇರಿಸಿ ಕೇಳಿಬಿಟ್ಟಿದ್ದ. 'ಬಿರ್‌ಸೇರಾ' ಅಂದರೆ ಗಟ್ಟಿಗರೇ? ಬುದ್ಧಿವಂತರೇ? ಎಂಬ ಸಾಮಾನ್ಯ ಅರ್ಥ ಇದ್ದರೂ, ವೀರರೇ? ಧೈರ್ಯಶಾಲಿಗಳೇ? ಎಂಬುದು ಮೂಲಾರ್ಥ.

''ಇದಕ್ಕೆಲ್ಲಾ ನಾನು ಉತ್ತರ ಕೊಡುವುದಿಲ್ಲ. ನಿನ್ನ ಮಾತಲ್ಲಿ ನೂರು ಸ್ಟೇಟ್‌ಮೆಂಟ್‌ಗಳಿರುತ್ತವೆ. ಅದಕ್ಕೊಂದು ಆಧಾರವೂ ಇಲ್ಲ, ಅರ್ಥವಿವರಣೆಯೂ ಇಲ್ಲ. ಇದಕ್ಕೆಲ್ಲಾ ಉತ್ತರ ಹೇಳಲು ನನಗೇನು ಬೇರೆ ಕೆಲಸ ಇಲ್ಲವೇ?'' ಎಂದ ಅದ್ರಾಮ.

''ನಿನಗೆ ನನ್ನ ಟ್ಯಾಲಂಟೇ ತಿಳಿಯುವುದಿಲ್ಲ. ನಿನ್ನ ದಾರಿ ನಿನಗೆ, ನನ್ನ ದಾರಿ ನನಗೆ. ನಾವಿನ್ನು ಇಂತಹ ವಿಚಾರ ಮಾತಾಡೋದೇ ಬೇಡ'' ಎಂದ ಪೊಮ್ಮ.

ಕಬ್ಬನ್ ಪಾರ್ಕಿಗೆ ಬೆಳಗ್ಗೆ ಕಾಲುನಡೆಯಲ್ಲಿ ಒಂದು ರೌಂಡ್ ಹಾಕಿ ಅಲ್ಲಿಂದ ಚಾಲುಕ್ಯ ಹೋಟೆಲ್‌ಗೆ ಹೋಗಿ ರವಾದೋಸೆ ತಿಂದು ಮನೆಗೆ ಹೋಗುವುದೆಂದು ಭಾನುವಾರ ಬೆಳಗ್ಗೆ ಜೊತೆಯಾದ ಸ್ನೇಹಿತರೊಳಗೆ ಇಷ್ಟು ಬೇಗ ಇಂತಹ ಮನಸ್ತಾಪ ಯಾಕೆ ಎಂದು ನನಗೆ ದಿಗಿಲಾಯಿತು. ಇವರಿಬ್ಬರೂ ಜಗಳಾಡಿದರೆ ಭಾನುವಾರ ಬೆಳಗ್ಗೆಯ ಮೂಡೇ ಹಾಳಾಗುತ್ತದೆ.

ಪಂಚಾಯಿತಿದಾರನ ಸ್ಟೈಲಿನಲ್ಲಿ 'ಇಂತಹದ್ದಕ್ಕೆಲ್ಲ ಈಗ ಜಗಳ ಯಾಕೆ? ಕರ್ನಾಟಕದ ಜಾತಿ ರಾಜಕಾರಣದ ಬಗ್ಗೆ ಮಳೆಗಾಲದ ಹೊಳೆ ಹಾಗೆ ಹರಿಯುತ್ತಿದ್ದ ನಿಮ್ಮ ಮಾತು, ಬೆಂಗಳೂರಿನಲ್ಲಿ ಕಾವೇರಿ ವಾಟರ್ ಸಪ್ಲೈ ಮಾಡುವ ನಲ್ಲಿ ನೀರಿನ ಹಾಗೆ ಗೊರಗೊರ ಸದ್ದು ಮಾಡುತ್ತಾ ನಿಂತೇ ಹೋಯಿತಲ್ಲಾ' ಎಂದೆ.

'ನೋಡಪ್ಪಾ ಭಾರತದಲ್ಲಿ ಛಪ್ಪನ್ನೈವತ್ತಾರು ಸಾವಿರ ಜಾತಿಗಳಿದ್ದರೂ ಅವರೆಲ್ಲರೂ ಸ್ಪರ್ಧಿಸುವುದು ಒಂದೇ ಒಂದು ಜಾತಿಯೊಂದಿಗೆ. ಅದೇ ಬ್ರಾಹ್ಮಣ ಜಾತಿ. ಎಲ್ಲರಿಗೂ ಒಂದೋ ಬ್ರಾಹ್ಮಣ ಜಾತಿ ಹಾಗಾಗಬೇಕು. ಇಲ್ಲಾ ಅವರಿಂದ ಮೇಲಾಗಬೇಕು. ಅಂತಹ ದೊಡ್ಡ ಬಿರಸತ್ತಿಗೆ ಬ್ರಾಹ್ಮಣರ ಹತ್ತಿರ ಏನಿದೆಯಪ್ಪಾ? ಅವರೇನು ದೊಡ್ಡ ಬಿರುಸರಾ? ಅಂತ ನಾನು ಕೇಳಿದ್ದರಲ್ಲಿ ತಪ್ಪೇನು?' ಎಂದು ಪೊಮ್ಮ ತನ್ನ ಫಿರ್ಯಾದು ಹೇಳಿದ.

''ಅಲ್ಲಾ, ನೀನೇ ಹೇಳೋ ಈ ಪೊಮ್ಮನಿಗೆ. ಸಾರ್ವಜನಿಕ ಸ್ಥಳದಲ್ಲಿ ಜಾತಿ ಬಗ್ಗೆ ಮಾತನಾಡುತ್ತಾನೆ. ಯಾರಾದರೂ ಕೇಳಿದರೆ ಏನೆಂದುಕೊಳ್ಳುತ್ತಾರೆ? ನಾನು ಮಾತನಾಡಿದರೆ ಇನ್ನೂ ಅಪಾಯ. ನಮ್ಮನ್ನೆಲ್ಲಾ ಹಿಂದೂ ವಿರೋಧಿ, ದೇಶ ವಿರೋಧಿ ಪಟ್ಟಿಯಲ್ಲಿ ಸೇರಿಸುತ್ತಾರೆ. ಅಂತಹದರಲ್ಲಿ ನಾನೇನಾದರೂ ಮಾತನಾಡಲು ಹೊರಟರೆ ದೇವರೇ ಗತಿ. ಮೆತ್ತಗೆ ಮಾತಾಡು ಎಂದರೆ ಈ ಪೊಮ್ಮ ದನಿಯೇರಿಸುತ್ತಾನೆ. ಮಾತೆತ್ತಿದರೆ ಇವನ ಟ್ಯಾಲೆಂಟ್ ಅಂತೆ. ಇವನಿಗೆ

ಮಾತ್ರ ಟ್ಯಾಲೆಂಟ್ ಇರೋದಾ? ನಮಗ್ಯಾರಿಗೂ ಟ್ಯಾಲೆಂಟ್ ಇಲ್ವಾ? ಇವನ ಟ್ಯಾಲೆಂಟ್ ನನಗೆ ಅರ್ಥವಾಗುವುದಿಲ್ಲ ಎಂದಾದರೆ ನನ್ನ ಟ್ಯಾಲೆಂಟ್ ಅವನಿಗೆ ಗೊತ್ತುಂಟಾ? ಎಂದು ಅದ್ರಾಮ ತನ್ನ ಡಿಫೆನ್ಸ್ ಸ್ಟೇಟ್‌ಮೆಂಟ್ ಮಂಡಿಸಿದ.

ನನಗೆ ಪೀಕಲಾಟಕ್ಕೆ ಇಟ್ಟುಕೊಂಡಿತು. ಇದರಲ್ಲಿ ವೈಯಕ್ತಿಕ, ಸಾರ್ವತ್ರಿಕ, ಚಾರಿತ್ರಿಕ, ಧಾರ್ಮಿಕ, ಜಾತಿ ಹಾಗೂ ರಾಜಕೀಯ ಎಲ್ಲಾ ಸೇರಿ ರಾತ್ರಿ ಒಂಭತ್ತು ಗಂಟೆಯ ನಮ್ಮ ಟಿ.ವಿ. ಚರ್ಚೆಗಳ ಹಾಗೆ ಎಲ್ಲಿಂದ ಪ್ರಾರಂಭಿಸಿದ್ದು, ಏನು ಹೇಳುವುದು ಎಂಬುದೇ ಗೊತ್ತಾಗದ ಹಾಗೆ ಆಯಿತು. ಅರ್ಣಾಬ್ ಗೋಸ್ವಾಮಿ ಹಾಗೆ 'ಇಂಡಿಯಾ ವಾನ್ಸ್‌ಟು ನೋ' ಎಂದು ಘರ್ಜಿಸಿ ತನ್ನ ಧ್ವನಿ ಶಕ್ತಿಯಿಂದಲೇ ಎಲ್ಲಾ ವಾದ ಗೆದ್ದು ಸಮಸ್ತಕ್ಕೂ ಪರಿಹಾರ ಸೂಚಿಸುತ್ತೇನೆ ಎಂಬ ಹಾಗೂ ಇಲ್ಲ. ನಿನ್ನದು ಏನಪ್ಪ ಎಂದು ಒಬ್ಬನನ್ನು ಕೇಳಿದರೆ ಇಬ್ಬರೂ ಒಟ್ಟಿಗೆ ಮಾತನಾಡಿ ನಮ್ಮ ಲೋಕಸಭೆ ಹಾಗಾದರೆ ಇನ್ನೂ ಕಷ್ಟ

ಹೀಗಾಗಿ ವಾಕಿಂಗ್ ಮಾಡುವಾಗಲೇ ಮೆಲ್ಲಗೆ ದೇವೇಗೌಡರ ಸ್ಟೈಲಿನಲ್ಲಿ ಪೊಮ್ಮನ ಹೆಗಲಿಗೆ ಕೈಹಾಕಿ, ಅದ್ರಾಮನ ಕೈ ಹಿಡಿದುಕೊಂಡು 'ವಿಷಯ ಏನು?' ಅಂತ ಕೇಳಿದೆ.

ನೋಡಯ್ಯಾ, ಮುಖ್ಯ ಮಂತ್ರಿಯವರು ವಿವರಿಸಿದ ಹೊಸ ಖಾನೇಶುಮಾರಿ ಅಂದರೆ ಸೆನ್ಸಸ್ ಓದಲಿಲ್ಲವಾ? ಅದರಲ್ಲಿ ಈ ತನಕ ರಾಜ್ಯದಲ್ಲಿ ದೊಡ್ಡ ಜಾತಿಗಳು ಎಂದು ತಿಳಿದಿದ್ದ ಲಿಂಗಾಯಿತರು ಶೇಕಡಾ 17 ಹಾಗೂ ಒಕ್ಕಲಿಗರು ಶೇಕಡಾ 12 ಎಂಬುದು ತಲೆಕೆಳಗಾಗಿ, ಅವರೀಗ ಕ್ರಮವಾಗಿ 9.8 ಹಾಗೂ 8.16ರಕ್ಕೆ ಇಳಿಯಲಿಲ್ಲವಾ? ಎಂದ ಪೊಮ್ಮ. ಹೌದು ಅದರಿಂದ ಈಗೇನು? ಎಂದೆ. ಹಾಗೆಯೇ ಭಾರತದಲ್ಲಿ ಬ್ರಾಹ್ಮಣರು 6.1 ಎಂದು ತಿಳಿದಿದ್ದರು. ಈಗ ಕರ್ನಾಟಕದ ಖಾನೇಶುಮಾರಿ ಲೆಕ್ಕಾಚಾಕದಲ್ಲಿ ನಮ್ಮಲ್ಲಿರುವ ಬ್ರಾಹ್ಮಣರು ಕೇವಲ 13 ಲಕ್ಷ. ಅಂದರೆ ಆರುಕೋಟಿ ಕನ್ನಡಿಗರಲ್ಲಿ ಕೇವಲ ಶೇಕಡಾ 2.1 ರಷ್ಟು ಮಾತ್ರ. ಒಟ್ಟು ಲೆಕ್ಕಾಚಾರದಲ್ಲಿ ಇವರೇನು ದೊಡ್ಡ ಸಂಖ್ಯೆಯ ಎಂದದ್ದಷ್ಟೆ ಎಂದ ಪೊಮ್ಮ.

ಹಾಗಾದರೆ ನಿಮ್ಮ ಚರ್ಚೆ ಯಾಕೆ? ಎಂದೆ. ಅದಕ್ಕೆ ಪೊಮ್ಮ, ನೋಡೋ ಈ ಅದ್ರಾಮ, ಭಾರತದ ಪ್ರಗತಿಪರ ಚಿಂತನೆಯ ಬೀಜರೂಪದಂತೆ ಇದ್ದವರೇ ಬ್ರಾಹ್ಮಣರು. ಹೊಸ ವಿಚಾರ ಎಲ್ಲಾ ಅವರಿಂದಲೇ ಬಂದದ್ದು ಎಂಬ ಹಾಗೆ ಹೇಳ್ತಾನೆ. ನಾಲ್ಕು ಬ್ರಾಹ್ಮಣರು ಕಮ್ಯೂನಿಸ್ಟರಾದ್ರು ಅಂತ ಕಾರ್ಲ್‌ಮಾರ್ಕ್ಸ್ ಬ್ರಾಹ್ಮಣ ಎಂಬ ಹಾಗೆ ಮಾತಾಡ್ತಾನೆ. ವಿವೇಕಾನಂದ ಬ್ರಾಹ್ಮಣರಾ? ಆನಂದಕುಮಾರಸ್ವಾಮಿ ಬ್ರಾಹ್ಮಣರಾ? ಅದೆಲ್ಲಾ ಯಾಕಪ್ಪಾ, ಮಹಾತ್ಮಗಾಂಧಿ ಬ್ರಾಹ್ಮಣರಾ? ಬನಿಯಾ ಅಲ್ವಾ? ಎಂದ.

ನಾನು ಹಿಡಿದಿದ್ದ ಕೈಯ್ಯನ್ನು ಅಲ್ಲಿಂದಲೇ ಜಗ್ಗಿ ಅದ್ರಾಮ ಹೇಳಿದ. ''ಇದರಲ್ಲಿ ದೊಡ್ಡ ಬಿರಸತ್ತಿಗೆ ಎಂತದುಂಟು? ನಮಗೆ ಸಾಹಿತ್ಯದ ನೋಬೆಲ್ ಪ್ರಶಸ್ತಿ ತಂದ ರಬೀಂದ್ರನಾಥ ಠಾಗೂರರು ಯಾರು? ಅವರು ಬಂಗಾಳದ ಪಿರಾಲಿ ಬ್ರಾಹ್ಮಣರ ಜಾತಿ ಅಲ್ವಾ? ನೀನು ಹೇಳ್ತಿ ಅಲ್ವಾ ಓದು ಓದು ಅಂತ ವಿಮರ್ಶೆ ಬರೆಯುವ ವಿಜಯಶಂಕರ ಅವರ ಬರಹಗಳನ್ನ. ಅದರಲ್ಲಿ ಅವರು ಹೇಳಲಿಲ್ಲವಾ, ಕನ್ನಡದ ನವೋದಯದ ಮೇಲೆ ಪ್ರಭಾವ ಬೀರಿದ ಮುಖ್ಯರಲ್ಲಿ ಒಬ್ಬರು ಠಾಗೂರರು ಅಂತ'' ಎಂದ.

''ನೀನು ಮಾತ್ರ ಆ ವಿಮರ್ಶೆ ಓದಿದ ಹಾಗೆ ಮಾತಾಡಬೇಡ. ಅವರು ಹೇಳಿದ ಉಳಿದ

ಮೂವರು ಯಾರು? ಸ್ವಾಮಿ ವಿವೇಕಾನಂದ, ಮಹರ್ಷಿ ಅರವಿಂದರು ಮತ್ತೆ ಆನಂದ ಕುಮಾರಸ್ವಾಮಿ. ಅವರು ಯಾರು?'' ಎಂದ ಪೊಮ್ಮೆಚ್ಚ

ಅಯ್ಯೋ ಮಾರಾಯ್ರೆ. ಆ ವಿಮರ್ಶೆ ಸುದ್ದಿ ಈಗ ಯಾಕೆ? ವಿಷಯಕ್ಕೆ ಬನ್ರೋ. ನೀವು ಏತಿ ಅಂದ್ರೆ ಪ್ರೇತಿ ಅನ್ನೋ ಹಾಗೆ ಮಾತಾಡ್ತೀರಲ್ಲಾ ಎಂದೆ. ತುಸು ಮೆತ್ತಗಾದ ಅದ್ರಾಮ. ''ನೋಡು ಅಪ್ಪಣ್ಣ, ನನಗೆ ಪಕ್ಕನೆ ದ.ಕ.ಜಿಲ್ಲೆಯ ಕಾರ್ನಾಡು ಸದಾಶಿವರಾವ್, ಕುದ್ಮಲ್ ರಂಗರಾವ್, ಬಿ.ವಿ.ಕಕ್ಕಿಲಾಯ ಇಂತಹವರೆಲ್ಲಾ ನೆನಪಾಗಿ ಬ್ರಾಹ್ಮಣರಲ್ಲಿ ಹೊಸ ವಿಚಾರ ಹೆಚ್ಚು ಅಂದೆ'' ಅಂತ ಹೇಳಿದ.

ಪೊಮ್ಮನ ಟೆಂಪರ್ ಕಮ್ಮಿ ಆಗಿರಲಿಲ್ಲ. ''ಅಪ್ಪಣ್ಣ ನೀನೇ ಹೇಳು. ರಾಣಿ ಅಬ್ಬಕ್ಕ, ಜೋಕಿಂ ಆಳ್ವ, ಸುಲ್ತಾನ್ ಸೇಟ್ – ಅವರೆಲ್ಲಾ ಯಾರು?'' ಎಂದ. ಇನ್ನೂ ಮತ್ತೆ, ''ಈ ಅದ್ರಾಮಂದು ಎಂತದು? ಅವ ದೇಶಭಕ್ತ ಅಲ್ಲ ಎಂದು ಹೇಳುವವರ್ಯಾರು? ನಾವೀಗ ದಿನಕ್ಕೆ ಐದು ಸಲ, ನಾನು ದೇಶಭಕ್ತ ನಾನು ಭಾರತೀಯ ಅಂತ ಸಾರಬೇಕು. ಇಲ್ಲವಾದರೆ ನಂಬಿಕೆ ಬರುವುದಿಲ್ಲ ಅಂತ ಇವನು ಹೇಳೋದಾ? ಇವನನ್ನು ದೇಶಭಕ್ತ ಅಲ್ಲ ಅಂದವರಾರು? ಬೇಕಾದರೆ ನಾವೆಲ್ಲಾ ಒಟ್ಟಿಗೆ ಕೂತು ಪಾಠ ಕೇಳಿದ ಬಳ್ಳ ಶಂಕರ ನಾರಾಯಣ ಮೇಷ್ಟ್ರ ಸಂಸ್ಕೃತ ಕ್ಲಾಸುಗಳ ಮೇಲೆ ಆಣೆ'' ಎಂದುಬಿಟ್ಟ

ಬಳ್ಳ ಮಾಸ್ಟ್ರ ಹೆಸರು ಕೇಳಿದ್ದೆ ಬಿಸಿಯಾದ ವಾತಾವರಣದಲ್ಲಿ ತಂಗಾಳಿ ಬೀಸಿದ ಹಾಗೆ ಬಿಗು ಕಡಿಮೆಯಾಯಿತು. ಸಿಟ್ಟಿನ ಮೋಡಗಳೆಲ್ಲಾ ಬಳ್ಳ ಮಾಸ್ಟ್ರ ನೆನಪಿನ ಗಾಳಿಗೆ ಹಾರಿಹೋಗಿ ಶುಭ್ರ ಆಗಸದಂತೆ ಮನಸ್ಸು ಪ್ರಫುಲ್ಲಮಾನವಾಯಿತು. ''ಬ್ರಾಹ್ಮಣರ ಜನಿವಾರದ ಶಕ್ತಿಯನ್ನು ಸಣ್ಣದೆಂದು ತಿಳಿಯಬೇಡಿ. ಅದು ಬ್ರಹ್ಮರಾಕ್ಷಸನನ್ನು ಓಡಿಸಲು ಒದಗಿಬರುವ ಹಾಗೆ ಗೋಡೆಗೆ ಕನ್ನ ಕೊರೆಯಲು ಬರುತ್ತದೆ ಎನ್ನಲಿಲ್ಲವಾ? ಅದೇ ಚಾರುದತ್ತ ಶರ್ವಿಲಕ'' ಎನ್ನುತ್ತಾ ಘಕಘಕನೆ ನಗತೊಡಗಿದ ಪೊಮ್ಮ.

ಪೊಮ್ಮನ ನಗುವಿನೊಂದಿಗೆ ವಾತಾವರಣ ಸಂಪೂರ್ಣ ತಿಳಿಯಾಯಿತು. ಈಗ ಎರಡು ನಿಮಿಷ ಮೊದಲು ನಡೆದ ಜಗಳ ನಮ್ಮ ನಡುವೆ ಅಲ್ಲವೇನೋ ಎಂಬ ಹಾಗೆ ಅದ್ರಾಮ, ''ಅದುವೇ ಪೊಮ್ಮೆಚ್ಚ ನೀನು ಹೇಳುದು ಭಾಸನ 'ದರಿದ್ರ ಚಾರುದತ್ತ' ನಾಟಕವಾ?'' ಎಂದ.

ಈಗ ಹೇಳು, ಕೇವಲ ಪಠ್ಯ ಪುಸ್ತಕ ಓದುದು ಯಾರು? ನಾನೋ ನೀನೋ? ಬಳ್ಳ ಮಾಸ್ಟ್ರ ಕ್ಲಾಸಲ್ಲಿ ಇದ್ದುದು ಭಾಸನ 'ದರಿದ್ರ ಚಾರುದತ್ತ' ನಾಟಕ. ನಾವು ಗಿರೀಶ್ ಕಾರ್ನಾಡರ ಉತ್ಸವ ಸಿನಿಮಾ ನೋಡಿ ಆದ ಮೇಲೆ ಸ್ಟಡಿ ಸರ್ಕಲ್‌ನಲ್ಲಿ ಓದಿದೆವಲ್ಲಾ, ಶೂದ್ರಕನ 'ಮೃಚ್ಛಕಟಿಕ' ಆ ನಾಟಕದ ಚಾರುದತ್ತ – ಶರ್ವಿಲಕ'' ಎಂದ ಪೊಮ್ಮ.

ಮುಂದುವರಿದು, ''ಅದೇ ನಿನಗೆ ನೆನಪಿಲ್ಲವಾ. ಚಾರುದತ್ತ ಜಾತಿಯಿಂದ 'ದ್ವಿಜ' ವೃತ್ತಿಯಿಂದ ವೈಶ್ಯ. ಆದರೆ ಆ ನಾಟಕದಲ್ಲಿ ಶರ್ವಿಲಕ ಬ್ರಾಹ್ಮಣ ಎಂದು ಗೊತ್ತಾಗಲು ಅವನಲ್ಲಿರುವ ಬ್ರಾಹ್ಮಣತ್ವದ ಚಿಹೆ ಎಂದರೆ 'ಜನಿವಾರ' ಮಾತ್ರ. ನೆನಪಿಲ್ಲವೇ?'' ಎಂದ ಪೊಮ್ಮ.

''ಶೂದ್ರಕ ಕಾಣಿಸುವ ಉಜ್ಜಯನಿ ನಗರ ಎಂತಹದು ಮಾರಾಯ. ಅಲ್ಲಿ ಒಂದೇ ಜಾತಿಯ, ಒಂದೇ ಜನಾಂಗದ ಜನರು ಇಪುವುದು ಸಾಧ್ಯವಿಲ್ಲ'' ಎಂದೆ ನಾನು.

''ಮೊದ್ರಕ ಕ್ರಿಸ್ತಪೂರ್ವ ಮೂರನೆಯ ಶತಮಾನದಿಂದ ಕ್ರಿಸ್ತಶಕ ಐದನೆಯ ಶತಮಾನದ ನಡುವೆ ಇದ್ದವ ಅಲ್ವಾ? ಹೇಗೆಂದರೂ ಎರಡು ಸಾವಿರ ವರುಷಗಳ ಹಿಂದಿದ್ದ ಉಜ್ಜಯನಿ ನಗರ. ಜಾರ್ಜ್ ಆರ್ವೆಲ್ ಕಳೆದ ಶತಮಾನದಲ್ಲಿ ಬರೆದ ಡೌನ್ ಎಂಡ್ ಔಟ್ ಇನ್ ಪ್ಯಾರಿಸ್ ಎಂಡ್ ಲಂಡನ್ - ಕಾದಂಬರಿಯಲ್ಲಿ ಆ ನಗರಗಳ ವೈಭವಗಳ ಒಳಗೆ ಇರುವ ಅಗೋಚರ ಬಡವರ ಲೋಕದೊಂದಿಗೆ ಉಜ್ಜಯನಿಯ ವಿಟ, ನಟ, ಚೇಟರ ಗುಂಪನ್ನು ಸ್ವಲ್ಪ ಹೋಲಿಸಿ ನಗರಗಳ ತೌಲನಿಕ ಅಧ್ಯಯನ ಮಾಡಬಹುದಲ್ಲ. ಉಜ್ಜಯನಿಯಲ್ಲಿ ಕಳವು ಕೊಲೆ ಜೂಜಾಟ ಗುಲಾಮರ ಮಾರಾಟ ಎಲ್ಲವೂ ಇತ್ತು ಅಲ್ವಾ?'' ಎಂದ ಅದ್ರಾಮ.

''ಅಲ್ಲೇ ನೋಡು ನಿನ್ನ ಬ್ರಾಹ್ಮಣರ ಕತೆ'' ಎಂದ ಪೊಮ್ಮ, ಮುಂದುವರಿದು ''ಶರ್ವಿಲಕ ಯಾರು? ವೇದ ಪಾಠಿಗಳ ಮಗ. ಆದರೆ ಅವನ ಬ್ರಾಹ್ಮಣ್ಯದ ಚಿಹೆ ಜನಿವಾರ ಮಾತ್ರ. ಅವ ಚಾರುದತ್ತನ ಮನೆಯಿಂದ ಆಭರಣ ಕದಿಯಲು ಮಣ್ಣಿನ ಗೋಡೆಗೆ ಕನ್ನ ಹಾಕಿ ಒಳ ಹೋಗಲು ಬೇಕಾದ ತೂತು ಎಷ್ಟು ದೊಡ್ಡದಿರಬೇಕೆಂದು ಅಳತೆ ಮಾಡಲು ಉಪಯೋಗಿಸು ಅಳತೆಯ ಟೇಪು ಅವನ ಜನಿವಾರ. ಚಾರುದತ್ತನ ಮನೆ ಗೋಡೆಗಳು ಎಷ್ಟು ಶಿಥಿಲವಾಗಿವೆ ಎಂಬುದು ಶರ್ವಿಲಕನಿಗೆ ಅಲ್ಲಿ ಕನ್ನ ಹಾಕುವಾಗಲೇ ತಿಳಿಯವುದಿಲ್ಲವಾ?'' ಎಂದ.

''ಶರ್ವಿಲಕನಿಗೆ ಜನಿವಾರ ಕನ್ನ ಕೊರೆಯಲು ಅಳತೆಯ ಸಾಧನವಾದ್ದು ನನಗೆ ನೆನಪೇ ಇರಲಿಲ್ಲ ನೋಡು. ನೀನೀಗ ಹೇಳಿದ ಮೇಲೆ ನೆನಪಿಗೆ ಬಂತು. ಬಳ್ಳ ಮಾಸ್ತು ಇದನ್ನೇ ಅಲ್ವಾ ಹೇಳಿದ್ದು ಪೊಮ್ಮ'' ಎಂದು ದನಿ ಸೇರಿಸಿದ ಅದ್ರಾಮ. ''ಆ ಕನದಲ್ಲೇನೋ ಒಂದು ಡಿಸೈನ್ ಬಗ್ಗೆ ನೀನೊಮ್ಮೆ ಹೇಳಿದ್ದು ಈಗ ಮರೆತಿದೆ'' ಎಂದ.

''ಅದೇ! ಶರ್ವಿಲಕ, ಚಾರುದತ್ತನ ಮನೆ ಗೋಡೆಯಲ್ಲಿ ಕನ್ನ ಕೊರೆಯುವಾಗ ಮಾಡುವ ವಿಚಾರ. ಯಾವ ಆಕಾರದಲ್ಲಿ ಕನ್ನ ಕೊರೆಯಬೇಕೆಂಬ ಅವನ ಚಿಂತನೆ. ಕಮಲ, ಸಿಂಹ, ಹೀಗೆ ವಿವಿಧ ಆಕೃತಿಗಳನ್ನು ನೆನೆಯುತ್ತಾನೆ. ಕನ್ನದ ಆಕೃತಿ ಮಹತ್ವದ ಕುರಿತೂ ಮಾತನಾಡುತ್ತಾನೆ. ಶರ್ವಿಲಕ ಕೇವಲ ಉಪಯೋಗವಾದಿ ಅಲ್ಲ. ಅವನಿಗೆ ಕನ್ನದಲ್ಲೂ ಒಂದು ಕಲಾ ಚಿತ್ರ ಮೂಡಬೇಕು. ಅದು ಕೇವಲ ಮನೆಯೊಳಗೆ ಹೋಗುವ ಅನುಕೂಲಕ್ಕೆ ಗೋಡೆಗೆ ಕೊರೆಯುವ ತೂತು ಮಾತ್ರವಲ್ಲ. ಮಾರನೆದಿನ ಚಾರುದತ್ತ ಆ ಕನ್ನದ ಆಕಾರದಲ್ಲಿದ್ದ ಕಲೆಯನ್ನು ಮೆಚ್ಚುತ್ತಾ ಕಳ್ಳತನವಾದದ್ದನೇ ಮರೆಯುತ್ತಾನಲ್ಲ. ಆಗ ಈ ಅಪ್ಪಣ್ಣ, ''ಚಂದದ ಹೆಣ್ಣು ವಸಂತಸೇನೆಯಂತಹವರು ಒಲಿಯಬೇಕಾದರೆ ಚಾರುದತ್ತನ ಹಾಗೆ ಪೆದ್ದರಾಗಿರಬೇಕು. ಬುದ್ಧಿವಂತರನ್ನು ಕಂಡರೆ ಸುಂದರ ಹೆಣ್ಣುಮಕ್ಕಳು ಲವ್ ಮಾಡುವುದಿಲ್ಲ'' ಎಂದದ್ದು ನೆನಪಿಲ್ಲವಾ? ಆದರೆ ಇಲ್ಲಿ ಮುಖ್ಯವಾದ್ದು ಈ ಬ್ರಾಹ್ಮಣನಿಗೆ ಕನ್ನ ಕೊರೆಯಲು ಜನಿವಾರವೇ ಅಳತೆಯ ಟೇಪು ಎಂಬುದು'' ಎಂದ ಪೊಮ್ಮ.

ಮೃಚ್ಛಕಟಿಕದ ವಸ್ತು ರಾಜ್ಯಕ್ರಾಂತಿ. ಅಲ್ಲಿಯೂ ಜಾತಿ ಎಷ್ಟು ಸೂಕ್ಷ್ಮವಾಗಿ ಬರುತ್ತದೆ. ಅಲ್ವಾ? ನನಗಿದು ಮೊದಲು ಹೊಳೆಯಲೇ ಇಲ್ಲ. ಪೊಮ್ಮೆಚ್ಚ ಯು ಆರ್ ಗ್ರೇಟ್. ನಿನ್ನ ಟ್ಯಾಲೆಂಟನ್ನು ಈಗ ನೋಡು ನಾನು ಗುರುತಿಸುತ್ತೇನೆ'' ಎಂದು ಸಾರಿದ ಅದ್ರಾಮ.

''ಧಾರವಾಡದಿಂದ ಹಿಂತಿರುಗಿದ ಮೇಲೆ ಒಮ್ಮೆ ಈ ಅಪ್ಪಣ್ಣ ಪ್ರೊ. ಕುರ್ತಕೋಟಿಯವರು ವಿವರಿಸಿದ್ದನ್ನು ಹೇಳಿದ್ದು ನೆನಪಿಲ್ಲವಾ?'' ಎಂದ ಪೊಮ್ಮೆಚ್ಚ.

''ಯಾವುದು?'' ಅದ್ರಾಮನ ಪ್ರಶ್ನೆ.

''ಮೈತ್ರೇಯ ವಸಂತಸೇನೆಯ ಮನೆಗೆ ಹೋದಾಗ ಅವಳು ಕುಡಿಯಲು ನೀರು ಕೊಡುವುದಿಲ್ಲ, ಬಹುಶಃ ಜಾತಿ ಹೆದರಿಕೆ ಇರಬೇಕು. ಆಗ ಅಲ್ವಾ, ಮೈತ್ರೇಯ ಆಕ್ಷೇಪಿಸುತ್ತಾ 'ಗಡ್ಡೆಯಿಲ್ಲದ ಕಮಲ, ಮೋಸಮಾಡದ ವ್ಯಾಪಾರಿ, ಕಳವು ಮಾಡದ ಅಕ್ಕಸಾಲಿಗ, ಜಗಳವಾಡದ ಗ್ರಾಮೀಣ ಸಮಾಜ, ಆಸೆಯಿಲ್ಲದ ವೇಶ್ಯೆ ಎಲ್ಲೂ ದೊರೆಯುವುದಿಲ್ಲ' ಎನ್ನುತ್ತಾನೆ'' ಅಂದ ಪೊಮ್ಮ.

''ಅದೇ ಕುರ್ತಕೋಟಿಯವರು ಹೇಳಿದ್ದು. ಒಂದೊಂದು ಜಾತಿಗೆ ಒಂದೊಂದು ದುರ್ಗುಣವನ್ನು ಆರೋಪಿಸುವ ನಮ್ಮ ಸಮಾಜದ ಮನೋಧರ್ಮಕ್ಕೆ ಅನುಗುಣವಾಗಿಯೇ ನಾಟಕಕಾರ ಮಾತನಾಡುತ್ತಾನೆ. ಅದನ್ನೇ ಅಪ್ಪಣ್ಣ ಹೇಳಿದ್ದು ಈಗ ನೆನಪಾಯಿತು'' ಎಂದ ಅದ್ರಾಮ.

''ಸರಿಯಾಗಿ ಹೇಳಿದೆ. ನಮ್ಮ ಈ ಸಮಾಜದ ಕ್ರಮದಲ್ಲಿ ಜಾತಿಗೊಂದು ದುರ್ಗುಣ ಆರೋಪಿಸೋದು ಬಿಟ್ಟು ನೀನು ಹೊಗಳಲು ಹೊರಟರೆ ನಾನು ಬ್ರಾಹ್ಮಣರೇನು ಬಿರ್‌ಸೇರಾ ಅಂತ ಕೇಳಿದ್ದರಲ್ಲಿ ಏನು ತಪ್ಪು?'' ಎಂದ ಪೊಮ್ಮೆಚ್ಚ.

ಆಗ ನಾನು ಅಲರ್ಟ್ ಆದೆ. ''ಈಗ ಬಿರ್‌ಸೇರ್ ಸುದ್ದಿ ಇಲ್ಲಿಗೆ ಸಾಕು. ಮಾತಿನ ಗೌಜಿಯಲ್ಲಿ ಎರಡು ರೌಂಡ್ ವಾಕಿಂಗ್ ಮುಗಿದದ್ದೇ ಗೊತ್ತಾಗಲಿಲ್ಲ. ಜಗಳಾಡಿದ ತಪ್ಪಿಗೆ ನನ್ನ ರವಾದೋಸೆ ಕಾಫಿಯ ಬಿಲ್ಲನ್ನು ನೀವಿಬ್ಬರೂ ಹಂಚಿಕೊಳ್ಳಿ. ಈಗ ಚಾಲುಕ್ಯದ ಕಡೆ ಹೋಗೋಣ. ಇನ್ನು ತಡವಾದರೆ ದೋಸೆ ಮುಗಿದು ಮಧ್ಯಾಹ್ನದ ಊಟ ಶುರುವಾಗುತ್ತೆ'' ಎಂದೆ.

ದೋಸೆ ಮುಗಿದರೆ ಎಂಬ ಭಯ ಗೋಚರಿಸಿದ್ದೇ ಮೂವರೂ ಒಮ್ಮೆಲೇ ಮಾತು ನಿಲ್ಲಿಸಿ ವೇಗವಾಗಿ ಚಾಲುಕ್ಯದ ಕಡೆಗೆ ನಡೆಯತೊಡಗಿದೆವು.

**ಅಪರಂಜಿ ಚಂದಾದಾರರ ಸಂಖ್ಯೆಯನ್ನು ಇಮ್ಮಡಿಗೊಳಿಸಿ!**

**ಅದು ಸುಲಭ, ನೀವೇ ಮಾಡಬಹುದು!**

ಹೇಗೆ?

ಇನ್ನೊಬ್ಬ ಚಂದಾದಾರರನ್ನು ಹುಡುಕಿಕೊಡಿ

ನಿಮ್ಮ ಸ್ನೇಹಿತರನ್ನು ಅಪರಂಜಿ ಓದುಗರನ್ನಾಗಿ ಮಾಡಿ

**ಅಷ್ಟು ಸುಲಭ!**

ವಾರ್ಷಿಕ ಚಂದಾ: ರೂ. 100/-

ಆಜೀವ ಸದಸ್ಯತ್ವ: ರೂ. 750/-

**ಇಂದೇ ಈ ಕೆಲಸ ಪ್ರಾರಂಭಿಸಿ**

# ಮೂಷಿಕ ಬಂಧನ

**- ನಂನಾಗ್ರಾಜ್**

> ಇಲಿಯ ಜತೆಗೆ ಬೋನೂ ಹೋಯಿತು..

**ಒಂ**ದು ಮುಂಜಾನೆ ನಮ್ಮನೆಯಲ್ಲಿ ಬಾಂಬ್ ಬಿದ್ದಿತ್ತು. ಕೆಲಸದವಳು ಕಸಗುಡಿಸುವಾಗ 'ಅಮ್ಮಾವ್ರೇ ಇಲಿ ಪಿಕ್ಕೆ' ಎಂದು ಕೂಗಿದ್ದಳು. ಕ್ಷಣಾರ್ಧದಲ್ಲಿ ಮನೆಯವರಲ್ಲೆಲ್ಲ ಆಶ್ಚರ್ಯ, ಆತಂಕ ಹಾಗೂ ದಿಗಿಲು ಮನೆ ಮಾಡಿತ್ತು. ಶುರುವಾಗಿತ್ತು ಕಸರತ್ತು. ಮೂಷಿಕದ ಚಲನವಲನಗಳನ್ನು ಕಣ್ಣಲ್ಲಿ ಕಣ್ಣಿಟ್ಟು ಗಮನಿಸಿ ಮಾಹಿತಿಯನ್ನು ಹಂಚಿಕೊಳ್ಳುವುದು, ಆಹಾರ ಪದಾರ್ಥಗಳ ಅಭೇದ್ಯ ಸುರಕ್ಷತೆ, ವಾರ್ಡ್‌ರೋಬ್ ಬಾಗಿಲುಗಳ ಬಿಗಿ ಭದ್ರತೆ (!) ಇವೆಲ್ಲವೂ ಒಮ್ಮತದಿಂದ ಆಗಿದ್ದರೆ, ಇಲಿಯನ್ನು ಬಂಧಿಸುವ ಅಥವಾ / ಹಾಗೂ ಸಂಹರಿಸುವ ಜವಾಬ್ದಾರಿ ನನ್ನದೆಂಬ ನಿರ್ಧಾರ ನನ್ನವಳ ಹಾಗೂ ಅಮ್ಮಸಮ್ಮತವಾಗಿತ್ತು.

ಡ್ಯಾಮೇಜ್ ಅಸೆಸ್‌ಮೆಂಟ್ ಮಾಡಿದಾಗ ಮೇಲ್ನೋಟಕ್ಕೆ ನನ್ನವಳ ಬ್ಲೌಸ್, ಅಮ್ಮನ ಶಾಲು ಹಾಗೂ ನನ್ನ ಜೀನ್ಸ್‌ಪ್ಯಾಂಟ್ ಗಾಯಾಳುಗಳಾಗಿದ್ದದ್ದು ಕಂಡುಬಂದಿತ್ತು. ಬೆಟ್ಟ ಕೊರೆಯುವ ಖದೀಮನಿಗೆ ಬಟ್ಟೆ ಯಾವ ಲೆಕ್ಕ? ಇಂದಿನ ಯುವಕರು ಹರಿದ ಪ್ಯಾಂಟ್ ಧರಿಸಿದರೆ ಅದೊಂದು ಫ್ಯಾಷನ್ ಸ್ಟೇಟ್‌ಮೆಂಟ್ ಆಗುತ್ತೆ. ನಾನು ಅದನ್ನು ಹಾಕಿಕೊಳ್ಳುವುದೂ ನಮ್ಮ ಮನೆಯಲ್ಲಿ ಇಲಿ ಸಂಭ್ರಮಿಸುತ್ತಿದೆ ಎಂಬ ಬೋರ್ಡ್ ತಗಲಿಹಾಕಿಕೊಳ್ಳುವುದೂ ಒಂದೇ!

ಅಟ್ಟ ಹತ್ತಿ ಬೋನ್ ಇಳಿಸಿ ಶುದ್ಧ ಮಾಡಿದೆ. ಕಾಯಿಚೂರು ಸಿಕ್ಕಿಸುವಾಗ ಸರಕ್ಕನೆ ಟ್ರ್ಯಾಪ್ ಡೋರ್ ಮುಚ್ಚಿಕೊಂಡು ಬೆರಳುಗಳಿಗೆ ಪೆಟ್ಟಾಯಿತು. ಹೇಗೋ ಸಿಕ್ಕಿಸಿ ಒಂದು ಆಯಕಟ್ಟಿನ ಜಾಗದಲ್ಲಿಟ್ಟೆ. ಮರುದಿನ ಬೆಳಗ್ಗೆ ಗುಡ್ ಮಾರ್ನಿಂಗ್‌ಗಳ ಬದಲು ಬಿತ್ತಾ? ಬಿತ್ತಾ? ಪ್ರಶ್ನೆಗಳು! ಕಾಯಿಚೂರು ನಾಪತ್ತೆ. ತೆರೆದ ಬೋನ್ ಬಾಗಿಲು ತೆರೆದೇ ಇತ್ತು. ಆಹಾರ ಸಿಕ್ಕಿಸಿದ ಮೇಲೆ ಹ್ಯಾಂಡಲ್ ಕೊನೆಯನ್ನು ಮೇಲಿನ ಕೊಂಡಿಯ ತುತ್ತತುದಿಯಲ್ಲಿ ಕೂರಿಸುವುದು ಒಂದು ಕಲೆಯೇ ಸರಿ. ಎರಡನೆಯ ದಿನ ದರ್ಶಿನಿಯಿಂದ ತಂದಿದ್ದ ವಡೆ ಚೂರನ್ನು ಸಿಕ್ಕಿಸಿದೆ. ಇಲಿ ಮುಟ್ಟಿಯೇ ಇರಲಿಲ್ಲ, ಬೆಳ್ಳುಳ್ಳಿ ವಾಸನೆ ಆಗಿಬರಲಿಲ್ಲವೋ ಏನೋ? ಮಡಿವಂತ ಇಲಿ ಇರಬಹುದು!

'ರೀ, ರೀ, ಇಲಿ ನಮ್ಮ ಬೆಡ್‌ರೂಂಗೆ ಹೋಯ್ತು ನಾನು ನೋಡ್ದೆ. ಒಳಗೆ ಹೋಗಿ ಬೋಲ್ಟ್ ಹಾಕ್ಕೊಂಡು ಅದನ್ನು ಸಾಯಿಸಿದ ಮೇಲೆ ಹೊರಗೆ ಬನ್ನಿ' - ನನ್ನವಳ ಸುಗ್ರೀವಾಜ್ಞೆ. ಆರು ಇಂಚು ಮೆಟ್ಟಲು ಹತ್ತಕ್ಕೇ ಮುಲುಗುವ ಇವಳು. 36 ಇಂಚು ಕೌಂಟರ್ ಮೇಲೆ ಕುಕ್ಕರ್ ಪಕ್ಕ ಕುಕ್ಕರಗಾಲಲ್ಲಿ ಹೇಗೆ ಕುಕ್ಕರಿಸಿದಳು? ಭಲೆ, ಮೋಟಿವೇಟರ್ ಮೂಷಿಕ!

ತಕ್ಷಣ ಕಣ್ಣಿಗೆ ಬಿದ್ದದ್ದು ಅಮ್ಮನ ಮಡಿಕೋಲು. ಅವರ ಪ್ರತಿಭಟನೆಗೆ 'ಅಮ್ಮ, ಇದು ಮರದಕೋಲು. ನಾನ್‌ಕಂಡಕ್ಟರ್ ಆಫ್ ಮೈಲಿಗೆ' ಎಂದು ಉತ್ತರಿಸಿ ಬೆಡ್‌ರೂಂ ಸೇರಿ ಬೋಲ್ಟ್ ಹಾಕಿಕೊಂಡೆ. ಬೋಲ್ಟ್ ಹಾಕಿದ ಬೆಡ್‌ರೂಂನಲ್ಲಿ ನಾನು ಮತ್ತು ಇಲಿ. ಈ ಸಮಯ

ವಿಕಾರಮಯ ಅಂದ್ಕೊಂಡೆ. ಕಣ್ಣಲಿ ಕಣ್ಣಿಟ್ಟು ರೂಮಿನ ಒಂದೊಂದು ಇಂಚನ್ನೂ ಅವಲೋಕಿಸಿದಾಗ ಕಂಡ ವಸ್ತುಗಳು ಅಷ್ಟಿಷ್ಟಲ್ಲ, ಬೆಡ್‌ರೂಂ ಹಾಗಿರಲಿ, ಬೆಡ್‌ಗೇ ರೂಂ ಸಾಲದಾಗಿತ್ತು! ಮಂಚದ ಕೆಳಗೆ ಕಟಕಟ ಶಬ್ದ ಮಾಡಿದೆ. ಇಲಿ ಗೋಡ್ರೇಜ್ ಬೀರುವಿನ ಕೆಳಗೆ ನುಸುಳಿತು. ಅಲ್ಲಿ ಶಬ್ದ ಮಾಡಿದಾಗ ಸೈಡ್ ಟೇಬಲ್ ಅಡಿಯಲ್ಲಿ ಹೋದ ಹಾಗೆ ಅನಿಸಿತು. ಸರಕ್ಕನೆ ಸೈಡ್ ಟೇಬಲ್ ಎಳೆದೆ ಇಲಿ ಕಾಣಿಸಲಿಲ್ಲ, ಆದರೆ ನನ್ನವಳಿಗೆ ಪ್ರಿಯವಾಗಿದ್ದ ಫ್ಲವರ್ ವಾಸ್ ಕೆಳಗೆ ಬಿದ್ದು ಪೀಸ್ ಪೀಸ್ ಆಗಿತ್ತು. ಸಧ್ಯದಲ್ಲೇ ನನ್ನ ಪೀಸ್ ಪೀಸ್ ಆಗುವ ಅಶುಭ ಸೂಚನೆಗಳು ಸ್ಪಷ್ಟವಾಗಿತ್ತು. ಈ ಇಲಿಗೆ ಶಬ್ದವೇಧಿ ಕರಗತವಾಗಿತ್ತೋ ಅಥವಾ ನನ್ನ ದೊಣ್ಣೆ ಪೆಟ್ಟಿನ ಕಂಪನದಿಂದ ಶಬ್ದದ ಮೂಲವನ್ನು ಗುರುತಿಸುತ್ತಿತ್ತೋ ನಾಕಾಣೆ. ಇಲಿಗೆ ಚೆಲ್ಲಾಟ ನನಗೆ ಪ್ರಾಣ ಸಂಕಟ! ನೀವು ಓಡಬಹುದು ಆದರೆ ಅವಿತುಕೊಳ್ಳಲು ಆಗುವುದಿಲ್ಲ ಎಂಬ ಹೇಳಿಕೆಯನ್ನು ಈ ಸುಂಡಿಲಿ ಸಲೀಸಾಗಿ ಸುಳ್ಳು ಮಾಡುತ್ತಿತ್ತು!

ವೀರಗಚ್ಚೆ ಹಾಕಿ ದಂಡಾಯುಧಧಾರಿಯಾಗಿ ವೀರಾವೇಶದಿಂದ ಆಕ್ರಮಣಕ್ಕೆ ನಿಂತ ನನ್ನ ಭಂಗಿಯನ್ನು ಡ್ರೆಸಿಂಗ್ ಟೇಬಲ್ ಕನ್ನಡಿಯಲ್ಲಿ ಕಂಡಾಗ ನಾನೊಬ್ಬ ಅವತಾರ ಪುರುಷನೇನೋ ಅನ್ನಿಸಿತ್ತು!

ಅರೆ ತಾಸಿನ ವ್ಯರ್ಥ ಪ್ರಯತ್ನದಿಂದ ನೊಂದು ಬಂದ ದಾರಿಗೆ ಸುಂಕವಿಲ್ಲವೆಂಬಂತೆ ಬಾಗಿಲು ತೆಗೆಯುತ್ತಿದ್ದ ಹಾಗೆಯೇ ಇಲಿ ನನ್ನ ಪಕ್ಕವೇ ಎಗರಿತ್ತು. ಅನಾಮತ್ತಾಗಿ ಬಗ್ಗಿ ದೊಣ್ಣೆಯನ್ನು ಅದರ ಕಡೆ ಬಾರಿಸಿದೆ. ದೊಣ್ಣೆ ಮುರಿದಿತ್ತು. ಸೊಂಟ ಉಳುಕಿತ್ತು. ಇಲಿ ಕಳಚಿಕೊಂಡಿತ್ತು.

ಮಕ್ಕಳೋ ಎನ್‌ಆರ್‌ಐಗಳು (ನಾನ್ ರಿಟರ್ನಿಂಗ್ ಇಂಡಿಯನ್ಸ್). ಅವರ ಲೇವಡಿ, ದೂರವಾಣಿಯಲ್ಲಿ, ''ಏನು ಅಜ್ಜಿ, ಪಪ್ಪನಿಗೆ ಒಂದು ಸಣ್ಣ ಇಲಿ ಹಿಡಿಯಲು ಆಗ್ತಿಲ್ವಾ? ಹೇ! ಇಲ್ಲಿ ನಾವು ಯಾವಾಗಲೂ ಮೌಸ್ ಹಿಡ್ಕೊಂಡೇ ಇರ್ತೇವೆ. ಅದನ್ನು ಬಿಟ್ಟಿರಕ್ಕೆ ಆಗುವುದಿಲ್ಲ.''

ಇಲಿಯ ಬಲಹೀನತೆ ಊಹಿಸಿ ಮೂರನೇ ದಿನ ಚೀಸ್ ತುಂಡೊಂದನ್ನು ಸಿಕ್ಕಿಸಿದೆ. ಮರುದಿನ ನಮ್ಮನೆಯಲ್ಲಿ ಸಂಭ್ರಮವೋ ಸಂಭ್ರಮ. ಸುಂಡಿಲಿ ಬೋನಲ್ಲಿ ಸಿಕ್ಕಿಬಿದ್ದಿತ್ತು.

ಈಗ ಅದರ ವಿಸರ್ಜನೆ ಹೇಗೆ? ಅದೂ ಒಂದು ಛಾಲೆಂಜ್. ನಾನು ಸಣ್ಣವನಾಗಿದ್ದಾಗ ಸಣ್ಣದೊಂದು ಊರಲ್ಲಿ ಇಲಿ ಸಹಿತ ಬೋನು ಹಿಡಿದು ಹೊರಟರೆ ಯಾವುದಾದರು ನಾಯಿ ಹಿಂಬಾಲಿಸುತ್ತಿತ್ತು. ಜೊತೆಗೆ ಮೈದಾನಗಳಿಗೇನೂ ಕಮ್ಮಿ ಇರಲಿಲ್ಲ. ಇಲಿ ಹೊರಗೆ ಹಾರುವುದೇ ತಡ ನಾಯಿ ಅದಕ್ಕಿಂತ ವೇಗವಾಗಿ ಹಾರಿ ಅದನ್ನು ಹಿಡಿದುಬಿಡುತ್ತಿತ್ತು. ಸೆಕಂಡುಗಳಲ್ಲಿ ಇಲಿ ಬೋನಿನಿಂದ ಬಾನಿಗೆ! ಈ ಸೌಲಭ್ಯ ಬೆಂಗಳೂರಿನಲ್ಲಿ ಸಾಧ್ಯವೇ ಇಲ್ಲ.

ಬೋನನ್ನು ಕಾರಿನಲ್ಲಿಟ್ಟುಕೊಂಡು 3-4 ಸುತ್ತು ಹೊಡೆದೆ. ಸೂಕ್ತ ಜಾಗ ಕಾಣಿಸಲಿಲ್ಲ, ಎಲ್ಲೆಲ್ಲೂ ಒತ್ತಾದ ಮನೆಗಳು, ಅಸಂಖ್ಯಾತ ಜನರು. ಕಡೆಗೆ ಕಸದ ರಾಶಿ ತುಂಬಿದ ಒಂದು ವೇಕೆಂಟ್ ಸೈಟ್ ಕಾಣಿಸಿತು. ಕಾರ್ ನಿಲ್ಲಿಸಿ ಬೋನನ್ನು ಫುಟ್‌ಪಾತ್ ಮೇಲೆ ಇಟ್ಟೆ. ಖಾಲಿ ಸೈಟ್ ಪಕ್ಕದಲ್ಲಿ ಮನೆಗಳಿದ್ದವು ಹಾಗಾಗಿ ಅಲ್ಲೂ ಇಲಿಯನ್ನು ಬಿಡುವ ಹಾಗಿರಲಿಲ್ಲ, ನನಗೆ ಬೇರೆ ದಾರಿಯೇ ಇರಲಿಲ್ಲ, ಬೋನನ್ನು ಇಲಿ ಸಮೇತ ಸದ್ದಿಲ್ಲದೆ ಕಸದ ರಾಶಿಯ ಬಳಿ ಇರಿಸಿ ಜಾಗ ಖಾಲಿ ಮಾಡಿದೆ. ಮನೆ ತಲುಪುವವರೆಗೆ ಹಿಂತಿರುಗಿ ನೋಡಲಿಲ್ಲ.

ಇಲಿ ವಿಸರ್ಜನೆಯ ನಂತರ ವಾಪಸ್ಸಾದಾಗ ಹಣೆಗೆ ಕುಂಕುಮ ಹಚ್ಚಿ ಆರತಿ ಎತ್ತಿ ವೀರೋಚಿತ ಸ್ವಾಗತ ಮಾಡುವರೆಂಬ ನಿರೀಕ್ಷೆಯೇನೂ ನನಗಿರಲಿಲ್ಲ. ಅಮ್ಮ ಕಾಂಪೌಂಡ್ ಹತ್ತಿರವೇ ಒಂದು ಬಕೆಟ್ ನೀರು ಹಾಗೂ ಚೊಂಬು ಇಟ್ಕೊಂಡು ಕಾಯ್ತಿದ್ದರು, ನಾನು ಕೈಕಾಲು ತೊಳೆದುಕೊಳ್ಳಲು. ಪಾಪ ಅವರಿಗೆ ಇಲಿ ಹೋಗಿದ್ದ ಖುಷಿಗಿಂತ ಬೋನ್ ಹೋಯ್ತಲ್ಲಾ ಎಂಬ ದುಃಖ ಜಾಸ್ತಿ ಇತ್ತು!

ಕಹಾನಿ ಅಭೀ ಬಾಕಿ ಹೈ.

ನಾನು ಹೊರಬಾಗಿಲಿನಿಂದ ಮಾಸ್ಟರ್ ಬಾತ್‌ರೂಂಗೆ ನನ್ನವಳು ರಚಿಸಿದ ರೂಟ್ ಮ್ಯಾಪ್ ಪ್ರಕಾರ, ಹಾದಿಯಲ್ಲಿ ಯಾವ ವಸ್ತುವನ್ನು ಮುಟ್ಟದೇ ತಲುಪಬೇಕಾಗಿತ್ತು. ಬಾತ್‌ರೂಂ ವಾಶ್‌ಬೇಸಿನ್ ಕೌಂಟರ್‌ನಲ್ಲಿ ಸಾಲಾಗಿ ಬಿಸಿನೀರು, ಡೆಟಾಲ್, ಹ್ಯಾಂಡ್‌ವಾಶ್ ಹಾಗೂ ಸ್ಯಾನಿಟೈಸರ್ ರಾರಾಜಿಸುತ್ತಿದ್ದವು. 'ಸಾವಕಾಶವಾಗಿ ಕೈಕಾಲು ಮುಖ ತೊಳೆದುಕೊಂಡು ಬನ್ನಿ, ಬಿಸಿ ಬಿಸಿ ಕಾಫಿ ರೆಡಿ ಮಾಡುತ್ತೇನೆ' ಎಂದು ಹೇಳಿ ಜಾರಿಕೊಂಡಳು.

ಕಾಫೀನೇ? ಒಂದು ಗುಟುಕು ವಿಸ್ಕಿ ಸಿಗಬೇಕಾದರೆ ಇನ್ನೆಂತಹ ಘನ ಕಾರ್ಯ ಮಾಡಬೇಕಪ್ಪ ಎಂದು ಪೇಚಾಡ್ಕೊಂಡೆ!

---

## ನಗುವಿಗೇಕೆ ಕಾರಣ

ಸುಮ್ಮನೆ ಒಂದಿಷ್ಟು ನಗಲು ಕಾರಣ ಬೇಡ ಬಿಡಿ
ನಗು ಬಂದರೆ ನಕ್ಕುಬಿಡಿ ಅದನ್ನು ತಡೀಬೇಡಿ
ನಗಲೇಬೇಕು ಆಗಾಗ ಹೃದಯ ಹಗುರವಾಗಲು
ಜೀವನದಲ್ಲಿ ಎಲ್ಲರೊಂದಿಗೂ ಸ್ನೇಹದಿಂದಿರಲು

****

## ನಗುವರಳಿ

ಮನದ ಕದ ತೆಗೆದು ಬರಮಾಡಿಕೊಳ್ಳಿ ನಗುವನ್ನು
ನೋಡಿ ಆನಂದಪಡಿ ನಗು ಅಲ್ಲಿ ಅರಳುವುದನ್ನು
ಮನ ನಕ್ಕರೆ ಅದು ಪ್ರತಿಫಲಿತವಾಗುತ್ತದೆ ಮುಖದಲ್ಲಿ
ಅಂಥಾ ಮುಖವನ್ನು ಗೌರವಿಸುತ್ತಾರೆ ಅಲ್ಲಲ್ಲಿ

# ಪರದೆಯ ಹಿಂದೆ ವಿಸ್ಮಯ

**– ಇ.ಆರ್. ರಾಮಚಂದ್ರನ್**

ಅಜ್ಜಿ ಹರಿಕಥೆಯಿಂದ ಬಹಳ ಲೇಟಾಗಿ ಬಂದ್ರು. ಯಾವತ್ತೂ ಇಷ್ಟು ಲೇಟಾಗಿ ಅವರು ಬಂದಿದ್ದೇ ಇಲ್ಲ. ಆತಂಕದಿಂದ ಕಾಯುತ್ತಾ ಇದ್ದೆ. ಅವರನ್ನು ನೋಡಿದ ಮೇಲೆ ಮನಸ್ಸಿಗೆ ಸಮಾಧಾನವಾಯ್ತು.

''ಯಾಕೆ ಇಷ್ಟು ಲೇಟ್ ಅಜ್ಜಿ? 'ಬಾಹುಬಲಿ 2' ಸೆಕೆಂಡ್ ಷೋಗೆ ಹೋಗಿದ್ಯಾ?''

''ತಲೆಹರಟೆ! ನಾನು ಪಿಕ್ಚರ್ ನೋಡಿ ಎಷ್ಟೋ ವರ್ಷವಾಯಿತೋ...?''

''ಮತ್ತೆಲ್ಲಿಗೆ ಹೋಗಿದ್ದೆ? ವೈಟ್‌ಫೀಲ್ಡ್‌ನಿಂದ ಸಾಫ್ಟ್‌ವೇರ್ ಇಂಜಿನಿಯರ್ ಬರೋ ಹೊತ್ತಿಗೆ ಬಂದಿದೀಯಾ!''

''ನಾವೆಲ್ಲಾ ಹೊರಟಿದ್ದು ಹರಿಕಥೆಗೇನೆ. ದಾರೀಲಿ ಸೀತಮ್ಮ ಹೇಳಿದ್ರು.. ನಮ್ಮ ಊರಿನ ಅಗ್ರಹಾರದ ಹಿಂದೆ ಬಹಳ ದಿನದಿಂದ ಏನೋ ಕಟ್ತಿದಾರೆ.. ಯಾವುದೋ ದೊಡ್ಡ ಕಟ್ಟಡ ತರಹ ಕಾಣಿಸ್ತಿದೆ ನೋಡ್ಕೊಂಡ್ ಬರೋಣ ಅಂದ್ರು. ಅದಕ್ಕೆ ಎಲ್ಲಾರೂ ಹೋಗಿದ್ವಿ. ಬಹಳ ಜೋರಾಗಿ ಕಟ್ಟಿದಾರೋ!''

**ರಾಹುಲ್ ಗಾಂಧಿ ಉಪನಿಷದ್ ಕಲಿಯುವ ಹಿಂದೆ ಇರುವ ಒಂದು ಬ್ರೇಕಿಂಗ್ ನ್ಯೂಸ್..**

''ಅಜ್ಜಿ! ಅದು ಹೇಳಿ ಕೇಳಿ ಕತ್ತೆ ಕೋಣಗಳು ಓಡಾಡೋ ಜಾಗ. ಪೋಲಿ ಹುಡುಗ್ರು ಮಧ್ಯಾಹ್ನ ಗೋಲಿ ಆಡ್ತಿರ್ತಾರೆ. ಅಲ್ಲಿ ಏನು ಬರತ್ತೆ? ಯಾವುದೋ ಸರ್ಕಸ್ ಇಲ್ಲ ಜಾತ್ರೆ ಬರ್ತಿರ್ಬೇಕು.''

''ಪೆದ್ದ! ನೀನು ಕಾಲು ಮುರಕೊಂಡು ಒಂದು ತಿಂಗಳಿಂದ ಇಲ್ಲೆ ಬಿದ್ದಿದೀಯ... ಅದಕ್ಕೆ ನಿನಗೆ ಏನೂ ಗೊತ್ತಿಲ್ಲ. ಅಲ್ಲಿ ದೊಡ್ಡ ಸೈಟ್ನಲ್ಲಿ ಆಶ್ರಮ, ಕೊಳ ಏನೇನೋ ಕಟ್ತಾ ಇದಾರೆ. ಮಾಸ್ಟರ್ ಆಶ್ರಮ ಜೊತೆಗೆ ಬಹಳ ಮರಿ ಆಶ್ರಮಗಳು ಬೇರೆ. ಇಟ್ಟಿಗೆ, ಸೀಮೆಂಟು ಇಲ್ದೆ ಎಲ್ಲಾ ಟೆಂಟಿನಲ್ಲೇ ಮಾಡಿದಾರೆ... ಧೂಳೂ ಪೀಳೂ ಇಲ್ಲ ನೋಡು, ಸ್ವಚ್ಛವಾಗಿದೆ. ಕೂರೋದಕ್ಕೆ ಕೂರ್ಲಾನ್‌ದು ದಪ್ಪಕ್ಕಿರೋ ಮೆತ್ತೆಗಳು ಹಾಸಿದಾರೆ. ಅದರ ಮೇಲೆ ಜಿಂಕೆ ಚರ್ಮ. ಒರಗೋದಕ್ಕೆ ಸಾಲಾಗಿ ಡನ್ಲಪ್ ದಿಂಬುಗಳು.''

''ಕೂರ್ಲಾನ್ ಅಲ್ಲ ಅದು, ಕರ್ಲ್–ಆನ್ ಅಜ್ಜಿ.''

''ಏನೋ ಸುಡುಗಾಡು! ಪ್ರತಿ ಆಶ್ರಮದಲ್ಲೂ ಎ.ಸಿ. ಹಾಕಿದಾರೋ! ಎಲ್.ಜಿ. ದಂತೆ. ನಂಗೆ ಗೊತ್ತಿರೋದು ಎಲ್.ಜಿ. ಹಿಂಗು ಅಷ್ಟೆ! ಎಲ್ಲಾ ಕಡೆ ನೀಲಿ ದೀಪ ಹಾಕಿದಾರೆ. ಊದುಕಡ್ಡಿ, ಧೂಪದ ಮದ್ಯೆ 'ಓಂ' ಕಾರದ ಝೇಂಕಾರ ಕೇಳಿಸ್ತಾ ಇತ್ತು... ಧ್ಯಾನಕ್ಕೆ ರೆಡಿ ಮಾಡ್ತಿರೋ ಹಾಗಿತ್ತು...''

''ಯಾರಾದ್ರೂ ಸ್ವಾಮಿಗಳು ಬರ್ತಿದಾರಾ?''

''ಗೊತ್ತಿಲ್ಲಪ್ಪ. ಇನ್ನೊಂದು ವಿಷಯ... ಆಶ್ರಮದ ಹಿಂದೇನೇ ಒಂದು ಕೊಳ ಕಟ್ಟಿದಾರೆ.

ವಿಶೇಷಾಂದ್ರೆ ಗಂಗೆ, ಯಮುನ, ಗೋದಾವರಿ, ಕಾವೇರಿ, ನರ್ಮದ, ಬ್ರಹ್ಮಪುತ್ರ ನದಿಗಳಿಂದ ಒಂದೊಂದು ಬೊಗಸೆ ನೀರು ತಂದು ಕೊಳ ತುಂಬಿಸಿದಾರೆ. ಇಟಲಿಯಿಂದ ಲೌಡ್ಸ್ , ಥಾಯಲೆಂಡಿನ ಪುಣ್ಯ ಕ್ಷೇತ್ರದಿಂದಲೂ ತೀರ್ಥ ತರ್‍ಸಿ ತುಂಬೀದಾರೆ!''

''ಅಜ್ಜಿ ! ಅದು ಲೌಡ್ಸ್ ಅಲ್ಲ, ಲೌರ್ಡ್ಸ್. ಅದು ಬಿಸಿ ನೀರಿನ ಬುಗ್ಗೆ. ಅದರಲ್ಲಿ ಸ್ನಾನ ಮಾಡಿದ್ರೆ ಕಾಯಿಲೆ, ಚರ್ಮದ ರೋಗ ವಾಸಿಯಾಗುತ್ತೇಂತ ಹೇಳ್ತಾರೆ. ನಮ್ಮಲ್ಲಿ ಹೊಗೆನಕಲ್ ಇದೆಯಲ್ಲಾ ಹಾಗೆ.''

''ಅಲ್ಲಿಂದಾನೂ ನೀರು ತರ್‍ಸಿದಾರಂತೆ..... ಅಲ್ಲಿ ನಮ್ಮ ಕಾರ್‌ಪೆಂಟರ್ ಮುನಿಯಪ್ಪ ಕೆಲ್ಸ ಮಾಡ್ತಿದ್ದ. ಅವನ ತಾತಾನೇ ಅಲ್ವೆ ಮೈಸೂರಿನ ಅರಮನೆಯಲ್ಲಿ ಕೆತ್ತನೆ ಕೆಲಸವೆಲ್ಲಾ ಮಾಡಿರೋದು... ಮುನಿಯಪ್ಪ ಗಂಧದ ವ್ಯಾಸಪೀಠ ಮಾಡ್ತಿದ್ದ. ಅದರಲ್ಲಿ ಕೃಷ್ಣ-ಅರ್ಜುನ ರಥದಲ್ಲಿ ಕೂತಿರೋ ಚಿತ್ರ ಕೆತ್ತಾ ಇದ್ದ. ಬಹಳ ಚೆನ್ನಾಗಿತ್ತು.''

''ವ್ಯಾಸಪೀಠ? ಸ್ವಾಮಿಗಳಿಗೆ ಕೂತ್ಕೋಳಕ್ಕಾ?''

''ನಿನ್ನ ತಲೆ! ವ್ಯಾಸಪೀಠದ ಮೇಲೆ ಮಹಾಭಾರತ, ರಾಮಾಯಣ, ಉಪನಿಷದ್ ಅಂಥ ಗ್ರಂಥವನ್ನು ಇಟ್ಟು ಓದ್ತಾರೆ.''

''ಐ ಸೀ!''

''ಮೂಲೆ ಮೂಲೆಯಲ್ಲೂ ಸಣ್ಣ ಬಣ್ಣದ ಫೌಂಟನ್ಗಳು ಇಟ್ಟಿದಾರೆ. ಇಟಲಿಯಿಂದ ಇಮ್ಪೋರ್ಟ್ಸ್ ಮಾಡಿದ್ರಂತೆ.''

''ಇಂಪೋರ್ಟ್ ಅಜ್ಜಿ.''

''ನಿನ್ನ ಇಂಗ್ಲಿಷ್ನು ಪಾಂಡಿತ್ಯ ಸಾಕು ನಿಲ್ಸೋ! ಮಾಸ್ಟರ್ ಆಶ್ರಮ ಒಂದಿದೆ. ಅದಕ್ಕೆಲ್ಲಾ ಇಂಪೋರ್ಟೆಡ್ ಸಾಮಾನಂತೆ. ಮಿಕ್ಕ ಮರಿ ಆಶ್ರಮಕ್ಕೆಲ್ಲಾ ಲೋಕಲ್ ಸಾಮಾನು ಹಾಕಿದಾರೆ ಅಂದ್ರು... ಅಲ್ಲಿ ಹೆಲಿಕಾಪ್ಟರ್ ಕೂಡ ಕಟ್ಟಿಸ್ತಿದಾರೆ ಗೊತ್ತಾ! ಬೇಕಾದಾಗ ಅಲ್ಲಿಂದ ಬೆಂಗಳೂರಿಗೋ, ಡೆಲ್ಲಿಗೋ ಹಾರಬಹುದು.''

''ನಿನ್ನ ಗ್ರ್ಯಾಂಡ್ ವರ್ಣನೆ ನೋಡಿದ್ರೆ ನೀನು ಮಹಾರಾಜರ ಪ್ಯಾಲೆಸ್ಗೆ ಹೋಗಿರ್ಬೇಕು ಇಲ್ಲ ಯಾವುದಾದರು ಹೈ-ಟೆಕ್ ಸ್ವಾಮಿಗಳ ಮಠಕ್ಕೆ ಹೋಗಿರ್ಬೇಕೂಂತ ಅನ್ಸುತ್ತೆ.''

''ಅಲ್ಲಿ ವಾಚ್‌ಮನ್ ಕೇಳಿದ್ವಿ ಇಲ್ಲಿ ಯಾರು ಬರ್ತಾರೇಂತ. ಹಿಂದೀಲಿ ಏನೋ ಹೇಳ್ದ. ನಮ್ಮ ಹಾರ್ಡ್‌ವೇರ್ ಹರಿಣಿಗೆ ಸ್ವಲ್ಪ ಟಸ್-ಪುಸ್ ಹಿಂದಿ ಬರುತ್ತೆ. ಅದು ಇನ್ನೂ ಸೀಕ್ರೆಟ್ ಸ್ವಲ್ಪ ದಿವಸ್ದಲ್ಲಿ ಗೊತ್ತಾಗುತ್ತೆ ಅಂದ್ರು. ಹೊರಗಡೆ ಹೋರ್ಡಿಂಗ್ ಇವತ್ತೇ ಹಾಕಿದೆ ನೋಡಿ ಅಂದ.''

''ಯಾರ ಫೋಟೋ ಅದು?''

''ಕತ್ಲಲ್ಲಿ ಗೊತ್ತಾಗ್ಲಿಲ್ಲ. ಕಾವಿ ಬಟ್ಟೆ ಧರಿಸಿದ ಒಬ್ಬ ಯುವಕ ಸನ್ಯಾಸಿ. ಮುಖ ಸರಿಯಾಗಿ ಕಾಣಿಸ್ತಿರ್‍ಲಿಲ್ಲ. ಅದು ಸ್ವಾಮಿ ವಿವೇಕಾನಂದರದು ಇರ್ಬೇಕು ಅಂದ್ಕೊಂಡ್ವಿ.''

ಅಷ್ಟರಲ್ಲಿ ಅಜ್ಜಿಯ ಮೊಬೈಲ್ ಫೋನ್ ಕುಯ್ಗುಟ್ಟಿತು.

ಫೋನ್ನಲ್ಲಿ ನಿಂತು ಮಾತಾಡ್ತಿದ್ದ ಅಜ್ಜಿಯಿಂದ 'ಹೌದಾ! ಹೌದಾ!' ಉದ್ಗಾರ ಬಿಟ್ಟು ಬೇರೆ ಮಾತು ಏನು ಬರಲಿಲ್ಲ. ಕೊನೆಗೆ 'ಸರಿನಮ್ಮಾ..' ಅಂತ ಹೇಳಿ ಫೋನ್ ಇಟ್ಟು ಸೋಫಾದಲ್ಲಿ ಕುಸಿದ್ರು. ಅಜ್ಜಿ ಮುಖಕ್ಕೆ 11 ಕೆವಿ ಷಾಕ್ ಹೊಡೆದ ಹಾಗಿತ್ತು.

''ಅಜ್ಜಿ! ಯಾರ್ದು ಫೋನ್ ಇಷ್ಟು ಹೊತ್ನಲ್ಲಿ? ಎಲ್ಲಾ ಸರಿಯಾಗಿದೆಯಾ?''

''ಹರಿಣಿದು ಕಾಲ್. ಹೊರಗಡೆ ಹಾಕಿದ ಸನ್ಯಾಸಿದು ಹೋರ್ಡಿಂಗ್ ವಿವೇಕಾನಂದ ಅವ್ರದಲ್ಲ, ರಾಹುಲ್ ಗಾಂಧಿದಂತೆ!''

''ಓ ಮೈ ಗಾಡ್! ಯಾವ ಚಾನೆಲ್‌ಗೂ ಗೊತ್ತಾಗದಿರುವ ಬ್ರೇಕಿಂಗ್ ನ್ಯೂಸ್ ನಿನಗೆ ಸಿಕ್ಕಿದೆ. ಹಾಗಾದ್ರೆ ಈ ಆಶ್ರಮ ಕಟ್ಟಿಸ್ತಿರೋದು ರಾಹುಲ್ ಗಾಂಧಿ. ಬಂದು ಇಲ್ಲಿ ಉಪನಿಷದ್ ಮತ್ತು ಗೀತೆ ಕಲಿಯೋದಕ್ಕೆ!''

''ಹೌದು. ಇದೆಲ್ಲಾ ನೋಡಿದ್ರೆ... ಕುದುರೆ ಓಟಕ್ಕಿಂತ ಅದ್ರ ಲದ್ದಿ ಬಿರುಸು ಅನ್ನೋ ಗಾದೆ ಸರಿಯಾಗಿದೆ!''

---

## ನಗುವಿಗನುಮತಿ

ಯಾರ ಅನುಮತಿಯೂ ಬೇಡ ನಗುವುದಕ್ಕೆ
ತಿಳಿಯಿರಿ ಬದುಕಿರುವುದೇ ನಗುವುದಕ್ಕೆ
ಸಂಕಟ, ನೋವು ಇವುಗಳ ಪರಿಹಾರಕ್ಕೆ
ನಗ್ತಾ ಇರಿ ಅಂತಾ ಹೇಳೋದು ಅದಕ್ಕೇ

*****

## ನಗುತಂಗಾಳಿ

ಮಗು ನಕ್ಕರೆ ಮೊಗದಲ್ಲಿ ಹಾಲುಸಕ್ಕರೆ
ಮಗುವಿನಂಥಾ ನಗುವೇ ಎಲ್ಲೆಲ್ಲೂ ಅಕ್ಕರೆ
ನಗುವಿನಿಂದ ಹರಡುತ್ತಿದೆ ಸ್ನೇಹ ತಂಗಾಳಿ
ನಗುತಂಗಾಳಿ ಸವಿದು ನಡೆದರೆ ಆನಂದ ತಿಳಿ

# ವ್ಯಾಕರಣ ಭಾಗ್ಯ

**- ಎನ್ ರಾಮನಾಥ್**

ಸಿದ್ದಣ್ಣ ಮೇಷ್ಟ್ರು ಅಂದ್ರೆ ವ್ಯಾಕರಣ. ವ್ಯಾಕರಣ ಅಂದ್ರೆ ಸಿದ್ದು ಮೇಷ್ಟ್ರು. ಅವರ ಮಾತು ಮಾತಿನಲ್ಲೂ ವ್ಯಾ ಎನ್ನುವಂತಹದ್ದು, ರಣಕ್ಕೆ ಪ್ರಚೋದನೆ ಕೊಡುವಂತಹದ್ದು ಇರುತ್ತಿದ್ದದ್ದು ಕೇವಲ ಬೈ-ಪ್ರಾಡಕ್ಟ್ ಅಷ್ಟೆ.

''ಎಲವೋ ರಾಮ್ಯ, ಸಂಧಿ ಅಂದ್ರೆ ಗೊತ್ತೇನೋ ನಿನಗೆ?'' ಕೇಳಿದರು ಅಂದೊಮ್ಮೆ.

''ಗೊತ್ತು ಸರ್. ನನ್ನ ಪಕ್ಕಾನೇ ಕೂತಿದ್ದಾಳೆ. ಕೋಡುಬಳೆ ಇಷ್ಟ ಅವಳಿಗೆ'' ಎಂದೆ ಸಂಧಿ ಉರುಫ್ ಸಂಧ್ಯಳನ್ನೇ ನೋಡುತ್ತಾ.

**ಅನ್ನ ಭಾಗ್ಯ, ಕ್ಷೀರ ಭಾಗ್ಯ, ಆ ಭಾಗ್ಯ ಈ ಭಾಗ್ಯ ತರಹ ಇದೂ ಒಂದು..**

''ಮೂರ್ಖ. ಸಂಧಿ ಅಂದ್ರೆ ಅಕ್ಷರ ಅಕ್ಷರಗಳು ಸೇರಿದಾಗ ಆಗೋದು ಕಣೋ'' ಎಂದರು ಮೇಷ್ಟ್ರು.

''ಅಕ್ಷರ ಅಕ್ಷರಗಳನ್ನು ಸೇರಿಸಿ ಬರೆದಾಗ ಅದನ್ನು ಚಿತ್ತು ಅಂತ ಕರೆದಿರಲ್ಲ ಮೇಷ್ಟ್ರೇ...'' ಬಾಲ್ಯದಲ್ಲೇ ನುರಿತ ವೈದ್ಯನ ಹ್ಯಾಂಡ್‌ರೈಟಿಂಗ್ ಹೊಂದಿದ್ದ ತಿಮ್ಮೇಶ ಕೇಳಿದ.

''ಸಾರ್, ಪದಪದಗಳು ಸೇರಿದಾಗ ಅಲ್ವಾ?'' ಅಯ್ಯರ್ ಮಗ ವೈಯ್ಯರ್ (ವೆಂಕಟೇಶ ಅಯ್ಯರ್. ಹ್ರಸ್ವ ಹೆಸರಾಗಿ ವೈಯ್ಯರ್)

''ಇಲ್ಲಿ ನಾನು ಮೇಷ್ಟ್ರು. ನಾನು ಹೇಳಿದ್ದೇ ಸಂಧಿ. ಸಂಧಿಗಳಲ್ಲಿ ಮೂರು ವಿಧ - ಆಗಮ, ಆದೇಶ, ಲೋಪ ಸಂಧಿಗಳು. ಯಾರಾದ್ರೂ ಹೇಳ್ತೀರಾ ಇದೇನೂಂತ...?''

ಅಂದು ಯಾರು ಏನು ಉತ್ತರ ಕೊಟ್ಟರೋ, ಬಿಟ್ಟರೋ ತಿಳಿಯದು. ಇಂದು ಆ ಮೇಷ್ಟ್ರಿಗೆ ವಿಧಾನಸೌಧದಲ್ಲಿ ವ್ಯಾಕರಣದ ಪಾಠ ಮಾಡುವ ಭಾಗ್ಯ ದೊರಕಿತು. ಮತ್ತೆ ಆಗಮ, ಆದೇಶ, ಲೋಪ ಸಂಧಿಗಳು ಎಂದರೇನು ಎಂದು ನೆರೆದಿದ್ದ ಪತ್ರಕರ್ತರು, ಮಂತ್ರಿಗಳು, ವಂದಿಮಾಗಧರನ್ನು ಕೇಳಿದರು.

''ಅ - ಅಲ್ಪಸಂಖ್ಯಾತರು; ಗ - ಗರ್ವಿಷ್ಠರು; ಮ - ಮತಮತಿಗಳು ಒಟ್ಟಿಗೆ ಸೇರುವ ಸಂದರ್ಭವನ್ನೇ ಆಗಮ ಸಂಧಿ ಎನ್ನುತ್ತೇವೆ'' ಎಂದರು ವಿಪಕ್ಷದ ಧುರೀಣರು.

''ಅದಕ್ಕೇ ನೀವು ಆಪೊಸಿಶನ್‌ನಲ್ಲಿ, ಆ ಪೊಸಿಶನ್‌ನಲ್ಲಿ ಇರೋದು. ಆ ಅಂದರೆ ಅಲ್ಪಸಂಖ್ಯಾತರು ಅನ್ನೋದು ತಪ್ಪು; ಅ+ಅ = ಆ; ಆ ಅಕ್ಷರವೇ ಸವರ್ಣದೀರ್ಘ ಸಂಧಿ. ಆದ್ದರಿಂದ ಆ ಎಂದರೆ ಅ - ಅಲ್ಪಸಂಖ್ಯಾತರು; ಅ - ಅಲ್ಪಮತಿಗಳು ಅಂತ ತಿದ್ದಿಕೊಳ್ಳಿ. ನಿಮಗೂ ಹೊಂದತ್ತೆ. ಯಾರಾದರೂ ಆದೇಶ ಸಂಧಿ ಅಂದರೆ ಏನೂಂತ ಹೇಳ್ತೀರಾ?''

''ಭೂಪಟ್ದಾಗೇ ಐತಲ್ಲ ಸಸಿವ್ರೆ; ಇಂಡಿಯಾಗೂ ಸೀಲಂಕಾಗೂ ಮಧ್ಯ ಜಾಗ ಬಿಟ್ಟವ್ರಲ್ಲಾ ಅದೇ ಸಂಧಿ ಅಲ್ಲವ್ರಾ?'' ಕೇಳಿದರು ಪಠ್ಯಪುಸ್ತಕ ಸಚಿವರು.

''ಹ್ಞ! ಈ ದೇಶದಲ್ಲಿ ಇರುವ ಎಲ್ಲ ದುಡ್ಡನ್ನು ಬಾಚಿಕೊಂಡು ಬ್ರಿಟನ್ನಿಗೋ, ಬ್ರೆಝಿಲ್ಲಿಗೋ

ಹಾರುವುದೇ ಆದೇಶ ಸಂಧಿ. ನಮ್ಮದು ಈ ದೇಶ. ಮಿಕ್ಕೆಲ್ಲವೂ ಆ ದೇಶ. ಆ ದೇಶಕ್ಕೆ ಹೋಗುವ ಸುಸಂಧಿಯೇ ಆದೇಶ ಸಂಧಿ. ಇದರಲ್ಲಿ ಒಂದು ಹಡ್ವಾಂಟೇಜೂ ಇದೆ. ಇಲ್ಲಿನ ಯಾವುದೇ ಕೋರ್ಟುಗಳ ಆದೇಶ ಆ ದೇಶದಲ್ಲಿ ನಡೆಯೊಲ್ಲ. ಆದ್ದರಿಂದ ಆದೇಶ ಸಂಧಿಯೇ ಸೂಪರ್ ಸಂಧಿ'' ಪರಾರಿ ಇಲಾಖೆಯ ಸಚಿವರು ನುಡಿದರು.

''ಲೋಪ ಸಂಧಿ ಅಂದ್ರೆ?''

''ಲೋಕಾಯುಕ್ತದವರಿಂದ ಹಿಡಿಯಲ್ಪಟ್ಟು ಪರಪ್ಪನ ಅಗ್ರಹಾರದವರೆಗೆ ಹೋಗಬೇಕಾದರೆ ದಾಟಬೇಕಾದ ವಿವಿಧ ಸಂಧಿಗಳೇ ಲೋಪ ಸಂಧಿಗಳು'' ಎಂದರು ಗೃಹಸಚಿವರು.

''ಯಾರೋ ಹೇಳಿದ್ದನಾದ್ರೂ ಸರಿಯಾಗಿ ತಿಳ್ಕೊಳ್ಳಿ; ಎಲ್ಲ ಸಂಧಿಗಳಿಗೂ ಕಾವೇರಿ ನದೀನೇ ಸೂಕ್ತ ಉದಾಹರಣೆ. ಕಾವೇರಿ ಸುಪ್ರೀಂಕೋರ್ಟ್‌ಗೆ ಆದೇಶ ಸಂಧಿ, ತಮಿಳುನಾಡಿಗೆ ಆಗಮ ಸಂಧಿ, ಕರ್ನಾಟಕಕ್ಕೆ ಲೋಪ ಸಂಧಿ'' ನೀರಾ-ವರಿ ಸಚಿವರು ದನಿಯೇರಿಸಿದರು.

''ಸುವರ್ಣ ದೀರ್ಘ ಸಂಧಿ ಗೊತ್ತಾ ನಿಮಗೆ?'' ವಿರೋಧಪಕ್ಷದಿಂದ ದನಿಯೊಂದು ತೂರಿಬಂತು.

''ಅಕ್ಷಯ ತದಿಗೆ ದಿವಸ ಇರುವೆ ತೂರಕ್ಕೂ ಸಂದಿ ಇಲ್ಲದ ತರಹ ಕ್ಯೂನಲ್ಲಿ ಜನ ಚಿನ್ನ ಕೊಂಡ್ಕೊಳ್ತಾರಲ್ಲಾ, ಆ ಕ್ಯೂನೇ ಸುವರ್ಣ ದೀರ್ಘ ಸಂಧಿ'' ಎಂದಿತೊಂದು ದಳದ ಎಳಸು.... ಕ್ಷಮಿಸಿ... ಎಸಳು.

''ಅಲ್ಲ, ಒಂದೇ ಜಾತಿಯವರು ಇರುವಂತಹ ದೊಡ್ಡ ವಠಾರವೇ ಸ-ವರ್ಣ ದೀರ್ಘ ಸಂಧಿ; ಕಮ್ಯುನಿಟಿ ಫ್ಲಾಟ್‌ಗಳನ್ನೂ ಸ-ವರ್ಣ ದೀರ್ಘ ಸಂಧಿ ಎನ್ನಬಹುದು'' ಎಂದರು ನರಕಾಭಿವೃದ್ಧಿ ಸಚಿವರು.

''ಕರ್ಮಪದ ಎಂದರೇನು?'' ಎಂದನೊಬ್ಬ ಪತ್ರಕರ್ತ.

''ಆಚೆ ಕಳಿಸ್ರಿ ಅವನನ್ನ. ಉಡುಪಿ ಮಠಕ್ಕೆ ನಾನು ಹೋಗಲಿಲ್ಲ ಅಂತ ನನ್ನನ್ನ ಛೇಡಿಸಕ್ಕೆ ಆ ಪ್ರಶ್ನೆ ಕೇಳಿರೋದು. ಕರ್ಮ ಕಾಡಿದರೆ ನಾನು ಅನುಭವಿಸ್ತೀನಿ, ನಿಮಗೇನು? ಬಂದ್ಬಿಟ್ಟ ಕರ್ಮದ ಬಗ್ಗೆ ಪದ ಹಾಡಕ್ಕೆ'' ಘರ್ಜಿಸಿದರೊಬ್ಬ ಸಚಿವರು.

''ಗುಣವಾಚಕ ಎಂದರೆ?''

''ಹೂಬ್ಲಾಟ್ ವಾಚ್ ವಿಷಯ ಬಿಡೀಪ್ಪಾ.... ಆ ವಾಚಿನ ಗುಣದ ಬಗ್ಗೆ ಮಾತನಾಡಿದ್ದೇ ಗುಣ-ವಾಚಕ ಅಂತ ಎಲ್ಲರಿಗೂ ಗೊತ್ತಿರೋದೇ...'' ಕೈ ಕೈ ಹಿಸುಕಿಕೊಂಡರೊಬ್ಬ ತಂತ್ರಿ.

''ಅದಲ್ಲ ಸಾರ್, ಗುಣವಾಚಕ ಎಂದರೆ ಗುಣಕ್ಕೆ ಸಂಬಂಧಪಟ್ಟದ್ದೂ...'' ವಿವರಿಸಲು ಮುಂದಾದರು ಸಿದ್ದು ಮಾಸ್ಟರ್.

''ಇಲ್ಲಿ ಕುಳಿತ ಯಾರಿಗೂ ಇಲ್ಲವಾದ ಗುಣದ ಬಗ್ಗೆ ಚರ್ಚಿಸುವುದು ವ್ಯರ್ಥ. ಒಣಮಾತು ಸಾಕು. ದ ಹೌಸ್ ಈಸ್ ಅಡ್ಜರ್ನ್ಡ್'' ಎಂದರು ಇಸ್ಪೀಕರ್.

ವ್ಯಾಕರಣ ಸಭೆ ಬರಖಾಸ್ತಾಯಿತು.

# ಪಂಚ್ ಪದ್ಯಗಳು

## ಮುಂಗಾರು ಮಳೆ

- ಎಚ್. ಡುಂಡಿರಾಜ್

*–1–*

*ಇಲ್ಲಿ ಭೂಲೋಕದವರ*
*ಮದುವೆ ಮುಂಜಿಗಳ ಸಡಗರ*
*ಕರಗುವುದೇತಡ*
*ಶುರುವಾಗುತ್ತದೆ ಅಲ್ಲಿ, ಆಕಾಶದಲ್ಲಿ*
*ಆ ಲೋಕದವರ ಪಾಳಿ*
*ಮಿಂಚುವ ಸೀರೆಯಂಚು, ಆಭರಣ*
*ಗರ್ನಾಲು, ಬ್ಯಾಂಡು*
*ಅತಿಥಿಗಳೆಲ್ಲ ಉಂಡು*
*ಕೈ ತೊಳೆಯುತ್ತಿದ್ದಾರೆ*
*ನಮ್ಮ ಮೈ ಮೇಲೆ!*

*–2–*

*ಮಳೆ ಬರಲಿ ಎಂದು*
*ಕಪ್ಪೆಗಳಿಗೆ, ಕತ್ತೆಗಳಿಗೆ*
*ಮಾಡುತ್ತಾರೆ ಮದುವೆ*
*ಮನುಷ್ಯರಿಗೆ ಲಗ್ನ ಮಾಡಿದರೂ*
*ಬರುತ್ತದೆ ಮಳೆ*
*ಜೀವಮಾನವಿಡೀ*
*ಬೈಗುಳದ ಸುರಿಮಳೆ!*

*–3–*

*ಆಕಾಶದಲ್ಲಿ ಅಶಾಂತಿ ಗದ್ದಲ*
*ಮಿಂಚು ಗುಡುಗು ಸಿಡಿಲು*
*ಮಳೆ ಹನಿಗಳ ನಡುವೆ*
*ಪೈಪೋಟಿ ಜಗಳ*
*ಭುವಿಗೆ ಮುತ್ತುಕೊಡಲು!*

*–4–*

*ಹೊಸ ಬಡಾವಣೆಗಳಿಗೆ*
*ನೀರು ಪೂರೈಸಲು*
*ವಿಫಲವಾಗಿದೆ ಜಲ ಮಂಡಳಿ*
*ಆಕಾಶರಾಯನಿಂದ ಉಚಿತ*
*ನೀರು ಸರಬರಾಜು*
*ಮುಗಿಲ ಟ್ಯಾಂಕರ್‌ನಲ್ಲಿ!*

*–5–*

*ಅದೇ ಮುಗಿಲು*
*ಅದೇ ಮಿಂಚು*
*ಮಳೆ ಹನಿಗಳ ಸಿಂಚನ*
*ಅದೇ ಜೋಡಿ*
*ಅದೇ ಮಂಚ*
*ಆದರೂ ರೋಮಾಂಚನ!*



# ಆಲಾಪವೋ ಪ್ರಲಾಪವೋ

**- ಅರುಂಧತಿ ಜೋಶಿ**

‘‘ಹಾಳಾದ ಕರೀ ಬೆಕ್ಕು; ಈಗಲೇ ಅಡ್ಡ ಬರಬೇಕೇ? ಕೆಲಸ ಕೆಟ್ರೆ ಏನಪ್ಪಾ ಮಾಡೋದು? ದೊಡ್ಡದಾಗಿ ಮನಸ್ನಾಗ ಮಂಡಿಗೆ ಮಾಡೋದಿದ್ರೆ ಗೋಧಿ ಕಣಕ ಕುಟ್ಟೋವ್ರು ಯಾರು ಅನ್ನೋ ಗಾದೆ ಮಾತಿನ ಹಾಗೆ ಆಗ್ತಿದೆ’’ ಅಜ್ಜಿಯ ಗೊಣಗಾಟ ಕೇಳ್ತಾ ಅಲ್ಲಿಗೆ ಬಂದ ಕಿಟ್ಟಿ, ‘‘ನೋಡಜ್ಜಿ ಹೀಗೆಲ್ಲಾ ಮೂಢನಂಬಿಕೆ ಇಟ್ಕೊಂಡ್ರೆ, ಯಾವ ಕೆಲಸಾನೂ ಆಗೋಲ್ಲ. ಮನಸ್ಸಲ್ಲಿ ನಕಾರಾತ್ಮಕ ಯೋಚನೆ ಮಾಡ್ತಾ ಕೂತ್ರೆ, ನಮ್ಮಲ್ಲಿ ಹುಮ್ಮಸ್ಸೇ ಇರೋಲ್ಲ. ಯಾರದೋ ತಪ್ಪಿಗೆ ಯಾರಿಗೋ ಶಿಕ್ಷೆ ಅಂತ ಹೇಳ್ತಾರಲ್ಲ. ನಿಮ್ಮ ವಿಚಾರ ಲಹರಿ ಸಹ ಹಾಗೇ ಆಗಿದೆ ಎಂದನಿಸುತ್ತೆ. ಬೆಕ್ಕು ಸಾಕೋವ್ರು ಖಂಡಿತ ಈ ರೀತಿ ಯೋಚಿಸೋಲ್ಲ. ನಾಯಿ ಊಳಿಡುತ್ತಿದ್ರೆ ಅಪಶಕುನ. ಖಂಡಿತ ಯಾರೋ ಗೊಟಕ್ ಅಂತ ಅಕ್ಕ-ಪಕ್ಕದಲ್ಲಿರೋ ಮನೆಗಳಲ್ಲಿ ಪ್ರಾಣ ಬಿಟ್ಟಿರಬೇಕು; ಯಾರು ಕೊನೆಯುಸಿರು ಬಿಟ್ಟಿರಬಹುದು ಎಂದು ತಲೆ ಕೆಡಿಸಿಕೊಳ್ಳೋವ್ರು ಇದ್ದಾರೆ. ನಾಯಿ ಸಾಕೋವ್ರು ಖಂಡಿತ ಈ ವಾದವನ್ನು ಒಪ್ಪೋದಿಲ್ಲ. ಶ್ವಾನ ಪ್ರಿಯರಲ್ಲದಿದ್ರೆ ಮಾತ್ರ ನಾಯಿ ಊಳಿಟ್ಟರೆ ಹೀಗೆಲ್ಲ ತಲೆ ಕೆಡಿಸ್ಕೊಂಡು, ಅದೇ ದಿಗಿಲಿನಲ್ಲಿ ಇವರಿಗೆ ಏನೂ ಆಗದಿದ್ರೆ ಸರಿ!’’

ಮೊಮ್ಮಗನ ವ್ಯಾಖ್ಯಾನ ಕೇಳಿದಾಗ ಅಜ್ಜಿಗೆ ಏನೋ ಹೊಳೆದಂತಾಯಿತು. ‘‘ಅಲ್ವೋ, ಶಾಮೀ! ಊರಿಗೆ ಹೋಗಬೇಕೆಂದು ವಿಮಾನ ನಿಲ್ದಾಣಕ್ಕೆ ಹೋಗಿದ್ಯಲ್ಲ. ಮತ್ತೆ ವಾಪಸ್ಸು ಬಂದ್ಬಿಟ್ಯಲ್ಲೋ! ಏನಾಯಿತು?’’

‘‘ಅಜ್ಜಿ! ನಿಮ್ಮ ನಂಬಿಕೆಯ ಪ್ರಕಾರ, ಹೊರಟಾಗ ಒಬ್ರು ಸಕ್ಕೇಸಿ ಮಡಿ ಹೆಂಗ್ಸು ಅಡ್ಡ ಬಂದ್ಬಿಟ್ರು. ನಾನು ವಿಮಾನ ನಿಲ್ದಾಣವನ್ನು ತಲುಪೋ ಹೊತ್ತಿಗೆ ವಿಮಾನ ಹೊರಟ್ಹೋಗಿತ್ತು. ಇದು ನನ್ನ ತಪ್ಪಜ್ಜಿ. ನಾನೇ ತಡಮಾಡಿ ಹೊರಟಿದ್ನೊ ಅಥವಾ ಈ ಬೆಂಗಳೂರು ಮಹಾನಗರ ಅಡ್ಡಡ್ಡಲಾಗಿ ಬೆಳೆದು ನಿಂತಿರುವಾಗ, ಬೆಳಗ್ಗೆ ಮಧ್ಯಾಹ್ನ, ಸಂಜೆ, ರಾತ್ರಿ ಎಂದು ಎಲ್ಲಾ ಹೊತ್ತಿನಲ್ಲೂ ವಾಹನಗಳ ಸಂದಣಿಯಿಂದ ಅಡಚಣೆ ಗಿಜಿಗಿಜಿ ಎಂದು, ಓಡಾಡೋದೇ ಕಷ್ಟವಾಗಿದೆ. ಜನಸಂಖ್ಯೆ ಮಾತ್ರ ಹೆಚ್ಚಾಗಿದೇಂತಲ್ಲ, ಎಲ್ರಮನೇಲೂ ಕಾರು, ಸ್ಕೂಟರು, ಬೈಕು ಎಂದು ಇರುವಾಗ ವಾಹನಗಳ ಓಡಾಟ ಹೆಚ್ಚಾಗಿರೋದಲ್ದೇ, ವಾಯುಮಾಲಿನ್ಯ ಸಹ ಹೆಚ್ಚಾಗಿದೆ.’’

‘‘ಸಾಕ್ಬಿಡೋ, ನಿನ್ನ ಪ್ರವಚನ, ಸಮಜಾಯಿಷಿ ನಂಗೆ ಬೇಕಿಲ್ಲ. ಎಲ್ಲ ಮಿತಿ ಮೀರಿದರೆ ಹೀಗೇ ಆಗೋದು. ಅತಿಯಾದರೆ ಅಮೃತಾನೂ ವಿಷ ಅಂತಾರಲ್ಲ, ಹಾಗಾಯ್ತು. ನಮ್ಕಾಲ ಚೆನ್ನಾಗಿತ್ತು. ಈ ರೀತಿ ಗಡಿಬಿಡಿ ತೊಂದರೆಗಳು, ತಾಪತ್ರಯಗಳಿರಲಿಲ್ಲ. ಇದ್ದಿದ್ದರಲ್ಲಿ ಸಂತೃಪ್ತಿಯಿಂದ ಜೀವನ ಸಾಗಿಸುತ್ತಿದ್ದ, ಅಮಾಯಕರಿದ್ದ ಕಾಲ ಚೆನ್ನಾಗಿತ್ತಪ್ಪ. ನಿರಾಳವಾಗಿದ್ವಿ.’’

‘‘ಒಂದಾನೊಂದು ಕಾಲದಲ್ಲಿ ಆಗಿರೋದು ಈಗ್ಯಾಕೆ ಬೇಕು ಅಜ್ಜಿ. ಈಗೆಲ್ಲವೂ ಉಲ್ಟಾ ಪಲ್ಟಾ! ಹೇಗೋ ನಡೆಯುತ್ತಿರುತ್ತೆ, ಓಡುತ್ತಿರುತ್ತೆ ಬಿಡು!’’

''ನಿಜ ಶಾಮಿ ನಮ್ಕಾಲ ಚೆನ್ನಾಗಿತ್ತು ಬಿಡು. ಕಮ್ಮಿ ಸಂಬಳವಿದ್ರೂ ಬೆಲೆಗಳು ಹಿಡಿತದಲ್ಲಿದ್ದವು. ವಾಹನ ಪ್ರದೂಷಣೆ, ದಾವಂತ ಇರ್ಲಿಲ್ಲ. ನೆಮ್ಮದಿಯ ಜೀವನ, ಬಂಧು-ಬಳಗದ ಒಡನಾಟ ಎಲ್ಲಾ ಚೆನ್ನಾಗಿತ್ತು. ಈಗ ನೋಡು! ಬೆಲೆಗಳು ಗಗನಕ್ಕೇರಿವೆ. ಎಷ್ಟು ಸಂಬಳವಿದ್ರೂ ಸಾಲೋದಿಲ್ಲ. ಕೈಯಲ್ಲಿ ಅಥವಾ ಕಿವಿ ಹತ್ರ ಮೊಬೈಲನ್ನೋ ಅಥವಾ ಸ್ಮಾರ್ಟ್ ಫೋನನ್ನು ಕೈಯಲ್ಲಿ ಪ್ರತಿಷ್ಠಾಪನೆ ಮಾಡಿಕೊಂಡು ಓಡಾಡ್ತಿರ್ತಾರೆ. ತಮ್ಮದೇ ಆದ ಪ್ರಪಂಚದಲ್ಲಿ ತೇಲಾಡ್ತಿರ್ತಾರೆ.''

ಅಜ್ಜಿಯ ಮಾತನ್ನು ಕೇಳಿದ ಮೇಲೆ ಏನುತ್ತರ ಕೊಡಬೇಕೆಂದೇ ಶಾಮಿಗೆ ಗೊತ್ತಾಗ್ಲಿಲ್ಲ.

''ಈಗ ಹೇಳು, ಯಾರು ಹಿತವರು ನಿಮಗೆ ಸೆಲ್‌ಫೋನೋ ಅಥವಾ ಬಹುದಿನದ ಸಿರಿಯೋ, ಎರಡೂ ನಿಮಗೆ ಬಹಳ ಮುಖ್ಯಾಂತ ನನಗೆ ಗೊತ್ತಿದೆ. ಏನೋ ಹೇಳ್ತಾರಲ್ಲ ಸ್ಪುಟ್ನಿಕ್ ಯುಗ, ರೋಬೋಗಳ ಯುಗ, ರಾಕೆಟ್ ಯುಗಾಂತ ಹೇಳ್ತೀರಲ್ಲ! ಇವೆಲ್ಲ ನೋಡ್ತಿದ್ರೆ ಮುಂದಿನ ತಲೆಮಾರಿನಲ್ಲಿ ಕೈ ಕಾಲುಗಳಿಗೆ ಕೆಲಸವಿಲ್ದೇ ದೇಹ ಕುಗ್ಗಿ ತಲೆ ಮಾತ್ರ ದೊಡ್ಡದಾಗಿ ಬಿಟ್ಟಿರುತ್ತೇನೋ! ನಮ್ಕಾಲದಲ್ಲಿ ನಮ್ಮ ಗ್ರಹಚಾರಾನ ವಾರದ ಏಳು ದಿನಗಳ ಅಧಿಪತಿಗಳಾದ ರವಿ, ಸೋಮ, ಮಂಗಳ, ಬುಧ, ಗುರು, ಶುಕ್ರ, ಶನಿ ಗ್ರಹಗಳು ನಿರ್ಧರಿಸುತ್ತಿದ್ದವು ಎಂದು ನಂಬಿದ್ದೆವು. ಈಗಲೂ ಟಿವಿಯಲ್ಲಿ ನಮ್ಮ ಗ್ರಹಚಾರ ಫಲವನ್ನು ತಿಳಿಸುವ ಕಾರ್ಯಕ್ರಮಗಳು ಬರ್ತಿದೆ ಅಲ್ವೇನೋ?''

ಶಾಮಿಗೆ ಇದನ್ನು ಅಜ್ಜಿಗೆ ಹೇಗೆ ಮನವರಿಕೆ ಮಾಡಬೇಕೆಂದು ಗೊತ್ತಾಗಲಿಲ್ಲ. ಆದರೂ ತನ್ನ ಪಟ್ಟುಬಿಡದೇ ''ನೋಡಜ್ಜಿ! ಈಗ ಗ್ರಹಗಳಿಗೆ ದೂರದ ಯಾನಕ್ಕೆ, ರಾಕೆಟ್ಟುಗಳಲ್ಲಿ ಓಡಾಡೋದು ಸಾಮಾನ್ಯ ಸುದ್ದಿಯಾಗಿ ಬಿಟ್ಟಿದೆ. ಲಕ್ಷಾಂತರ ಕಿಲೋ ಮೀಟರ್‌ಗಳ, ನಿಗದಿತ ದೂರವನ್ನು ಸಹ ಅನಾಯಾಸವಾಗಿ ದಾಟುವ ಸಾಮರ್ಥ್ಯವನ್ನು ಪಡೆದಿರುವ ರಾಕೆಟ್ಟಿನಲ್ಲಿ ಪ್ರಯಾಣ ಮಾಡುವುದು ಪ್ರಯಾಸವಾಗಿ ಬಿಡಬಹುದೆಂದು ಹೆದರಬೇಕಿಲ್ಲ.''

''ಆಯ್ತು ಬಿಡಪ್ಪ. ನನಗೆ ಇವೆಲ್ಲಾ ಅರ್ಥ ಆಗೋದೇ ಇಲ್ಲ. ಎತ್ತಿನ ಗಾಡಿಯಾಗ, ಜಟಕಾದಾಗ, ಸೈಕಲ್ ರಿಕ್ಷಾದಾಗ ಓಡಾಡ್ತಿದ್ವಿ. ಸಮಯದ ಅಭಾವ ಇರಲಿಲ್ಲ. ಗಡಿಬಿಡಿ ಧಾವಂತವಿರಲಿಲ್ಲ. ಜೀವನದ ಪಯಣ ಸರಾಗವಾಗಿ ನಿರಾಯಾಸವಾಗಿ, ನಿರಾತಂಕವಾಗಿ ಸಾಗುತ್ತಿತ್ತು. ಎಲ್ಲಾರೂ ನಮ್ಮವರೇ ಅನ್ನೋ ಭಾವನೆಯಿತ್ತು. ಸ್ವಾರ್ಥ ಇರಲಿಲ್ಲ.''

ಕಳ್ಳತನ, ಮೋಸ, ಸುಳ್ಳು, ಸುಲಿಗೆ ಎಲ್ಲವೂ ಅಪರೂಪಕ್ಕೆ ಕೇಳುತ್ತಿದ್ದ ಸುದ್ದಿಗಳಾಗಿದ್ದವು. ಈಗ ನಡೀತಿರೋದನ್ನು ನೋಡಿದರೆ ದಿಗಿಲಾಗುತ್ತೆ. ನೀವೆಲ್ಲಾ ಹೇಗೆ ನಿಭಾಯಿಸ್ತಿರೋ ಏನೋ ಗೊತ್ತಿಲ್ಲ.

''ಚಿಂತೆ ಮುಪ್ಪು'' ಅಂತ ಹೇಳ್ತಾರಲ್ಲ, ಹಾಗೇ ನೀವು ನಿಮಗೆ ಅಂಟಿಕೊಂಡು ಬಿಟ್ಟಿರೋ ಪರಿಸ್ಥಿತಿಗಳ ಕೈಗೊಂಬೆಯಾಗಿ, ಜೀವನ ನಿಭಾಯಿಸ್ತಿರುವಾಗ, ''ಕಾಲಾಯ ತಸ್ಮೈ ನಮಃ'' ಅನ್ನೋ ಹಾಗೇ ಜೀವನ ಸಾಗ್ತಿರಬೇಕು. ಹೋಗಲಿ ಬಿಡು ದೇವರು ನಿಮ್ಮನ್ನು ಕಾಪಾಡಿ ಚೆನ್ನಾಗಿ ಇಟ್ಟಿರ್ಲಿ.

ಅಜ್ಜಿಯ ಆಶೀರ್ವಾದವನ್ನು ಕೇಳ್ತಿದ್ದಾಗ, ಹೀಗೆ ನಮಗೆ ಆಶೀರ್ವಾದ ಮಾಡೋ ಹಿರಿಯ ಜೀವವೊಂದು ಮನೇಲಿ ಇರಲೇಬೇಕು ಎಂದು ಮನದಟ್ಟಾಯಿತು.

❋

# ಸತ್ವಪರೀಕ್ಷೆ

**- ಗೌತಮ**

ಶ್ರೀ ಶ್ರೀ ಶ್ರೀ ಪೆಂಗಾನಂದ ಸ್ವಾಮಿಗಳ ಮುಂದೆ ಅವರ ಪಟ್ಟ ಶಿಷ್ಯರುಗಳಾದ ಕ್ಷೀರಾನಂದ (ಪೂರ್ವಾಶ್ರಮದ ಪರಿಷ್ಕೃತ ರೂಪ), ಶುಶ್ರೂಷಾನಂದ (ರೋಗ ಪೀಡಿತರ ಸೇವೆಯಲ್ಲಿ ಮುಳುಗಿರುವವರತ್ತ ಚಿತ್ತ ಹರಿಸಿ ಆನಂದ ಹೊಂದುವ ನರೋತ್ತಮ), ಉರುವಲಾನಂದ (ಉರಿಯುವ ಉರುವಲಿನ - ಸೌದೆ ಅಥವಾ ಸವದಿಯ - ಬೆಂಕಿಯನ್ನು ನಂದಿಸಲು ತನ್ನ ಪೂರ್ವಿಕರಾದ ಗಾಂಪರು ಕೈಗೊಂಡ ಕ್ರಮವನ್ನೇ ಈ ಶಿಷ್ಯನೂ ಅನುಸರಿಸಿ ಕೊಳ್ಳಿಯನ್ನು ಹರಿಯುವ ನೀರಿನಲ್ಲಿ ಅದ್ದಿದ್ದರಿಂದ ಈ ಶಿಷ್ಯನಿಗೆ ಈ ಹೆಸರು) ಮತ್ತು ಇತ್ತೀಚೆಗಷ್ಟೇ ಆಶ್ರಮ ಸೇರಿದ ಪ್ರತಿನಿಮಿಷಾನಂದರು ಕೈಗಳನ್ನು ಮುಂದೆ ಕಟ್ಟಿಕೊಂಡು ವಿನೀತರಾಗಿ ನಿಂತಿದ್ದಾರೆ. ಶ್ರೀ ಶ್ರೀಗಳು ಗಂಭೀರವದನರಾಗಿ ಎಲ್ಲರ ಮುಖಗಳನ್ನೂ ಗುರಾಯಿಸಿ ನೋಡಿದರು. ಗುರುಗಳನ್ನು ಮಿಂಚಿದ ಶಿಷ್ಯರುಗಳು ಗುರ್ರ್‌ರಾಯಿಸಿ ಗುರುಗಳನ್ನು ನೋಡಿದರು. ತಕ್ಷಣವೇ ಗುರುಗಳು ತಣ್ಣಗಾದರು.

'ಸುರು ಅಚ್ಕಳಿ' ಅಂತಂದ ಒಬ್ಬ ಆನಂದ.

'ನಮ್ಮ ಮಠದ ಅಧಿದೇವತೆ ಗುಂಡಮ್ಮದೇವಿ ತುಂಬಾ ವಿಚಿತ್ರ ಅಂತ ನಿಮಗೆಲ್ಲಾ ಗೊತ್ತಲ್ಲ. ನಿನ್ನೆ ನನ್ನ ಸ್ವಪ್ನದಲ್ಲಿ ಕಾಣಿಸಿಕೊಂಡು ನನಗೊಂದು ಅಪ್ಪಣೆಯಿತ್ತಳು. ಆ ದೇವಿಯ ಆಜ್ಞೆಯಂತೆ ನಾನು ಒಬ್ಬ ಯೋಗ್ಯ ಶಿಷ್ಯನನ್ನು ಆರಿಸಬೇಕಿದೆ. ಅವನ ಕೈಯ್ಯಲ್ಲಿ ಅವಳಿಗೆ 'ಗುಂಡಿನಲ್ಲಿ' ಅಭಿಷೇಕ ಮಾಡಿಸಿದರೆ ನಮಗೆ ಒಂದು ದೊಡ್ಡ ವರ ಕೊಡಲಿದ್ದಾಳಂತೆ. ನಮಗೇನಾದರೂ ಆ ವರ ಸಿಕ್ಕಿದ್ದೇ ಆದರೆ, ಇನ್ನೆರಡು ವರ್ಷಗಳಲ್ಲಿ ನಾವುಗಳೆಲ್ಲಾ ಈ ಮಠ-ಗಿಠಗಳನ್ನು ತೊರೆದು ಬೇರೊಂದು ನಾಡಿಗೆ ಹೋಗಿ ಅಲ್ಲಿ ಐಷಾರಾಮದ ಜೀವನವನ್ನು ನಡೆಸುವಷ್ಟು ಧನಕನಕವಸ್ತುಗಳು ನಮ್ಮದಾಗುತ್ತದಂತೆ. ಅಲ್ಲಿ ನಾವು ನಮ್ಮ ಗುಂಡಮ್ಮದೇವಿಯ ಮಹಾತ್ಮೆಯನ್ನು ಪ್ರಚಾರ ಮಾಡುವ ಕೆಲಸದಲ್ಲಿ ತೊಡಗಬೇಕಂತೆ. ಶಿಷ್ಯರೇ, ನೋಡಿ, ಇದು ದೇವಿ ನಮಗೆ ಒಡ್ಡಿರುವ ಒಂದು ವಿನೂತನ ಪರೀಕ್ಷೆ. ನಮ್ಮ ಸತ್ವಪರೀಕ್ಷೆ. ಶಿಷ್ಯರೇ, ಅಂತಹ ಒಬ್ಬ ವ್ಯಕ್ತಿ ನಿಮ್ಮಲ್ಲಿಯೇ ಅಡಗಿದ್ದಾನೆಂಬುದು ನನ್ನ ದೃಢವಾದ ನಂಬಿಕೆ. ಹಾಗಾಗಿ ನಾವು ಒಂದು ಪರೀಕ್ಷೆಯನ್ನು ನಡೆಸುವ ಯೋಚನೆಯಲ್ಲಿದ್ದೇವೆ. ಅದಕ್ಕಾಗಿ ಒಂದು ಯೋಜನೆಯನ್ನೂ ಹಾಕಿಕೊಂಡಿದ್ದೇವೆ. ಇದಕ್ಕೆ ನೀವೆಲ್ಲರೂ ಸಿದ್ದವೇ?

ಒಕ್ಕೊರಲಿನಿಂದ ಎಲ್ಲ ಶಿಷ್ಯರೂ 'ಓeee' ಎಂದರು.

'ಸಂತೋಷ ಸಂತೋಷ.'

'ಹೇಳಿ ಗುರುವೇ ಅದೆಂತಹ ಘನಕಾರ್ಯ?'

'ಶಿಷ್ಯರೇ ಗಮನವಿಟ್ಟು ಕೇಳಿರಿ. ನಾನೀಗ ನಿಮಗೆ ಒಂದು ಕಾರ್ಯವನ್ನು ವಹಿಸುತ್ತೇನೆ.'

'ಆಯಿತು ಗುರುವೇ. ಬೆಟ್ಟವನ್ನು ಬೇಕಾದರೂ ಕುಟ್ಟಿ ಪುಡಿಮಾಡಿ ತರುತ್ತೇವೆ' ಅಂತ ಒಬ್ಬನಂದ.

‘ಹಾ, ಹಾ, ಸ್ವಲ್ಪ ತಡೆದುಕೊಳ್ಳಿ. ಮೊದಲು ಸಮಾಧಾನದಿಂದ ಸರಿಯಾಗಿ ಕೇಳಿಸಿಕೊಳ್ಳಿ. ಆಮೇಲೆ ಚೆನ್ನಾಗಿ ಯೋಚನೆ ಮಾಡಿ. ಆನಂತರ ಈ ಕಾರ್ಯವನ್ನು ಕೈಗೆತ್ತಿಕೊಳ್ಳಿ.’

‘ಆಯ್ತು ಗುರುವೇ. ನೀವಿನ್ನು ಹೇಳಬಹುದು’ ಎಂದ ಇನ್ನೊಬ್ಬ ಶಿಷ್ಯ.

‘ಗಮನವಿಟ್ಟು ಕೇಳಿ. ನಿಮ್ಮೆಲ್ಲರಿಗೂ ಒಂದೊಂದು ‘ನೈಂಟಿ’ ಶೀಶೆಯನ್ನು ಕೊಡುತ್ತೇನೆ. ಅದನ್ನು ಕುಡಿಯಬೇಕು ಅಷ್ಟೇ.’

ಥಟ್ಟನೇ ಒಬ್ಬ ಶಿಷ್ಯ ರೇಗುವಂತೆ ‘ಇದೇನು ಗುರುಗಳೇ ತಮಾಷೆ ಮಾಡುತ್ತಿರುವಿರೋ ಹೇಗೆ? ಇದ್ಯಾವ ಸೀಮೆ ಪರೀಕ್ಷೇ? ನೈಂಟಿ ಹಾಕೋದು ಒಂದು ದೊಡ್ಡ ಪರೀಕ್ಷೆಯೇ?’ ಹೇಳಿ ಮುಖ ಸಿಂಡರಿಸಿಕೊಂಡ.

‘ಹಾ, ಹಾ, ತಾಳ್ಮೆ. ತಾಳ್ಮೇನೇ ತಾಯಿ ತಂದೆ. ಇದಕ್ಕೆ ಒಂದು ಷರತ್ತಿದೆ.’

‘ಇದಕ್ಕೂ ಷರತ್ತೇ? ಅದೇನು ಹೇಳುವಂಥವರಾಗಿ ಗುರುಗಳೇ.’

‘ಷರತ್ತು ಒಂದೇ. ಯಾರೂ ನೋಡಬಾರದ ಸ್ಥಳದಲ್ಲಿ ನೀವು ಈ ನೈಂಟಿಯನ್ನು ಗಂಟಲೊಳಗೆ ಇಳಿಸಬೇಕು. ಸಿದ್ಧವೇ?’

‘ಓೕೕೕ’

‘ಸರಿ ಹಾಗಾದರೆ. ತೆಗೆದುಕೊಳ್ಳಿ. ಒಬ್ಬೊಬ್ಬರಾಗಿ ಬನ್ನಿ’ ಎನ್ನುತ್ತಾ ತಮ್ಮ ಮುಂದೆ ನಿಂತು, ಚಾಚಿದ ಬೊಗಸೆಗೈಗಳಲ್ಲಿ ಎಲ್ಲರಿಗೂ ಹಾಕಿದರು. ನಾಲ್ಕೂ ಶಿಷ್ಯರಿಗೆ ಶೀಶೆಗಳನ್ನು ವಿತರಿಸಿದ ನಂತರ ‘ಮುಂದಿನವಾರ, ಇದೇ ದಿನ, ಇದೇ ಸಮಯಕ್ಕೆ, ಇಲ್ಲೇ ಮತ್ತೆ ಸೇರೋಣ’ ಎಂದು ಮೇಲೆದ್ದರು ಪೆಂಗಾನಂದರು.

ಮುಂದಿನ ವಾರ, ಅದೇ ದಿನ, ಅದೇ ಸಮಯ, ಅಲ್ಲೇ ಎಲ್ಲರೂ ಸೇರಿದ್ದಾರೆ.

ಎಲ್ಲರಲ್ಲೂ ಕುತೂಹಲ ದಟ್ಟವಾಗಿ ಮನೆ ಮಾಡಿದೆ. ಗುರುಗಳು ಎಲ್ಲರ ಮೇಲೂ ಒಮ್ಮೆ ಕಣ್ಣಾಡಿಸಿ ‘ಕ್ಷೀರಾನಂದ ನೀನು ಎಲ್ಲಿ ಕಾರ್ಯ ನಿರ್ವಹಿಸಿದೆ?’

‘ಗುರುವೇ, ನಮ್ಮ ಆಶ್ರಮದ ಹಿಂದೆ, ದೊಡ್ಡ ಕಾಡಿದೆಯಲ್ಲವೇ? ಸಂಜೆ ಕಾಡಿನೊಳಗೆ, ತೀರ ಒಳಗೆ, ಯಾರೂ ಹೋಗಲು ಹೆದರುವಷ್ಟು ಒಳಗೆ, ದೊಡ್ಡ ಮರದ ಕೆಳಗೆ, ಸುತ್ತ ಮುತ್ತ ಎಲ್ಲಿಂದ ನೋಡಿದರೂ ಯಾರಿಗೂ ಕಾಣದಂತಹ ಜಾಗದಲ್ಲಿ ಕೂತೂ ಒಳಗೆ ಹಾಕಿಕೊಂಡೆ...’

‘ಭೇಷ್. ಶುಶ್ರೂಷಾನಂದ ಈಗ ನಿನ್ನ ಸರದಿ. ಹೇಳು ಎಲ್ಲಿ ನಿನ್ನ ಕಾರ್ಯವನ್ನು ಮುಗಿಸಿದೆ?’

‘ಕ್ಷಮಿಸಿ ಗುರುದೇವ. ನೀವು ಹೊರಗೆ ಹೋಗಿದ್ದಾಗಾ... ಅಲ್ಲಿ ಯಾರಿಗೂ ಪ್ರವೇಶ ಇಲ್ಲ ಅಂತ ಗೊತ್ತಿದ್ದರೂನೂವೇ.... ನಿಮ್ಮ ಪರ್ಮಿಷನ್ ಇಲ್ಲದೇನೇ ನಿಮ್ಮ ಶೌಚಾಲಯ ಸೇರಿ...’

‘ಭಲೆ ಭಲೆ’ ಎಂದವರೇ ಉರುವಲಾನಂದನತ್ತ ತಿರುಗಿ ‘ಉರುವಲಾನಂದ’ ಎಂದು, ಹೇಳೋಣವಾಗಲಿ ಎನ್ನುವಂತೆ ಕೈಯನ್ನು ಮೇಲಕ್ಕೆ ತಾಲಿಸಿದರು.

‘ಗುರುವೇ, ನಿನ್ನೆ ಸಮಾವೇಶ ಇತ್ತಲ್ಲಾ? ಎಲ್ಲರೂ ಸಭಾಂಗಣದಲ್ಲಿ ಸೇರಿದ್ದರಲ್ಲವೇ. ಆಶ್ರಮದ ಆಚೆ ಒಂದು ನರಪಿಳ್ಳೆಯೂ ಇರಲಿಲ್ಲ.

ವೇದಿಕೆಯ ಮೇಲೆ ನೀವೊಬ್ಬರೇ. ನಾನು ಎಲ್ಲರಿಗಿಂತ ಹಿಂದಿನ ಸಾಲಿನಲ್ಲಿ ಕೂತಿದ್ದೆ. ನೀವು ಒಂದು ಸಂದರ್ಭದಲ್ಲಿ ಯೋಗಾಸನದ ಒಂದು ಆಸನವನ್ನು ಮಾಡುತ್ತಿರುವಾಗ ಸಭೆಗೆ ಬೆನ್ನು ತಿರುಗಿಸಿದ್ದಿರಿ. ಇದೇ ಸರಿಯಾದ ಸಮಯ ಅಂತ ಒಂದೇ ಏಟಿಗೆ ಮುಗಿಸಿಬಿಟ್ಟೆ.'

'ಅಮೇಜ಼ಿಂಗ್ ಅಂದರು ಗುರುಗಳು. ಹಾಗೆ ಇಂಗ್ಲಿಷ್ ಭಾಷೆ ಗುರುಗಳ ಬಾಯಿಂದ ಉದುರಿದರೆ ಅವರಿಗೆ ಪರಮಾನಂದವಾಗಿದೆ ಎಂದೇ ಅರ್ಥ. ಉಳಿದವನು ಒಬ್ಬನೇ. ಪ್ರತಿನಿಮಿಷಾನಂದ. ಎಲ್ಲ ಶಿಷ್ಯರಿಗಿಂತ ಕಿರಿಯನಾದರೂ, ಎಲ್ಲರಿಗಿಂತ ಬುದ್ಧಿವಂತನೆನಿಸಿಕೊಂಡಿದ್ದ. ಹಾಗಾಗಿ ಮಿಕ್ಕ ಆನಂದರಿಗೆ ಇವನನ್ನು ಕಂಡರೆ ಸ್ವಲ್ಪ ಹೊಟ್ಟೆಕಿಚ್ಚೇ.'

ಗುರುಗಳು 'ಪ್ರತೀ (ಪ್ರೀತಿಯಿಂದ ಗುರುಗಳು ಅವನನ್ನು ಕರೆಯುತ್ತಿದ್ದುದು ಹೀಗೆ)' ಎಂದರು. ಅವನು ನಿರ್ವಿಕಾರ ಭಾವದಿಂದ ಗುರುಗಳ ಮುಂದೆ ಬಂದು ನಿಂತ. ಮಿಕ್ಕವರು ಮುಸಿಮುಸಿ ನಕ್ಕರು – 'ನಮ್ಮಂಥ ಸಿದ್ಧಹಸ್ತರ ಮುಂದೆ ಇವನಿನ್ನೂ ಬಚ್ಚಾ. ಇವನು ಏನು ಮಾಡಿರ್ತಾನೋ ನೋಡೋಣ' – ಅನ್ನುವಂತೆ.

ಎಲ್ಲರಲ್ಲೂ ಕುತೂಹಲ ನೂರ್ಮಡಿ ಹೆಚ್ಚಿದೆ. ತವಕದಿಂದ ಕಾಯುತ್ತಿದ್ದಾರೆ. ಪ್ರತಿನಿಮಿಷಾನಂದ ಒಂದು ಹೆಜ್ಜೆ ಮುಂದೆ ಇಟ್ಟು, 'ಗುರುಗಳೇ ನನ್ನನ್ನು ಕ್ಷಮಿಸಬೇಕು' ಎಂದ.

'ಪ್ರತೀ, ಏನಾಯಿತು? ಕ್ಷಮಿಸುವಂತಹ ತಪ್ಪು ಮಾಡುವವನಲ್ಲ ನೀನು. ಹೇಳು ಏನಾಯಿತು?'

'ನೀವು ವಹಿಸಿದ ಕೆಲಸವನ್ನು ನಾನು ನಿರ್ವಹಿಸಲಾಗಲಿಲ್ಲ ಗುರುವೇ.'

'ಕಾರಣವೇನು ಪ್ರತೀ? ಸೂಕ್ತವಾದ ಸ್ಥಳ ಸಿಕ್ಕಲಿಲ್ಲವೇ?'

'ಸರಿಯಾದ ಪ್ರಶ್ನೆ ಕೇಳಿದಿರಿ ಗುರುಗಳೇ. ಯಾರೂ ನೋಡದ ಯಾವ ಜಾಗವೂ ನನಗೆ ಸಿಕ್ಕಲಿಲ್ಲ.'

'ಆಶ್ಚರ್ಯ ಆಶ್ಚರ್ಯ.'

'ಆಶ್ಚರ್ಯವಾದರೂ ಸತ್ಯ ಗುರುವೇ. ಈ ಕೆಲಸವನ್ನು ನೀವು ವಹಿಸಿದ ಕಾರಣವನ್ನೂ ನಾನು ಊಹಿಸಿದ್ದೇನೆ ಗುರುವರ್ಯ. ನಿಮ್ಮ ಉದ್ದೇಶ ಸತ್ಯಾನ್ವೇಷಣೆ ಮತ್ತು ಸತ್ವಪರೀಕ್ಷೆಯೆಂಬುದನ್ನು ನಾನು ಬಲ್ಲೆ ಗುರುಗಳೇ. ಯಾವ ನರಮಾನವ, ಪಶುಪಕ್ಷಿಗಳಿಲ್ಲದಿದ್ದರೂ ಸಿಸಿಟಿವಿ ಎಂಬ ಏಕಾಕ್ಷಿಯೊಂದು ಸರ್ವಾಂತರ್ಯಾಮಿ ಎಂಬುದನ್ನು ನಾನು ಓದಿ, ಕೇಳಿ, ನೋಡಿ ತಿಳಿದಿದ್ದೇನೆ ಗುರುಗಳೇ. ಹಾಗಾಗಿ ನಾನು ನಿಮ್ಮ ಆಜ್ಞೆ ಪಾಲಿಸುವಲ್ಲಿ ಸೋತಿದ್ದೇನೆ. ಕ್ಷಮಿಸಬೇಕು' ಎನ್ನುತ್ತಾ ಪ್ರತಿನಿಮಿಷಾನಂದ ಗುರುಗಳ ಮುಂದೆ ಸಾಷ್ಟಾಂಗವೆರಗಿದ.

❋

# ಅಯ್ಯೋಽಽಽ...ಜಿರಳೆ!

- ಗಾಯತ್ರಿ ಮೂರ್ತಿ

**ಮ**ಗಳಿಗೆ ಮರುದಿನ ಪರೀಕ್ಷೆ, ಇಂಜಿನಿಯರಿಂಗ್ ಆರನೆಯ ಸೆಮಿಸ್ಟರ‍ದು. ರಾತ್ರಿ ಕಾಫಿ ಮಾಡಿ ಕೊಟ್ಟು, ನಿನಗೇನಾದರೂ ಬೇಕಾದ್ರೆ ಒಂದು ಸಾರಿ ಕೂಗು, ಎದ್ದು ಬರ್ತೀನಿ ಎಂದು ಹೋಗಿ ಮಲಗಿದೆ. ಸ್ವಲ್ಪ ಹೊತ್ತಾಗಿರಬಹುದು ನನಗೆ ತೂಗು ಹತ್ತಿತ್ತು. ಇದ್ದಕ್ಕಿದ್ದ ಹಾಗೆ ಮಗಳು ಕಿಟಾರನೆ ಕಿರುಚಿದ ಶಬ್ದ ಕೇಳಿತು. ಥಟ್ಟನೆ ಎಚ್ಚರವಾಗಿ ಗಾಬರಿಯಾಯಿತು. ಕಳ್ಳ-ಗಿಳ್ಳ ಏನಾದ್ರೂ ಅವಳ ರೂಮಿಗೆ ನುಗ್ಗಿದಾನಾ? ಅಥವಾ ಹಾವು-ಚೇಳು ಏನಾದ್ರೂ ಬಂದ್ಬಿಟ್ಟಿದ್ಯಾ? ಹತ್ತಾರು ಕೆಟ್ಟ ಯೋಚನೆಗಳ ಸಾಲು, ಮನದ ಮುಂದೆ ಸುಳಿದು ದಿಗ್ಗನೆದ್ದು ಅವಳ ಕೋಣೆಗೆ ಹೋಗಿ ನೋಡುತ್ತೇನೆ!!!

**ಎಂತಹ ಸಂದರ್ಭದಲ್ಲೂ ವಿಚಲಿತರಾಗದ ಅನೇಕ ಹೆಂಗಸರು ಜಿರಳೆಗಳನ್ನು ಕಂಡ ತಕ್ಷಣ ಭಯಭೀತರಾಗಿ ಅದೇಕೆ ಹಾಗೆ ಬೆದರಿ ತಲ್ಲಣಿಸುತ್ತಾರೆ!**

ಅಮ್ಮ, ಮೈಯೆಲ್ಲಾ ಜುಮ್ ಅನ್ನತ್ತೆ. ಅಯ್ಯೋ, ಇನ್ನೇನು ಗತಿ, ಹಾರೋ ಜಿರಳೆ ನನ್ನ ಮೈಮೇಲೇ ಬಂದು ಬಿಡತ್ತೇಽಽ ಅಷ್ಟೆ ಎಂದು ಕೂಗಿ ಕೊಂಡಳು. ಅದೇ ಆಯ್ತು! ಅಯ್ಯೋಽಽಽ ಎಂದು ಕೂಗಾಡುತ್ತಾ, ಕೈಕಾಲು ಜಾಡಿಸ್ತಾ, ಒಂಥರಾ ಥಕಥೈ ಅಂತ ಡ್ಯಾನ್ಸ್ (ಈಗ ಕೈಕಾಲುಗಳನ್ನು ವಿಚಿತ್ರವಾಗಿ, ಆಡಿಸೋದೂ, ಲಾಗ ಹಾಕೋದು, ಸರ್ಕಸ್ ಮಾಡೋದು ಎಲ್ಲಾ ಡ್ಯಾನ್ಸ್ ಲೆಕ್ಕಕ್ಕೇ ಬರತ್ತಲ್ವಾ?) ಮಾಡೋ ಅಷ್ಟರಲ್ಲಿ ಅದು ಹೆದರ್‍ಕೊಂತೇನೋ, ಭರ್‍ರನೆ ಹಾರಿ ಕರ್ಟನ್ ಮೇಲೆ ಏದುಸಿರು ಬಿಡ್ತಾ (ಹೌದಾ? ನಿಜವಾಗ್ಲೂ!!! ), ಇದ್ಯಾರಪ್ಪಾ ಹೀಗೆ ಅರಚ್ತಾ ಇದಾರೆ ನನ್ನ ನೋಡಿ ಅಂತ ಆಶ್ಚರ್ಯಪಡ್ತಾ ಕೂತ್ಕೊಂಡು, ಇನ್ನೆಲ್ಲಿ ಜಾಗ ಹುಡುಕಲಿ ಅಂತ ನೋಡ್ತಿತ್ತೇನೋ, ಅಷ್ಟರಲ್ಲಿ ನನ್ನ ಮಗಳು ನನ್ನೊಬ್ಬಳನ್ನೇ ಆ ಜಿರಳೆಯನ್ನು ಎದುರಿಸಲು ಬಿಟ್ಟು ಕೋಣೆಯಿಂದ ಆಚೆ ಓಡಿ ಹೋಗಿದ್ದಳು.

ಅಮ್ಮ, ಬೇಗ ಅದನ್ನು ಸಾಯಿಸು, ನಾನು ಓದ್ಕೋ ಬೇಕು ಆ ಜಿರಳೆಯ ಭಯದಲ್ಲೂ ಕೂಗಿ ಹೇಳಲು ಮರೆಯಲಿಲ್ಲ.

ಸರಿ, ನಾನು ಅಡುಗೆ ಮನೆಗೆ ಬಂದು ಪೊರಕೆಯೆಂಬ ನನ್ನ ಆಯುಧವನ್ನು ತಂದು ಜಿರಳೆ ಬೇಟೆಗೆ ಸನ್ನದ್ಧಳಾದೆ.

ಕಿಟಕಿಯ ಕರ್ಟನ್ ಮೇಲೆ ಕುಳಿತಿದ್ದ ಜಿರಳೆ ಎಲ್ಲಿ ಹೋಯಿತು? ಎಂದು ಆಶ್ಚರ್ಯ ಪಡುವಷ್ಟರಲ್ಲಿ ಮತ್ತೆ ಅದು ಸರ್‍ರಂತ ನನ್ನ ತಲೆಯ ಮೇಲೆ ಹಾರಿ ಹೋಯಿತು. ಈಗ ಅದು ಅವಳ ಹಾಸಿಗೆಯ ಮೇಲೆ ಸೊಂಪಾಗಿ ಕುಳಿತು ಮೀಸೆ ಆಡಿಸುತ್ತಾ, ಅತ್ತಿತ್ತ ನೋಡಿತು. ಸೊಗಸಾದ ಹಾಸಿಗೆ, ಸಾಧ್ಯವಾದರೆ ಅಲ್ಲೇ ರಾತ್ರಿ ಕಳೆಯುವ



ಚಿಂತೆ ಇತ್ತೇನೋ ಅದಕ್ಕೆ? ಆದರೆ ಅದು ನಮಗೆ ಬೇಡದ ಅತಿಥಿ, ಅದನ್ನು ನೆಮ್ಮದಿಯಾಗಿ ಅಲ್ಲಿರಲು ಬಿಟ್ಟೇನೇ? ಆದರೂ ಹಾಸಿಗೆಯ ಮೇಲೆ ಅದಕ್ಕೆ ಪೊರಕೆ ಸೇವೆ ಮಾಡಲು ಮನಸ್ಸು ಬರಲಿಲ್ಲ.

ಅಮ್ಮಾ, ನಾನು ಓದ್ಕೊಬೇಕು. ಬೇಗ ಅದನ್ನು ಸಾಯಿಸಮ್ಮ, ಅಂತ ಇವಳು ಬೇರೆ ಆಚೆಯಿಂದಲೇ ಕೂಗ್ಕೊಂಡ್ಲು. ಅಯ್ಯೋ, ಇರೇ ಸ್ವಲ್ಪ, ಅದು ಸಿಕ್ಕರೆ ತಾನೇ ಹೊಡೆಯೋದು. ನೀನು ಸ್ವಲ್ಪ ಸುಮ್ನಿರ್ತೀಯಾ ಎಂದು ತಾಕೀತು ಮಾಡಿದೆ. ಜಿರಳೆಯಂತೂ ಮೆತ್ತನೆಯ ಹಾಸಿಗೆಯ ಸುಖ ಸೋಪಾನದ ಮೇಲೆ ಸೊಂಪು ಮಾಡುತ್ತಾ ಮೀಸೆ ತಿರುವುತ್ತಿತ್ತು. ಮತ್ತೆ ಅದಕ್ಕೇನು ತೋಚಿತೋ ಅಥವಾ ನನ್ನನ್ನು ಬೇಟೆಯಾಡಲು ಬಂದೆಯಾ? ಅದು ಹೇಗೆ ಹಿಡೀತೀಯೋ ನೋಡ್ತೀನಿ ಎಂದು ಸವಾಲೆಸೆಯುವಂತೆ ಭರ್ರನೆ ಮೇಲಕ್ಕೆ ಹಾರಿತು. ನಾನು ಬೆಚ್ಚಿಬಿದ್ದು ಸಣ್ಣಗೆ ಕಿರುಚಿದೆ. ಏನಾಯ್ತಮ್ಮಾ? ಎಂದು ಅಲ್ಲಿಂದಲೇ ಕೂಗಿದಳು. ನಾನು, ಏನೂ ಆಗ್ಲಿಲ್ಲ, ಅದು ಹಾರ್‍ತಿದೆ, ಎಂದೊಡನೆ ಅವಳು ಸರ್ರನೆ ಎದುರು ಕೋಣೆಗೆ ಹೋಗಿ ಬಾಗಿಲು ಹಾಕಿಕೊಂಡು ಬಿಟ್ಟಳು.

ಇತ್ತ, ನಾನೊಬ್ಬಳೇ, ಅದನ್ನು ಎದುರಿಸಬೇಕಾದ ಶೋಚನೀಯ ಪರಿಸ್ಥಿತಿ!

ಅಂತೂ ಇಂತೂ ಅದು ನೆಲದ ಮೇಲೆ ಕುಳಿತು, ಮುಂದಿನ ಹೆಜ್ಜೆಯ ಬಗ್ಗೆ ಯೋಚಿಸತೊಡಗಿತು. ತಕ್ಷಣವೇ ಕಾರ್ಯ ಪ್ರವೃತ್ತಳಾದೆ. ಅದೆಲ್ಲಿಂದ ಪೌರುಷ ಬಂತೋ! ಅದರ ಮೇಲೆ ಬಲವಾಗಿ ನನ್ನ ಪೊರಕೆ ಆಯುಧದಿಂದ ಪ್ರಹಾರ ನೀಡಿದೆ. ಅದು ಸತ್ತಂತೆ ಒಂದು ಕ್ಷಣ ಮಲಗಿತು. ಮತ್ತೆ ಮೀಸೆ ತಿರುವತೊಡಗಿದೊಡನೆ ಬಿತ್ತು ಮತ್ತೊಂದು, ಮಗದೊಂದು ಏಟು, ಅದು ಮತ್ತೆ ತಲೆ ಎತ್ತದಂತೆ!

ಮಗಳು ಅಲ್ಲಿಂದಲೇ ಕೂಗಿದಳು, ಅಮ್ಮ ಅದು ಸಾಯ್ತಾ?

ನಾನು ಯುದ್ಧದಲ್ಲಿ ಜಯಶಾಲಿಯಾದ ವೀರ ರಮಣಿಯಂತೆ ಸತ್ತ (ಅಲ್ಲ, ಸತ್ತಂತಿದ್ದ!) ಜಿರಲೆಯನ್ನು ಎತ್ತಿಕೊಂಡು ಹೊರಬಂದೆ, ಸಧ್ಯ ಬದುಕಿದೆ ಎಂದು ಉದ್ಗರಿಸುತ್ತಾ ಮಗಳು ತನ್ನ ಕೋಣೆಗೆ ಹೋದಳು.

ನಾನು ಜಿರಳೆಯನ್ನು ಕಸದ ಬುಟ್ಟಿಗೆಸೆದು ನೆಮ್ಮದಿಯ ನಿಟ್ಟುಸಿರುಬಿಟ್ಟೆ ಅನ್ನಿ! ಮರುದಿನ ಕಸದ ಬುಟ್ಟಿಯಲ್ಲಿ ನೋಡ್ತೀನಿ, ಗಿಳಿಯು ಪಂಜರದೊಳಿಲ್ಲ! ಅಂದರೆ ನಾನು ಸಾಯಿಸಿದೀನಿ ಅಂತ ಭಾವಿಸಿದ್ದ ಜಿರಳೆ ಚೇತರಿಸಿಕೊಂಡು ಹಾರಿ ಹೋಗಿತ್ತು! ಅಷ್ಟಿಲ್ಲದೆ ಜಿರಳೆ ಸಂತತಿ 200-300 ದಶಲಕ್ಷ ವರ್ಷಗಳಿಂದ ಭೂಮಿಯ ಮೇಲಿರಕ್ಕಾಗ್ತಿತ್ತಾ? ನೀವೇ ಹೇಳಿ.

ಸತ್ತಂತಿದ್ದ ಜಿರಳೆ ಹಾರಿ ಹೋಗಿದ್ದು ಕಂಡು ನನಗೆ ಅಕ್ಕ ಹೇಳಿದ್ದು ನೆನಪಾಯಿತು - ಜಿರಳೆಗಳಿಗೆ ನೀನು ನಾಲ್ಕೇಟು ಹಾಕಿದ್ರೆ ಸತ್ತಂಗೆ ಬಿದ್ದಿರತ್ವೆ ನಿಜ, ಸ್ವಲ್ಪ ಹೊತ್ತಾದ ಮೇಲೆ ಚೇತರಿಸ್ಕೊಂಡು ಓಡಿ ಹೋಗತ್ವೆ. ಕೆಲವು ಸಲ ಎರಡು ದಿನ ಸತ್ತ ಹಾಗೆ ಬಿದ್ದಿದ್ದವು ಕೂಡ ಚೇತರಿಸಿಕೊಂಡಿರೋದನ್ನು ನೋಡಿದೀನಿ, ಎಂದಿದ್ದಳು. ನಾನಾಗ, ಜಿರಳೆಗಳ ಮೇಲೆ ರಿಸರ್ಚ್ ಮಾಡ್ತಿದೀಯಾ? ಎಂದು ತಮಾಷೆ ಮಾಡಿದ್ದೆ.

ನಾನು ಒಮ್ಮೆ ಹೀಗೆ ಜಿರಳೆ ಬೇಟೆಯಾಡಿ ಅದನ್ನು ಎಸೆಯುವುದರಲ್ಲಿದ್ದೆ. ನನ್ನ ಮೈದುನನಿಗೆ ನಾನು ಜಿರಳೆಗೆ ಹೊಡೆದು ಸಾಯಿಸಿದ್ದು ಇಷ್ಟವಾಗಲಿಲ್ಲವೇನೋ? ಅವನು,

ಅದನ್ನು ಹೊಡೆದು ಸಾಯಿಸಿದ್ರಲ್ಲಾ? ಅದಕ್ಕೆ ಜೀವ ಕೊಡೋ ಶಕ್ತಿ ನಿಮಗಿದೆಯಾ? ಹಾಗಿದ್ರೆ ಮಾತ್ರ ಸಾಯ್ಸಿ, ಎಂದ.

ಅರೆ, ನಾನು ಹಾಗೇ ಬಿಟ್ಟರೆ, ಅವುಗಳ ಸಂತಾನಾಭಿವೃದ್ಧಿಯಿಂದಾಗಿ ಅವುಗಳು ಅಡುಗೆ ಕಟ್ಟೆಮೇಲೆ ಹಾಯಾಗಿ ಓಡಾಡಿಕೊಂಡು, ನಾನು ಮಾಡಿರೋ ಅಡುಗೆ, ಹಾಲು, ನೀರು, ಕಾಫಿ ಡಿಕಾಕ್ಶನ್ ಎಲ್ಲಾದರಲ್ಲು ಕಂಡು ಬರತ್ವೆ. ಅದಕ್ಕೆ ಸಿದ್ಧ ಇದ್ರೆ ಮಾತ್ರ ಅವುಗಳನ್ನು ಇನ್ನು ಮೇಲೆ ಸಾಯ್ಸಲ್ಲ ಎಂದೆ. ಅಂದಿನಿಂದ ಆ ಬಗ್ಗೆ ಒಂದು ಮಾತೂ ಇಲ್ಲ.

ಒಮ್ಮೆ ನನ್ನ ತವರು ಮನೆಯಲ್ಲಿ ಮೇಲೆ ಹೇಳಿದಂತಹುದೇ ಪ್ರಸಂಗ ನಡೆದಿತ್ತು. ಅರ್ಧ ರಾತ್ರಿಯಲ್ಲಿ ಎದ್ದು ಬಾತ್‌ರೂಮಿಗೆ ಹೋಗಿದ್ದ ನನ್ನ ತಂಗಿ ಹೊರ ಬರುತ್ತಿದ್ದಂತೆ ಅದೆಲ್ಲಿತ್ತೋ, ಜಿರಳೆಯೊಂದು ಹಾರಿ ಅವಳ ಡ್ರೆಸ್ ಮೇಲೆ ಆಸೀನವಾಗಿದ್ದೇ ತಡ, ಅವಳು ಕಿಟಾರನೆ ಕಿರುಚಿದ್ದಕ್ಕೆ ಮನೆಯವರಿಗೆಲ್ಲ ಎಚ್ಚರವಾಯಿತು. ನಾನು ಎದ್ದು ಗಾಬರಿಯಿಂದ ಹೋಗಿ ನೋಡಿದೆ. ಭಯಭೀತಳಾದ ನನ್ನ ತಂಗಿಯ ಥೈಯತಕ್ಕ ನೃತ್ಯ ಕಂಡು ನಗತೊಡಗಿದೆ.

ಅಷ್ಟು ಹೊತ್ತಿಗೆ ನನ್ನ ತಂಗಿಯ ಡ್ರೆಸ್ ಮೇಲಿಂದ ಹಾರಿದ ಜಿರಲೆ, ಅಲ್ಲೇ ಅವಳ ಮುಂದೇನೇ ನೆಲದ ಮೇಲೆ ನೆಮ್ಮದಿಯಾಗಿ ಕೂತು ಬಿಡ್ತು, ಏನು ಮಾಡ್ತೀಯೋ ಮಾಡ್ಕೊ, ಎನ್ನೋ ಹಾಗೆ.

ನಮ್ಮ ತಂದೆಯಂತೂ, ಏನೇ ಹೀಗೆ ಗರ್ಭ ನಿರ್ಭೇದ ಆಗೋ ಹಾಗೆ ಕೂಗಕ್ಕೆ ಏನಾಯ್ತು? ಯಾರಾದರೂ ಹಾರ್ಟ್‌ವೀಕ್ ಆಗಿರೋವ್ರಿದ್ರೆ ಇಷ್ಟು ಹೊತ್ತಿಗೆ ಹಾರ್ಟ್‌ಅಟ್ಯಾಕ್ ಆಗಿರೋದು ಅಷ್ಟೆ ಎಂದು ಬೈಯ್ಯುತ್ತಿದ್ದರು. ನನ್ನ ತಂಗಿ, ಯಾರ್‍ಗೂ ಏನೂ ಆಗ್ಲಿಲ್ಲವಲ್ಲ, ನಮ್ಮನೇಲಿ ಎಲ್ಲರ ಹಾರ್ಟು ಚೆನ್ನಾಗಿದೇಂತ ಪ್ರೂವಾಯ್ತು ಎಂದು ಹಲ್ಲು ಕಿರಿದಳು.

ಅತ್ತ ಗಾಬರಿಯಿಂದ, ನಾನು ಹೇಗೆ ಬರ್ಲಿ? ಅಪ್ಪ, ಅದನ್ನು ಹೊಡಿ ಅಂತ ಕೂಗ್ತಿರೋ ತಂಗಿ, ಇತ್ತ ನಾವು, ಮಧ್ಯದಲ್ಲಿ ಜಿರಲೆ! ಅದನ್ನು ಹೊಡಿಯಕ್ಕೆ ಅಂತ ಪೊರಕೆ ತರೋದ್ರಲ್ಲಿ, ಅದಕ್ಕೆ ಸುಳಿವು ಸಿಕ್ಕಿತೋ ಏನೋ, ಸರಸರಾಂತ ನುಸುಳಿಕೊಂಡು ಸಾಮಾನುಗಳ ಸಂದೀಲಿ ಸೇರ್‍ಕೊಂತು. ನನ್ನ ತಂಗಿ ಬದುಕಿದೆಯಾ ಬಡಜೀವಾಂತ ಓಡಿ ಹೋಗಿ ಹಾಸಿಗೆಯ ಮೇಲೆ ಮುಸುಕು ಹಾಕಿ ಮಲಗಿ ಬಿಟ್ಟಳು. ಅಷ್ಟು ಹೊತ್ತಿನಲ್ಲಿ ಅದನ್ನು ಬೇಟೆಯಾಡೋ ಹುರುಪು ಯಾರಿಗೂ ಬಾರದೆ, ನಾವೆಲ್ಲ ಹೋಗಿ ಮಲಗಿದೆವು.

★★★

ಸಾಮಾನ್ಯವಾಗಿ ಹೆಂಗಸರು ಜಿರಳೆಗಳೆಂದರೆ ಹೆದರ್ತಾರೆ. ಅದರಲ್ಲೂ ಹಾರೋ ಜಿರಳೆ ನೋಡಿದ್ರಂತೂ ಕಿರಿಚಿಕೊಂಡು ಓಡಿ ಹೋಗುವವರೇ ಹೆಚ್ಚು. ಕೆಲವರಂತೂ ಅದನ್ನು ಕಂಡ ಕೂಡಲೇ ಅವರು ಭಯಭೀತರಾಗುತ್ತಾರೆ. ಇಂತಹ ಭೀತಿಗೆ ಕಟ್ಸಾರಿಡಾ ಫೋಬಿಯ ಅಂತಾರಂತೆ. ಅಲ್ಲ, ಎಂತಹ ಸಂದರ್ಭದಲ್ಲೂ ವಿಚಲಿತರಾಗದ ಅನೇಕ ಹೆಂಗಸರು ಜಿರಳೆಗಳನ್ನು ಕಂಡ ತಕ್ಷಣ ಭಯಭೀತರಾಗಿ ಅದೇಕೆ ಹಾಗೆ ಬೆದರಿ ತಲ್ಲಣಿಸುತ್ತಾರೆ! ಬಹುಶಃ ಹುಲಿ, ಕರಡಿ ಬಂದರೂ ಅವರು ಅಷ್ಟೊಂದು ಹೆದರುತ್ತಾರೋ ಇಲ್ಲವೋ? ಒಮ್ಮೆ ಬಸ್ಸಿನಲ್ಲಿ ಮೈಸೂರಿಗೆ ಹೋಗುತ್ತಿದ್ದಾಗ, ಹಿಂದಿನ ಸೀಟಿನಲ್ಲಿ ಕುಳಿತ ಹೆಂಗಳೆಯರ ಜೋರು ಚರ್ಚೆ ಕಿವಿಗೆ ಬಿತ್ತು. ಅದರ ಸಾರಾಂಶ – ಇಬ್ಬರಿಗೂ ಜಿರಳೆಗಳೆಂದರೆ ವಿಪರೀತ ಭಯ. ಅದೂ ರಾತ್ರಿಯ

ವೇಳೆ ಬಾತ್‌ರೂಮಿಗೆ ಹೋದಾಗ ಮೀಸೆ ತಿರುವುತ್ತಾ ಜಿರಳೆಗಳು ಅತ್ತಿತ್ತ ಓಡಾಡುವುದೇನಾದರೂ ಕಣ್ಣಿಗೆ ಬಿದ್ದರೆ ಜೋರಾಗಿ ಕಿರುಚಿಕೊಂಡು ಓಡಿ ಬರುತ್ತಾರಂತೆ. ಒಮ್ಮೆಯಂತೂ ಅವಳು ಹೀಗೆ ಕಿರುಚಿಕೊಂಡು ಓಡಿ ಬಂದಿದ್ದು ಕಂಡು, ಅಕ್ಕಪಕ್ಕದ ಮನೆಯವರು ಇವರ ಮನೆ ಬಾಗಿಲು ಬಡಿದು ಒಳಗೆ ನುಗ್ಗಿ ಸಮಾಚಾರವೇನೆಂದು ಕೇಳಿದರಂತೆ! ಅವಳ ಗಂಡ ಹೆಂಡತಿಗೆ ಚಿತ್ರಹಿಂಸೆ ಮಾಡುತ್ತಿದ್ದಾನೆಂದು ಅನುಮಾನ ಬಂದು, ಪೊಲೀಸಿಗೆ ದೂರು ಕೊಡುವ ಮುನ್ನ, ಗಂಡನನ್ನು ರೆಡ್‌ಹ್ಯಾಂಡೆಡ್ ಆಗಿ ಹಿಡಿದು, ನಂತರ ಪೊಲೀಸಿಗೆ ಕೊಡುವುದೆಂದು ಅವರು ತೀರ್ಮಾನಿಸಿ ಬಂದಿದ್ದರಂತೆ. ಅಂದಿನಿಂದ ಅವಳ ಗಂಡ ಮೊದಲು ಬಾತ್‌ರೂಮಿಗೆ ಹೋಗಿ ಜಿರಳೆ ಇಲ್ಲವೆಂದು ಖಚಿತಪಡಿಸಿಕೊಂಡು – ಇದ್ದರೆ... ಅದನ್ನು ಸಾಯಿಸಿ, ನಂತರ ಹೆಂಡತಿಗೆ ಬಾತ್‌ರೂಮಿಗೆ ಹೋಗಲು ಹೇಳುತ್ತಾನಂತೆ. ಹೀಗೆ ಹೇಳಿ ಆ ಹೆಂಗಸು ಜೋರಾಗಿ ನಗುತ್ತಿದ್ದಳು.

ಆದರೆ ಅಪವಾದ ಎನ್ನುವಂತೆ ನಾನು ಜಿರಳೆಗೆ ಹೆದರುವುದಿಲ್ಲ. ಬದಲಿಗೆ ಅದನ್ನು ಕಂಡಾಗ ಮನೆಯಿಂದಾಚೆ ಎಸೆಯುವವರೆಗೆ ಸಮಾಧಾನವಿಲ್ಲ. ಅದು ನನ್ನ ಪೌರುಷವನ್ನು ಕೆಣಕುತ್ತದೆ. ನಿನ್ನಿಂದ ಏನು ಮಾಡಲು ಸಾಧ್ಯ ಎಂದು ಸವಾಲೆಸೆಯುತ್ತೇನೋ ಎನ್ನುವಂತೆ ಕೈಗೆ ಸಿಗದೆ ಅತ್ತಿತ್ತ ಹಾರುತ್ತದೆ, ಇಲ್ಲವೇ ತಪ್ಪಿಸಿಕೊಂಡು ಎಲ್ಲೋ ತಲೆಮರೆಸಿಕೊಳ್ಳುತ್ತದೆ. ನನ್ನ ಕೈಯಿಂದ ತಪ್ಪಿಸಿಕೊಂಡು ಸಂದುಗೊಂದಿನಲ್ಲಿ ಸೇರಿಕೊಂಡರೂ ಅದನ್ನು ಹುಡುಕಿ ಬೇಟೆಯಾಡುವವರೆಗೆ ನನಗೆ ಸಮಾಧಾನವಿರುವುದಿಲ್ಲ. ಅದಕ್ಕೆ ಪೊರಕೆಯಿಂದ ನಾಲ್ಕೇಟು ಬಿಗಿದು, ಹಿಡಿದು ಆಚೆಗೆಸೆದರೆ, ಯುದ್ಧದಲ್ಲಿ ಜಯಶಾಲಿಯಾದ ಅನುಭವ. ಸಧ್ಯ, ಇದನ್ನು ಪ್ರಾಣಿ ದಯಾ ಸಂಘದವರು ಓದುವುದಿಲ್ಲ ಅಂದ್ಕೊತೀನಿ. ಹಾಗೇನಾದರೂ ಒಂದು ವೇಳೆ ಅವರು ಈ ಲೇಖನವನ್ನು ಓದಿ, ನಾನು ಪ್ರಾಣಿ ಹಿಂಸೆ ಮಾಡ್ತೀನಿ ಅಂತ ನಮ್ಮ ಮನೆ ಮುಂದೆ ಬಂದು ಧರಣಿ ಹೂಡಿದರೆ ಏನು ಮಾಡೋದು? ಹಾಂ, ಅದಕ್ಕೂ ಒಂದು ಉಪಾಯವಿದೆ. ಅವರನ್ನು ಮರ್ಯಾದೆಯಿಂದ ಒಳಗೆ ಕರೆದು, ನಮ್ಮ ಮನೆಯಲ್ಲಿರುವ ಎಲ್ಲಾ ಜಿರಳೆಗಳನ್ನೂ ಸುರಕ್ಷಿತವಾಗಿ ಹಿಡಿದುಕೊಂಡು ಹೋಗಿ. ನಮ್ಮ ಮನೆಯನ್ನು ಜಿರಳೆ ಮುಕ್ತ ಪ್ರದೇಶವನ್ನಾಗಿ ಮಾಡಿ ಎಂದು ಹೇಳುತ್ತೇನೆ. ಹಾಗೆ ಮಾಡಲು ನಾನು ಅವರಿಗೆ ಸೂಕ್ತ ಸಂಭಾವನೆ ಕೂಡ ಕೊಡಲು ಸಿದ್ಧ.

ಇರಲಿ, ಸಾಧಾರಣ ಜಿರಳೆಗೆ ಯಾಕೆ ಹೆದರ ಬೇಕೋ ನನಗಂತೂ ಅರ್ಥವಾಗುವುದಿಲ್ಲ. ಆದರೆ ಕಂದು ಬಣ್ಣದ ಈ ಜೀವಿ ಸಾಮಾನ್ಯವಾದುದಂತೂ ಅಲ್ಲ. ಘಟಾನುಘಟಿ ಡೈನೋಸಾರ್‌ಗಳೇ ಕಾಲಕ್ರಮದಲ್ಲಿ ಅಳಿದು ಹೋದರೂ ಸುಮಾರು ಮೂನ್ನೂರೈವತ್ತು ಮಿಲಿಯನ್ ವರ್ಷಗಳಿಂದ ಅವುಗಳ ವಂಶ ಉಳಿದುಕೊಂಡು ಬಂದಿದೆ ಎಂದರೆ, ಎಂತಹ ಕಠಿಣ ಪರಿಸರಕ್ಕೂ ಹೊಂದಿಕೊಳ್ಳುವಂತಹ ಜಿರಳೆಗಳ ಗಟ್ಟಿತನಕ್ಕೆ ಹ್ಯಾಟ್ಸ್ ಆಫ್ ಎನ್ನದೆ ವಿಧಿಯಿಲ್ಲ. ಜೊತೆಗೆ ಅವುಗಳ ಸರ್ವನಾಶ ಮಾಡಲು ಕಂಕಣ ತೊಟ್ಟು ನಿಂತಿರುವ ಕಂಪೆನಿಗಳಿವೆ, ಅವು ಕಾಲಕಾಲಕ್ಕೆ ವಿವಿಧ ರೀತಿಯ ಔಷಧಿಗಳನ್ನು ತಯಾರು ಮಾಡಿ ಜಿರಳೆ ಸಂತತಿ ನಿರ್ನಾಮ ಮಾಡುತ್ತೇವೆಂದು ಸಾರುತ್ತಾರೆ. ಅದನ್ನು ನಂಬಿ ಜಿರಳೆ ಔಷಧಿ ತಂದು ಹಾಕಿದರೂ, ಅನೇಕ ಜಿರಳೆಗಳು ಸಾಯುತ್ತವೇನೋ ನಿಜ. ಆದರೆ, ಔಷಧಿಯನ್ನು ಅಲ್ಪ ಪ್ರಮಾಣದಲ್ಲಿ ಸೇವಿಸಿ,

ನಾಲ್ಕು ದಿನ ಸತ್ತಂತೆ ಬಿದ್ದಿದ್ದು, ಪುಟಿದೇಳುವ ಜಿರಳೆಗಳು ಆ ಔಷಧಿಗೆ ನಿರೋಧ ಶಕ್ತಿ ಬೆಳೆಸಿಕೊಳ್ಳುತ್ತವೆ. ಇದು ಅವುಗಳ ಸಂತತಿಯೊಂದಿಗೆ ಮುಂದುವರೆಯುತ್ತದೆ. ಅಲ್ಲಿಗೆ ಆ ಔಷಧಿಗಳ ಪರಿಣಾಮ ಅತ್ಯಲ್ಪ ಅಥವಾ ನಗಣ್ಯವಾಗುತ್ತದೆ.

★★★

ಜಿರಳೆಗಳೆಂದರೆ ಅಸಹ್ಯಕರ, ಅಸಹನೀಯ, ಜಿಗುಪ್ಸೆ ಬರಿಸುವ ಪ್ರಾಣಿ ಎಂದೆಲ್ಲಾ ನಾವು ಬಣ್ಣಿಸಬಹುದೇನೋ? ಆದರೆ, ಆಸ್ಟ್ರೇಲಿಯಾದಲ್ಲಿ ಜಿರಳೆಗಳನ್ನು ಡಬ್ಬಿಗಳಲ್ಲಿಟ್ಟು ಸಾಕಿ, ಅವುಗಳ ರೇಸ್ ಏರ್ಪಡಿಸುತ್ತಾರಂತೆ! ಈ ಬಗ್ಗೆ ಓದಿ ನನಗೆ ಹೀಗೂ ಉಂಟೇ? ಎನ್ನಿಸಿತು.

ಅದಕ್ಕೂ ಮಿಗಿಲಾಗಿ ಈ ಭೀಭತ್ಸಕರ ಸುದ್ದಿ ಓದಿ ಇದೆಂತಹ ಸ್ಪರ್ಧೆಗಳು, ಪ್ರಾಣಾಂತಿಕವಾದವು ಎನ್ನಿಸಿತು. ಹಾಂ, ಜಿರಳೆಗಳೊಂದಿಗೆ ಪ್ರಾಣಾಂತಿಕ ಸ್ಪರ್ಧೆ? ಇದೇನು ಹೀಗೆ ವಿಚಿತ್ರವಾಗಿ, ಒಗಟು ಮಾತು ಹೇಳ್ತಿದೀನಿ ಅನ್ನಿಸ್ತಿದೀಯಾ? ಇಗೋ ನಾನು ಓದಿದ ಮಾಹಿತಿ ಹೀಗಿದೆ – ಫ್ಲಾರಿಡಾದಲ್ಲಿ 2012ರಲ್ಲಿ ನಡೆದ ಸಂಗತಿ. ಒಬ್ಬ ಸಾಕು ಪ್ರಾಣಿ ಮಾರುವ ಅಂಗಡಿಯವ ಮೋಜಿಗಾಗಿ ಜಿರಳೆ ತಿನ್ನುವ ಸ್ಪರ್ಧೆ ಏರ್ಪಡಿಸಿದ್ದನಂತೆ, ಅದೂ ಬದುಕಿರುವ ಜಿರಳೆಗಳು! ಗೆದ್ದವನಿಗೆ ದುಬಾರಿ ಬೆಲೆಯ ಹೆಬ್ಬಾವು ಬಹುಮಾನ! ಆ ಹೆಬ್ಬಾವನ್ನು ಗೆಳೆಯನಿಗೆ ಮಾರಿ ಅಪಾರ ಹಣ ಸಂಪಾದಿಸುವ ಆಸೆ ಒಬ್ಬ ವ್ಯಕ್ತಿಗೆ. ಅಂತೂ ಅವನು ಯಶಸ್ವಿಯಾಗಿ ಜಿರಳೆಗಳನ್ನು ಸ್ವಾಹಾ ಮಾಡಿ, ಗೆದ್ದು ಅಪಾರ ಹಣದ ಒಡೆಯನೇನೋ ಆದ. ಆದರೆ, ಸ್ವಲ್ಪ ಹೊತ್ತಿನಲ್ಲೇ, ವಾಂತಿಯಾಗಿ ಬೆಳಗಿನ ವೇಳೆಗೆ ಮರಣ ಹೊಂದಿದ. ಅವನು ಗೆದ್ದ ಹಣ ಬಹುಶಃ ಅವನನ್ನು ಅಣಕಿಸುತ್ತಿತ್ತೋ ಏನೋ? ಎಂತಹ ಹುಚ್ಚು ಸ್ಪರ್ಧೆ? ಅದನ್ನು ಏರ್ಪಡಿಸಿದ ಭೂಪರನ್ನು ಸ್ಯಾಡಿಸ್ಟ್ ಎನ್ನಬೇಕೇ? ಇಲ್ಲವೇ ಹಣದ ಆಸೆಗೆ ಏನು ಬೇಕಾದರೂ ಮಾಡಬಲ್ಲೆ ಎನ್ನುವ ಜನರ ಹುಚ್ಚು ನೋಡಿ ನಗಬೇಕೇ? ಒಟ್ಟಿನಲ್ಲಿ ಜನ ಮರುಳೋ ಜಾತ್ರೆ ಮರುಳೋ ಎಂಬ ಸಮಾಚಾರದಂತೆಯೇ ಜನರ ವ್ಯವಹಾರ ಕೂಡ!

# ನಗೆಸಂಜೀವಿನಿ

ನಗು ಅಂದರೆ ಮೊಗ ಹತ್ತಾಗಬೇಕು ರಾವಣನಂತೆ

ಸದಾ ಸುಪ್ರಸನ್ನವದನರಾಗಿರಬೇಕು ಶ್ರೀರಾಮನಂತೆ

ಹಾಸ್ಯಚಟಾಕಿ ಕೇಳಿ ಮೊಗವಾಗಲಿ
ಹನುಮಂತನಂತೆ

ಇಡೀ ಬದುಕಾಗಬೇಕು ಹಾಸ್ಯ ಸಂಜೀವಿನಿಯಂತೆ

**- ದಂನಆ**

- ಬದುಕೆಂದರೆ ಇಲ್ಲಿಯವರೆಗೂ ನೀವು ಮಾಡಲಾಗದೆ ಇರುವುದಲ್ಲ, ಮುಂದೆ ಇನ್ನೂ ಮಾಡಲಿಕ್ಕೆ ಇರುವಂತಹದು.
- ಅಡಿಗೆಯ ಮನೆಯೇ ಆಸ್ಪತ್ರೆ, ಆಹಾರವೇ ಔಷಧ.
- ಬದುಕಿನ ಎರಡು ಮಹತ್ತರ ಘಳಿಗೆಗಳು - ಒಂದು, ಹುಟ್ಟಿದ ದಿನ; ಎರಡು, ಏಕೆ ಹುಟ್ಟಿದ್ದೇನೆ ಎಂದು ಅರಿತುಕೊಂಡ ದಿನ.
- ಯು ಕೆನಾಟ್ ಲೈ ಸಕ್ಸಸ್‌ಫುಲಿ ವಿತೌಟ್ ಬೀಯಿಂಗ್ ಏಬಲ್ ಟು ರೀಡ್ ಯುವರ್ ವಿಕ್ಟಿಮ್ಸ್ ಮೈಂಡ್.
- ದೇವರನ್ನು ಹೇಗೆ ನಗಿಸುವುದು? ತುಂಬಾ ಸುಲಭ. ನೀವು ಹಾಕಿಕೊಂಡಿರುವ ಮಹತ್ತರ ಯೋಜನೆಗಳನ್ನು ಅವನಿಗೆ ತಿಳಿಸಿದರೆ ಸಾಕು.
- ಅಮ್ಮ ಅಮ್ಮನೇ - ಎರಡು ಕಾಲಿನದಾಗಲೀ, ನಾಲ್ಕು ಕಾಲಿನದಾಗಲೀ.
- ನಾನು ಏನೋ ಒಂದು ಉದ್ದೇಶಕ್ಕಾಗಿ ಬದುಕಿದ್ದೇನೆ ಎಂದುಕೊಳ್ಳಿ. ಏನಿರಬಹುದು ಆ ಉದ್ದೇಶ?

**ಮೆಲುಕು ಹಾಕುವಂತಹ ಮಾತುಗಳ ಗುಚ್ಛ**

- ನಾನು ನಿನ್ನನ್ನು ದ್ವೇಷಿಸುತ್ತಿದ್ದರೂ ನೀನು ಚೆನ್ನಾಗಿ ಉಂಡು ತಿಂದು ಮಾಡುತ್ತೀ. ಏಕೆಂದರೆ ನಾನು ದ್ವೇಷಿಸುತ್ತಿರುವುದು ನಿನಗೆ ಗೊತ್ತಿಲ್ಲ. ಆದರೆ ನಾನು ಮಾತ್ರ ಸರಿಯಾಗಿ ಊಟ ಮಾಡಲು ಆಗುತ್ತಿಲ್ಲ. ಏಕೆಂದರೆ ನಿನ್ನ ಮೇಲೆ ಹಗೆ ಸಾಧಿಸುವುದು ಹೇಗೆ ಎಂಬುದರಲ್ಲೇ ನಾನು ಮಗ್ನ.
- ಪರ್‌ಫೆಕ್ಷನಿಸ್ಟ್‌ಕೊ ಇಂಪ್ರುವ್ ಕರ್ನಾ ಮುಷ್ಕಿಲ್ ಹೋತಾ ಹೈ....
- ಹಸಿವೇ ರುಚಿ ಅಲ್ಲವೆ?
- ಹಿಂದೆಲ್ಲಾ 'ಡಾಕ್ಟರ್‌ನ ಕರೆಸಿ' ಎನ್ನುತ್ತಿದ್ದರು ಈಗ 'ಆಂಬುಲೆನ್ಸ್ ಕರೆಸಿ' ಎನ್ನುತ್ತಾರೆ.
- ಸೊನ್ನೆಯಾಗಿದ್ದರೆ ಮಾತ್ರ ಅಗತ್ಯಕ್ಕೆ ತಕ್ಕಂತೆ ಯಾವ ಸಂಖ್ಯೆಯೂ ಆಗಲು ಸಾಧ್ಯ. ಮತ್ತು ಏನೂ ಆಗಿಲ್ಲದಿರಲೂ ಸಾಧ್ಯ.
- ಗುಟ್ಟು ಎಂದರೆ ಯಾರಿಗೂ ಗೊತ್ತಿಲ್ಲದಿರುವುದು; ಒಬ್ಬನಿಗೆ ಮಾತ್ರ ಗೊತ್ತಿರುವುದು. ನಾಳೆ ಎಲ್ಲರಿಗೂ ಗೊತ್ತಾಗುವುದು.
- ಡೋಂಟ್ ಬಿ ಯುವರ್‌ಸೆಲ್ಫ್ - ಬಿ ಸಮ್‌ಒನ್ ಎಲ್ಸ್ ಎ ಲಿಟಲ್ ನೈಸರ್.
- ಬೆನ್ನಿಗೆ ಚೂರಿ ಹಾಕುವವರು ಹಿಂದೆಯೇ ನಿಂತಿರಬೇಕಿಲ್ಲ.

✷

# ಫಿಟ್ ಆಗುವುದೆ? ಏನು ಹಾಗೆಂದರೆ...?

**- ಸಹನಾ ಪ್ರಸಾದ್**

**ಲವಲವಿಕೆಯಿಂದ ಕುಣಿಯುತ್ತಿರುವವರ ಹಾಗೆ ಆಗಲು ಹೊರಟಾಗ....**

ಇತ್ತೀಚಿಗೆ ಬರುತ್ತಿರುವ ಒಂದು ಜಾಹೀರಾತು ನನ್ನ ಮನಸೆಳೆದಿದೆ. ಅದೇ, ಒಬ್ಬಾತ ''ಫಿಟ್'' ಆಗಲು ಬೇರೆ ಬೇರೆ ತರಹದ ಆಟ ಆಡಲು ಶುರು ಮಾಡುತ್ತಾನೆ. ಈಜು ಹೊಡೆಯಲು ಹೋದಾಗ ಚೆಂಡೊಂದು ತಲೆಗೆ ಬಂದು ಹೊಡೆಯುತ್ತದೆ. ಮತ್ತೇನೋ ಮಾಡಲು ಹೋದರೆ ಇನ್ನೇನೋ ಆಗುತ್ತದೆ. ನನಗೇಕೆ ಇಷ್ಟವಾಯಿತೆಂದರೆ ನನ್ನ ಕತೆಯೂ ಸುಮಾರು ಇದೇ ತರಹ. ಸ್ವಾಭಾವಿಕವಾಗಿ ನಾನು ಸಣ್ಣ, ಎಷ್ಟು ತಿಂದರೂ, ತಿನ್ನದಿದ್ದರೂ ದಪ್ಪ ಆಗುವುದೇ ಇಲ್ಲ. ಅದಕ್ಕೇ ಏನೋ ವ್ಯಾಯಾಮ, ನಡಿಗೆ, ಯೋಗ ಇವುಗಳಿಂದ ನಾನು ದೂರ. ಚಿಪ್ಸ್, ಪಕೋಡ, ಸಮೋಸ ಇಂಥ ಪದಾರ್ಥಗಳಿಗೆ ಬಹಳ ಹತ್ತಿರ. ನನ್ನ ಪಾಡಿಗೆ ನಾನು ಹಾಯಾಗಿದ್ದೆ. ಈ ಮುಖಪುಟದ ಸಹವಾಸ ಶುರುವಾದ ಮೇಲೆ ಆ ನೆಮ್ಮದಿ ಇನ್ನೆಲ್ಲಿ. ಬೆಳಗಾಗೆದ್ದು ನನ್ನ ಗೆಳತಿಯರು ಅವರುಗಳು ವಾಕ್ ಮಾಡಿದ್ದು ಗ್ರೀನ್ ಟೀ ಕುಡಿದಿದ್ದು, ಬಾರ್ಲೀ ನೀರು ಸಿಪ್ ಮಾಡಿದ್ದು ಓಟ್ಸ್ ತಿಂದಿದ್ದು - ನೋಡಿ, ಕೇಳಿ, ಮನಸ್ಸು ಒಂದು ತರಹ ಆಗಲು ಶುರುವಾಯಿತು. ಚೆನ್ನಾಗಿ ತುಪ್ಪ ಹಾಕಿ ಮಾಡಿದ ದೋಸೆ, ವಡೆ, ಕೇಸರಿಬಾತು, ಹಾಲು-ಸಕ್ಕರೆ ತುಂಬಿದ ಕಾಫಿ, ಬೆಳಗೆದ್ದು ಆರಾಮವಾಗಿ ಪೇಪರ್ ಓದಿ, ಇನ್ನೊಮ್ಮೆ ಸಣ್ಣ ನಿದ್ದೆ ತೆಗೆದ ನಾನೆಲ್ಲಿ, ಲವಲವಿಕೆಯಿಂದ ಕುಣಿಯುತ್ತಿರುವ ಅವರೆಲ್ಲಿ? ಛೆ, ನಾನೂ ಏನಾದರೂ ಮಾಡಬೇಕೆಂಬ ಬಯಕೆ ಉಂಟಾಯಿತು.

ಅವತ್ತಿನ ದಿನ ನನ್ನ ಆತ್ಮೀಯ ಗೆಳತಿ ಹೊಸ ನಮೂನೆಯ ಟ್ರ್ಯಾಕ್ ಪ್ಯಾಂಟ್ ತೊಟ್ಟು, ಕೈಯಲ್ಲಿ ಸೂಪ್ ಬೌಲ್ ಹಿಡಿದು ವಿವಿಧ ಭಂಗಿಯ ಪಟ ಹಾಕಿದಾಗ ಅದಕ್ಕೆ ಸುಮಾರು ಲೈಕುಗಳು ಪಟಪಟನೆ ಬಿದ್ದಾಗ, ನಾನು ಬೆಳಗ್ಗಿಂದ ಸೋಂಬೇರಿಯ ಹಾಗೆ ಇದ್ದದ್ದು, ಎರಡು ಉದ್ದಿನ ವಡೆ, ಮೂರು ಕಪ್ ಸಾಂಬಾರು ತಿಂದಿದ್ದು ನೆನಪಾಗಿ ನಾನ್ಯಾರಿಗೆ ಕಡಿಮೆ ಎಂದು ಪ್ಲಾನ್ ಮಾಡಿಯೇ ಬಿಟ್ಟೆ. ರಾತ್ರಿ 9 ಗಂಟೆಗೆ ಸ್ಪೋರ್ಟ್ಸ್ ಶಾಪಿಗೆ ಹೋಗಿ ಶೂ, ಟ್ರ್ಯಾಕ್ ಪ್ಯಾಂಟ್, ಟೀ-ಷರ್ಟ್ ಕೊಳ್ಳುವಾಗ ಎದೆ ಧಸಕ್ಕೆಂದಿತು. ಈ ಪಾಟಿ ಬೆಲೆ ಬಾಳುವ ವಸ್ತುಗಳನ್ನು ಕೊಂಡ ಮೇಲೆ ಅದನ್ನು ಬಳಸಲೇಬೇಕು. ಅಯ್ಯೋ, ಇದೇ ದುಡ್ಡಿನಲ್ಲಿ ಒಳ್ಳೆ ಪೂರಿ ಸಾಗು, ಮಸಾಲೆ ದೋಸೆ, ರವೆ ವಡೆ, ಬೋಂಡಾ ಇತ್ಯಾದಿ ಸುಮಾರು ದಿನಗಳ ಕಾಲ ಒಳ್ಳೆ ಹೋಟೆಲಿನಲ್ಲಿ ಮೆಲ್ಲಬಹುದಿತ್ತಲ್ಲ ಎಂದನಿಸಿದ್ದು ನಿಜ.

ಇರಲಿ, ಇಷ್ಟೆಲ್ಲಾ ಸಾಮಾನು ಹೊತ್ತು ಬರುವಾಗ ಬಾಯಾರಿಕೆ, ಹಸಿವು ಎಂದು ಕಂಡ ದರ್ಶಿನಿಗೆ ನುಗ್ಗಿ, ಗೋಬಿ ಮಂಚೂರಿ, ರೋಟಿ ಕರಿ, ಐಸ್ ಕ್ರೀಮ್ ಮೆದ್ದು ಬರುವ ವೇಳೆಗೆ

ಸುಮಾರು ಹೊತ್ತಾಗಿತ್ತು. ಲೇಟಾಗಿ ಮಲಗಿದ ಕಾರಣ ಬೆಳಗ್ಗೆ ಏಳಲು ಆಗಲಿಲ್ಲ. ಸರಿ, ನಾಳೆಯಿಂದ ಹೋದರಾಯಿತು ಎಂದುಕೊಂಡ ನಾಳೆ ಬರಲೇ ಇಲ್ಲ. ಸುಮಾರು ದಿನಗಳಾದ ಮೇಲೆ ಮುಖಪುಟದಲ್ಲಿ ರಾರಾಜಿಸುತ್ತಿರುವ ಹತ್ತು ಹಲವು ಪಟಗಳಿಂದ ತಪ್ಪಿಸಿಕೊಳ್ಳಲಾಗದೆ, ಮಾರನೆಯ ದಿನ ಬೈಕೊಳ್ಳುತ್ತಲೇ ಎದ್ದು, ಹೊಸ ಬಟ್ಟೆ ತೊಟ್ಟು ಹೊರಟೆ. ಮೂರು ಮನೆಯಾಚೆ ಇರುವ, ಮೊನ್ನೆ ತಾನೆ ಮಗಳ ಬಾಣಂತನ ಮುಗಿಸಿ ಫಾರಿನ್ ರಿಟರ್ನ್ ಆದ ಅಂಬುಜಮ್ಮ ಸಿಕ್ಕರು. ಮಾತನಾಡುತ್ತಾ ಸಮಯ ಸರಿದಿದ್ದು ಗೊತ್ತಾಗಲೇ ಇಲ್ಲ. ಅವರು ಕೊಟ್ಟ ವಿದೇಶಿ ಸೆಂಟ್ ಬಾಟಲ್ ಹಿಡಿದು ಮನೆಗೆ ಬರುವಾಗ ಎದುರು ಮನೆ ಗೀತಾಳ ಜತೆ ಬರುತ್ತಿದ್ದ ಟಾಮಿ ಅಟ್ಟಿಸಿಕೊಂಡು ಬಂತು. ಏಲಾ ಇದರ, ಹುಟ್ಟಿದಾಗಲಿಂದ ನನ್ನನ್ನು ನೋಡಿದೆ ಮುಂಡೇದು। ಯಾಕೆ ಹೀಗಾಡ್ತಿದೆ ಎಂದು ಯೋಚಿಸುತ್ತಾ ಓಡುತ್ತಿರುವಾಗ ಸೆಂಟ್ ಬಾಟಲ್ ಬಿದ್ದು ಒಡೆದು ಟಾಮಿ ಗಮನ ಅತ್ತ ಸರಿದಿತ್ತು. ಅದು ಚೆಲ್ಲಿದ ದ್ರವ್ಯ ನೆಕ್ಕಿ ಹುಚ್ಚುಚ್ಚಾಗಿ ಆಡಲು ಶುರು ಮಾಡಿದಾಗಲೇ ಗೊತ್ತಾಗಿದ್ದು – ಅಂಬುಜಮ್ಮ ಸೆಂಟ್ ಬದಲು ಯಾವುದೋ ಎಣ್ಣೆ ಬಾಟಲು ಕೈಗಿತ್ತಿದ್ದಾರೆಂದು.

ಅವರ ಗಂಡ ಅವರಿಗೆ, ನನ್ನ ಗಂಡ ನನಗೆ, ಗೀತಳ ಗಂಡ ಅವಳಿಗೆ ಅರ್ಚನೆ ಮಾಡಿದಲ್ಲಿ, ಓಟದ ಭರದಲ್ಲಿ ನನ್ನ ಹೊಸ ಶೂ ಕಿತ್ತು ಬಂದಲ್ಲಿ, ಮೊದಲ ದಿನದ ವಾಕಿಂಗ್ ಪ್ರಸಂಗ ಮುಗಿಯಿತು.

ಅದಾದ ಮೇಲೆ ನಡೆದುದು ಇಷ್ಟು – ರಸ್ತೆಯಲ್ಲಿರುವ ಗೂಡಂಗಡಿಯಿಂದ ಹೊರಹೊಮ್ಮುವ ಇಡ್ಲಿ ವಡೆ ವಾಸನೆ ತಾಳಲಾಗದೆ ತಿಂದು ಹೊಟ್ಟೆ ಕೆಡಿಸಿಕೊಂಡಿದ್ದು. ಅಲ್ಲಿಗೆ ವಾಕಿಂಗ್ ಸಂಪೂರ್ಣವಾಗಿ ಬಂದ್ ಆಯಿತು. ಮುಂದಿನದು ಯೋಗ ತರಗತಿಗಳು. ಕೈ ಕಾಲು ನೋವು ಬಂದು ವಾರಕ್ಕೆರಡು ದಿನ ಚಕ್ಕರ್ ಆದ ಮೇಲೆ ಯೋಗ ಕಷ್ಟವೆನಿಸಿತು. ಆದರೆ ಒಳ್ಳೆ ಹೀರೋ ತರಹ ಇರುವ ಹೊಸ ಟೀಚರ್ ಬಂದ ಮೇಲೆ ನನ್ನ ವಯಸ್ಸಿನ ಎಲ್ಲಾ ಹೆಂಗಸರಿಗೂ ಆಸಕ್ತಿ ಚಿಗುರಿತು. ಆದರೆ ಆತ ನಮ್ಮತ್ತ ನೋಡದೆ, ಚಿಕ್ಕ ವಯಸ್ಸಿನ ಹುಡುಗಿಯರ ಮೇಲೆ ಗಮನ ಹರಿಸಿದಾಗ, ಸುಮಾರು ಜನ ಕ್ಲಾಸಿಗೆ ಚಕ್ಕರ್ ಹಾಕಲು ತೊಡಗಿದರು. ಹರಟಲು ಜತೆಯಿಲ್ಲದೆ, ಹದಿಹರೆಯದವರ ರೊಮಾನ್ಸ್ ವೀಕ್ಷಿಸಲು ಮನಸ್ಸಿಲ್ಲದೆ ಅದಕ್ಕೂ ಬೈ ಹೇಳಿದ್ದಾಯಿತು. ಈಜು, ಸಾಂಬಾ, ಏರೋಬಿಕ್ಸ್ ಇವೆಲ್ಲ ಚಿಕ್ಕವರಿಗೆ ಸೈ ಎಂದು ಬಿಟ್ಟಾಯಿತು. ಅದಕ್ಕೆ ಇನ್ನೊಂದು ಕಾರಣ ಅವರುಗಳು ಹೇಳಿದ ಸಿಕ್ಕಾಪಟ್ಟೆ ಜಾಸ್ತಿ ಫೀ ಕೂಡ ಕಾರಣ.


ಈಗ ಮನೆಯಲ್ಲಿ ಉಂಡು ತಿಂದು ಹಾಯಾಗಿದ್ದೀನಿ. ಆರಾಮವಾಗಿ ಎದ್ದು, ಬೇಕಾದ್ದು ತಿಂದು ನೆಮ್ಮದಿಯಾಗಿ ಇರಲು, ಮುಖಪುಟದಲ್ಲಿನ ಚಿತ್ರಗಳು ಕಂಡಾಗ ಕಣ್ಣು ಮುಚ್ಚಲು ಕಲಿತಿರುವೆ. ಸ್ವಲ್ಪ ವ್ಯಾಯಾಮ ಮಾಡಬೇಕು ರೀ, ಸಣ್ಣ ಇದ್ದರಷ್ಟೇ ಸಾಲದು ಎಂಬ ಸಲಹೆಗಳಿಗೆ ಕಿವುಡಳಾಗಿದ್ದೀನಿ.

❋

# ವ್ಯಂಗ್ಯ ಮೆಲುಕು

**- ಪ್ರಕಾಶ್ ಶೆಟ್ಟಿ**

ವ್ಯಂಗ್ಯಚಿತ್ರಕಾರರು ಅಂಗಡಿಗಳತ್ತ ನೋಡುವಾಗಲೂ ಅವರದ್ದು ವಕ್ರದೃಷ್ಟಿ. ಅದಕ್ಕೆ ಸಾಕ್ಷಿ- ನಾಡಿಗ್, ಜೀವನ್ ಮತ್ತು ಸ್ವಾಮಿ ಅವರ ಈ ಕಾರ್ಟೂನ್‌ಗಳು.



ಒಳ್ಳೇ ಕವನಗಳಪ್ಪಾ, ನಾನು ಬರೆದಿರೋದು- ಕೇಜಿಗೆ ಸ್ವಲ್ಪ ರೇಟು ಜಾಸ್ತಿ ಹಾಕಿಕೊಡು....



ಜೆರಾಕ್ಸ್ ಅಂಗಡಿಯಿಟ್ಟುಕೊಂಡವನು ನಾನಲ್ಲ..... ನನ್ನ ತಮ್ಮ..



ಯಾವ ಕುರ್ಚಿಯನ್ನು ಬೇಕಾದರೂ ಕೊಂಡ್ಕೊಳ್ಳಿಯಮ್ಮಾ.. ಆದ್ರೆ ಇಲ್ಲಿ ಕೂತು ಪರೀಕ್ಷೆ ಮಾಡಬೇಡಿ!

# ಸುಕುಮಾರನ ಸಂಜೀವಿನಿ

**- ಪಾಲಹಳ್ಳಿ ವಿಶ್ವನಾಥ್**

**ಯಾ**ವ ಘಳಿಗೆಯಲ್ಲಿ ಮಗುವಿಗೆ ಸುಕುಮಾರ ಎಂಬ ಹೆಸರಿಟ್ಟರೋ ಏನೋ ಬೆಳೆದು ಯೌವನಾವಸ್ಥೆಯನ್ನು ತಲುಪಿದಾಗಲೂ ಅವನು ಸುಕುಮಾರನಾಗಿಯೇ ಉಳಿದ. ಹಳೆಯ ಗಾದೆ 'ತೀರ್ಥ ತೆಗೆದುಕೊಂಡರೆ ಶೀತ, ಮಂಗಳಾರತಿ ತೆಗೆದುಕೊಂಡರೆ ಉಷ್ಣ.' ಅವನ ವಿಷಯದಲ್ಲಿ ಪೂರ್ಣವಾಗಿ ನಿಜವಾಗಿದ್ದಿತು. ಆಯಾಯ ಕಾಲಕ್ಕೆ ತಕ್ಕಂತೆ ಬರಬೇಕಾದ ಖಾಯಿಲೆಗಳಲ್ಲಿ ಯಾವುವೂ ಸುಕುಮಾರನನ್ನು ಬಿಡುತ್ತಿರಲಿಲ್ಲ. ಹೀಗೆಯೇ ಬೆಳೆದ ಸುಕುಮಾರನಿಗೆ ಸಿವಿಲ್ ಇಂಜಿನಿಯರಿಂಗ್ ಸೀಟ್ ಸಿಕ್ಕಿತು; ಆದರೆ ಡ್ರಾಯಿಂಗ್ ಬೋರ್ಡ್ ಇತ್ಯಾದಿ ಹೊತ್ತುಕೊಂಡು ಓಡಾಡಲು ಕಷ್ಟವಾಗುತ್ತದೆ ಎಂದು ಮನೆಯವರು ಬೇಡ ಎಂದರು. ಮೆಡಿಕಲ್‌ನಲ್ಲೂ ಸೀಟು ಸಿಕ್ಕಿತು; ಆದರೆ ಇಂತಹ ಡಾಕ್ಟರನ್ನು ನೋಡಿದರೆ ರೋಗಿ ಎಂದು ತಪ್ಪು ತಿಳಿಯಬಹುದು ಎಂದು ಅದೂ ಬೇಡ ಎಂದರು. ಕಡೆಯಲ್ಲಿ ಇಂಗ್ಲಿಷ್ ಸಾಹಿತ್ಯವನ್ನು ಅಧ್ಯಯನ ಮಾಡಿ ಮೇಷ್ಟರ ಕೆಲಸಕ್ಕೆ ಅರ್ಜಿಹಾಕಿಕೊಂಡ. ಬೆಂಗಳೂರಿನಲ್ಲಿ ಯಾವ ಕಾಲೇಜಿನಲ್ಲೂ ಕೆಲಸ ಸಿಗದೆ ಮಂಡ್ಯದ ಹೊರಗಿನ ಕಾಲೇಜೊಂದರಲ್ಲಿ ಕೆಲಸ ಸಿಕ್ಕಿತು. ಮನೆಯವರು ಬೇಡವೆಂದರೂ ಧೈರ್ಯಮಾಡಿ ಸುಕುಮಾರ ಮಂಡ್ಯಕ್ಕೆ ಹೊರಟ. ಅಲ್ಲಿ ಕಾಲೇಜಿಗೆ ಹತ್ತಿರದ ಮನೆಯೊಂದರ ಮೇಲಿನ ರೂಮನ್ನು ಬಾಡಿಗೆಗೆ ತೆಗೆದುಕೊಂಡು ವಾಸಿಸಲು ಶುರುಮಾಡಿದ.

ಅಲ್ಲಿ ಅವನಿಗೆ ಕಾಲೇಜಿನಲ್ಲಿಯೇ ಚರಿತ್ರೆಯ ಪಾಠ ಮಾಡುತ್ತಿದ್ದ ರೋಹಿಣಿ ಗುರುತಾದಳು. ಸ್ನೇಹ ನಿಧಾನವಾಗಿ ಪ್ರೇಮಕ್ಕೆ ತಿರುಗಿತು. ಆದರೆ ಮನೆಯವರಿಗೆ ಹೇಳಲು ಇಬ್ಬರೂ ಹಿಂದೇಟು ಹಾಕುತ್ತಿದ್ದರು. ಸುಕುಮಾರನ ಮನೆಯವರು ಸುಲಭವಾಗಿ ಒಪ್ಪಿಗೆ ನೀಡುತ್ತಿದ್ದರೋ ಏನೋ! ಆದರೆ ರೋಹಿಣಿಯ ಮನೆಯವರು ಇದಕ್ಕೆ ಒಪ್ಪುವುದು ಅಸಾಧ್ಯವಾಗಿತ್ತು. ವಿರೋಧ ಬರಬಹುದಾದ್ದು ರೋಹಿಣಿಯ ತಂದೆಯವರಿಂದ. ದೇಶಿಕಾಚಾರ್ ಎಂಬ ಅವರ ನಿಜ ಹೆಸರನ್ನು ಯಾರು ಹೇಳುತ್ತಿರಲಿಲ್ಲ, ಎಲ್ಲರೂ ಅವರನ್ನು ಟೈಗರ್ ವರದಾಚಾರ್ಯ ಎಂದೇ ಕರೆಯುತ್ತಿದ್ದರು. ಅವರ ಕೋಪ ತಾಪವನ್ನು ನೋಡಿ ಅವರ ಸಹೋದ್ಯೋಗಿಯರು ಯಾರೋ ಹಿಂದೆ ಅವರಿಗೆ ಈ ಬಿರುದನ್ನು ಕೊಟ್ಟಿದ್ದರು. ಒಂದೊಂದು ಬಾರಿ ಅವರೇ ತಪ್ಪಿ ವರದಾಚಾರ್ಯ ಎಂದು ಸಹಿ ಮಾಡಿದ್ದೂ ಉಂಟು! ಅವರು ಬರೇ ರೋಹಿಣಿಯ ತಂದೆ ಎಂದಾಗಿದ್ದರೆ ಸುಕುಮಾರ ಏನಾದರೂ ಧೈರ್ಯಮಾಡುತ್ತಿದ್ದ. ಆದರೆ ಅವರು ಅವನ ಕಾಲೇಜಿನ ಪ್ರಿನ್ಸಿಪಾಲರೂ ಆಗಿದ್ದರು. ಈಗ ನೀವೇ ಹೇಳಿ ಸುಕುಮಾರ ಏನು ಮಾಡಲು ಸಾಧ್ಯ? ಮದುವೆಯಾಗಬೇಕೆನ್ನುವ ಹೆಣ್ಣಿನ ತಂದೆ ಯಾರೇ ಆದರೂ ಜೋರು ಮಾಡುವವರೇ! ಅದರಲ್ಲೂ ಅವರು ಟೈಗರ್ ಇತ್ಯಾದಿ ಹೆಸರನ್ನು ಬೇರೆ ಗಳಿಸಿದ್ದರೆ? ಅದೆಲ್ಲದರ ಜೊತೆ ಆ ಹೆಣ್ಣಿನ ತಂದೆ ನಿಮ್ಮ ಮೇಲಧಿಕಾರಿ ಕೂಡ ಆಗಿದ್ದರೆ? ಈ ಎಲ್ಲ ಅಡಚಣೆಗಳಿಂದ ಸುಕುಮಾರ – ರೋಹಿಣಿಯರ ಪ್ರಣಯಕ್ಕೆ ಭವಿಷ್ಯವಿದ್ದ ಹಾಗೆ ಕಾಣಲಿಲ್ಲ.

ರೋಹಿಣಿ ತಾಯಿ ಇಲ್ಲದೆ ಬೆಳೆದ ಹುಡುಗಿ. ಅದಕ್ಕೆ ಏನೋ ಅವಳಲ್ಲಿ ಮಾತೃಮಮತೆ ಬಹಳ ಎದ್ದಿತ್ತು. ಸುಕುಮಾರನನ್ನು ಕಂಡ ಮೊದಲ ದಿನವೇ 'ನೋಡೋಕೆ ಎಷ್ಟು ಚೆನ್ನಾಗಿದ್ದಾನೆ ಆದರೆ ಸ್ವಲ್ಪ ನರಪೇತಲ ನಲ್ಲವೆ' ಎಂದುಕೊಂಡಳು. ಪ್ರೀತಿ ಹುಟ್ಟಿದ ನಂತರ ಅವನಿಗೆ ಖಾಯಿಲೆ ಬೀಳದಿರಲು ಅನೇಕ ಸಲಹೆಗಳನ್ನು ಕೊಡುತ್ತಿದ್ದಳು. ಆಗಾಗ್ಗೆ ಮನೆಯಿಂದ ಕಷಾಯಗಳನ್ನು ಮಾಡಿಕೊಂಡು ತಂದು ಅವನಿಗೆ ಕುಡಿಸುತ್ತಿದ್ದಳು.

ಹೀಗೆ ಸಂಬಂಧ ಮುಂದೆ ಹೋಗದಿರುವುದನ್ನು ಕಂಡು ಸುಕುಮಾರ ಒಂದು ದಿನ ರೋಹಿಣಿಗೆ ''ಈವತ್ತು ರಾತ್ರೀನೇ ನಿಮ್ಮ ಮನೆಗೆ ಬಂದು ನಮ್ಮ ಮದುವೆ ವಿಷಯ ಮಾತಾಡುತ್ತೀನಿ'' ಎಂದ. ಅದಕ್ಕೆ ರೋಹಿಣಿ 'ಈವತ್ತಾ! ಬೇಡ, ಬೇಡ' ಎಂದಳು.

'ಏಕೆ' ಎಂದು ಕೇಳಿದಾಗ,

'ನಿನಗೇ ಗೊತ್ತಲ್ಲವೇ ನಾಳೆ ನಮ್ಮ ರಾಜ್ಯದ ಉನ್ನತ ವಿದ್ಯಾಭ್ಯಾಸದ ಸೆಕ್ರೆಟರಿ ಬರುತ್ತಿದ್ದಾರೆ.'

'ಹೌದು, ನರಹರಿ ರಾಯ್ರು.'

'ಹೌದು, ಅವರೆ! ಅವರು ಬಂದಾಗಲೆಲ್ಲ ಅಪ್ಪನಿಗೂ ಅವರಿಗೂ ಜಗಳ ಆಗುತ್ತೆ.'

'ಪ್ರಿನ್ಸಿಪಾಲ್‌ಗೂ ಸೆಕ್ರೆಟರಿಗೂ!'

ಹೌದು, ಅವರಿಬ್ಬರೂ ಮೈಸೂರಿನಲ್ಲಿ ಒಟ್ಟಿಗೇ ಬಹಳ ವರ್ಷಗಳು ಓದಿದರು. ಕಾಲೇಜಿನಲ್ಲಿ ಅವರಿಬ್ಬರು ಮತ್ತು ಅಮ್ಮ.

''ಅಮ್ಮ?''

''ಹೌದು, ಅಮ್ಮ ಕೌಸಲ್ಯ ಮತ್ತೆ ಇವರಿಬ್ಬರು ಬಹಳ ಒಟ್ಟಿಗೆ ಓಡಾಡುತ್ತಿದ್ದರು. ಅಮ್ಮ ನರಹರಿಮಾಮನಿಗೂ ಇಷ್ಟವಾಗಿದ್ದಳು ಅಂತ ಕಾಣುತ್ತೆ. ಆದರೆ ಅಮ್ಮ ಅಪ್ಪನ್ನ ಮದುವೆ ಮಾಡಿಕೊಂಡಳು.''

''ಆವಾಗಲಿಂದ..''

''ಇಲ್ಲ, ಅದಲ್ಲ! ಏನೋ ಅದೃಷ್ಟ ಅವರು ಸೆಕ್ರೆಟರಿಯಾದರು. ಅವರೇನೋ ಸರಿ. ಆದರೆ ನಮ್ಮಪ್ಪನಿಗೆ ಅವರನ್ನು ಕಂಡರೆ ಹೊಟ್ಟೆ ಉರಿ... ಏನಾದ್ರೂ ಹೇಳಿ, ಹೇಗಾದರೂ ಮಾಡಿ ನರಹರಿ ಮಾಮನಿಗೆ ಕೋಪ ಬರಿಸುತ್ತಾರೆ. ಜಗಳ ಶುರುವಾಗುತ್ತೆ....''

''ಆದರೆ ಅದು ನಾಳೆ ತಾನೇ.''

''ಹೌದು, ಆದರೆ ಅಪ್ಪ ನಿನ್ನೆಯಿಂದ ಸಿಡಸಿಡ ಅನ್ನುತ್ತಿದ್ದಾರೆ. ಇದರ ಮಧ್ಯೆ ನೀನು ಹೋಗಿ ನಿಮ್ಮ ಮಗಳನ್ನು ಕೊಡಿ ಎಂದರೆ ನಿನ್ನನ್ನು ತಿಂದು ಹಾಕಿಬಿಡ್ತಾರೆ, ಅಷ್ಟೆ. ಅದಿರಲಿ, ಸ್ವಲ್ಪ ಏನಾದರೂ ಟಾನಿಕ್ ತೊಗೊ, ಮತ್ತೆ ನೀನು ವೀಕ್ ಆಗಿ ಕಾಣ್ತೆದೀಯ.''

---

ಸುಕುಮಾರ ಮನೆಗೆ ಹೋದಾಗ ಅವನಿಗೆ ಸೋದರಮಾವ ಪವಮಾನ ಪಂಡಿತರ ಪತ್ನಿ ಕಮಲಮ್ಮನವರಿಂದ ಒಂದು ಪಾರ್ಸೆಲ್ ಕಾದಿತ್ತು. ಪವಮಾನ ಪಂಡಿತರು ರಾಜ್ಯದ ಪ್ರಮುಖ ಆಯುರ್ವೇದ ಪಂಡಿತರು. ಬರೇ ಔಷಧ ಕೊಡುವುದೇ ಅಲ್ಲದೆ ಬಹಳ ಪ್ರಯೋಗಗಳನ್ನೂ

ನಡೆಸುತ್ತಿದ್ದರು. ಸುಕುಮಾರ ಪಾರ್ಸೆಲ್ಲನ್ನು ಒಡೆದಾಗ ಅದರಲ್ಲಿ ಒಂದು ಶೀಷೆ ಇದ್ದು ಅದರ ಜೊತೆ ಒಂದು ಪತ್ರವೂ ಕೂಡ ಇದ್ದಿತು...''

ಚಿರಂಜೀವಿ ಸುಕುಮಾರನಿಗೆ ಕಮಲತ್ತೆಯ ಆಶೀರ್ವಾದಗಳು. ನನಗೆ ನಿನ್ನದೇ ಚಿಂತೆ. ನೀನು ಮೊದಲಿಂದಲೂ ನಾಜೂಕಾಗಿಯೇ ಬೆಳೆದಿದ್ದೀಯೆ. ನಿನಗೇ ಗೊತ್ತಿರುವ ಹಾಗೆ ನಿಮ್ಮ ಮಾವ ಹೊಸ ಹೊಸ ಔಷಧಿಗಳನ್ನು ಕಂಡುಹಿಡಿಯುತ್ತಲೇ ಇರುತ್ತಾರೆ.... ಮೊನ್ನೆ ಮೊನ್ನೆ ಒಂದು ಹೊಸ ಔಷಧಿ ಕಂಡುಹಿಡಿದಿದ್ದಾರೆ. ಅದು ಇನ್ನೂ ಮಾರಾಟಕ್ಕೆ ಇಟ್ಟಿಲ್ಲ. ಆದರೆ ಅದರ ಗುಣಗಳನ್ನು ನನಗೆ ಅವರು ವರ್ಣಿಸಿದರು. ಇದರಿಂದ ದೇಹಕ್ಕೆ ಶಕ್ತಿ ಒಂದೇ ಅಲ್ಲ, ಧೈರ್ಯವನ್ನು ಕೂಡ ಬಹಳ ಹೆಚ್ಚು ಮಾಡುತ್ತದೆ. ಅದನ್ನು ಕೇಳಿದ ನಂತರ ಇದು ನಿನಗೇ ಮಾಡಿಸಿಟ್ಟಿರುವ ಹಾಗಿದೆ. ಈ ದ್ರವದ ಒಂದು ಚಮಚ ಕೂಡಾ ಪವಾಡವನ್ನೇ ಮಾಡಬಲ್ಲದು ಎಂದು ಹೇಳಿದ್ದರು. ಇದಕ್ಕೆ ಸಂಜೀವಿನಿ ಎಂಬ ತಾತ್ಕಾಲಿಕ ಹೆಸರನ್ನು ಕೊಟ್ಟಿದ್ದಾರೆ. ಅವರಿಗೆ ಗೊತ್ತಿಲ್ಲದ ಹಾಗೆ ನಾನು ಒಂದು ಬಾಟಲನ್ನು ತೆಗೆದುಕೊಂಡು ನಿನಗೆ ಕಳಿಸುತ್ತಿದ್ದೇನೆ. ಇದರಿಂದ ನಿನ್ನ ಜೀವನದಲ್ಲಿ ಒಳ್ಳೆಯದಾಗಲಿ ಎಂದು ನಾನು ಹಾರೈಸುತ್ತೇನೆ... ನಿನ್ನ ಕಮಲತ್ತೆ.''

ಸುಕುಮಾರನಿಗೆ ಅವನ ಅತ್ತೆಯನ್ನು ಕಂಡರೆ ಬಹಳ ಇಷ್ಟ. ಅಂಥ ಔಷಧಿಗಳಲ್ಲಿ ಅವನಿಗೆ ನಂಬಿಕೆ ಇರಲಿಲ್ಲ. ಆದರೆ ರೋಹಿಣಿ ಟಾನಿಕ್ ತೊಗೊ ಎಂದು ಹೇಳಿದ್ದ ಜ್ಞಾಪಕ ಬಂದಿತು. ಸರಿ ಇದೇ ಟಾನಿಕ್ ಏಕಾಗಬಾರದು ಎಂದುಕೊಂಡ. ಅದಲ್ಲದೆ ಪಾಪ ಅತ್ತೆ ಕಳಿಸಿದ್ದಾರೆ. ಅವರ ಮೇಲಿನ ಪ್ರೀತಿಗಾಗಿ ಮಲಗುವ ಮುಂಚೆ ಒಂದು ಚಮಚ ಕುಡಿದ. ಎದ್ದ ತಕ್ಷಣವೂ ಒಂದು ಚಮಚ ಔಷಧಿಯನ್ನು ಕುಡಿದ. ಪ್ರತಿದಿನ ಬೆಳಗ್ಗೆ ಕೆಳಗಿನ ಮನೆಯಿಂದ ಅವನಿಗೆ ತಿಂಡಿ, ಕಾಫಿ ಬರುತ್ತಿತ್ತು. ಎಂದಿನ ಹಾಗೆ ಇಂದೂ ದೋಸೆ ಮತ್ತು ಕಾಫಿ ಬಂತು. ಅದನ್ನು ನೋಡಿದ ತಕ್ಷಣವೇ ಸುಕುಮಾರನಿಗೆ ಸಿಟ್ಟುಬಂದಿತು. ''ಮಂಜಪ್ಪನವರೇ'' ಎಂದು ಕಿರುಚಿದ.

''ಏನಯ್ಯಾ ಕಿರುಚ್ತಾ ಇದ್ದೀಯ'' ಎಂದು ಅವರು ಮೇಲು ಬರುತ್ತಾ ಹೇಳಿದರು. ಸುಕುಮಾರನಿಗೆ ಬಹಳ ಕೋಪ ಬಂದಿತು.

''ನೋಡಿ! ಗೌರವ ಕೊಟ್ಟು ಮಾತಾಡಿ! ನಾನು ಮಿಸ್ಟರ್ ಸುಕುಮಾರ್. ಇಲ್ಲಿಯ ಕಾಲೇಜಿನ ಇಂಗ್ಲಿಷ್ ಲೆಕ್ಚರರ್. ಓ ನಿಮಗೆ ಲೆಕ್ಚರರ್ ಅಂದರೆ ಅರ್ಥವಾಗಬೇಕಲ್ಲ! ಮೇಷ್ಟ್ರು ಕಣ್ರೀ.''

''ಅಲ್ಲ'' ಎಂದು ಮಂಜಪ್ಪನವರು ಹೇಳಲು ಬಂದಾಗ್ –

''ನಾನು ಮುಗಿಸಿಲ್ಲ, ಕಿರಚೋದು, ಅದು ಇದು ಅಂತೆಲ್ಲ ನೀವು ಮಾತಾಡಬಾರದು.''

ಮಂಜಪ್ಪನವರಿಗೆ ಆಶ್ಚರ್ಯವಾಯಿತು. ಮೂರು ತಿಂಗಳುಗಳ ಹಿಂದೆ ಸುಕುಮಾರ ಅವರ ಬಾಡಿಗೆದಾರನಾಗಿ ಬಂದಿದ್ದ. ಯಾವತ್ತೂ ಧ್ವನಿ ಏರಿಸಿ ಮಾತಾಡುತ್ತಿರಲಿಲ್ಲ. ಇದೇನು ಬಂತು ಇವನಿಗೆ ಅಂದುಕೊಂಡರು.

''ಈಗ, ನೀವು ತಂದುಕೊಟ್ಟಿರುವ ಪದಾರ್ಥದ ವಿಷಯ! ಇದು ಏನು?''

''ಸಾರ್, ಅದು...''

''ಬೇಗ ಹೇಳಿ.''

''ಅದು ದೋಸೆ''

''ನೀವು ಹೇಳಬೇಕಷ್ಟೆ! ಏನೋ ಕಪ್ಪಗಿದೆ ಅಂತ ಹೇಳಬಹುದು ಅಷ್ಟೆ''

'ಸ್ವಲ್ಪ ಸೀದುಹೋಯ್ತು'

'ಇಲ್ಲ, ನಾನು ಇದನ್ನು ಸಹಿಸೋಲ್ಲ! ನಾಳೆಯಿಂದ ಸರಿಯಾದ ತಿಂಡಿ ತಂದುಕೊಡಬೇಕು, ಕಾಫೀನೂ ಅಷ್ಟೆ ಇಲ್ಲದಿದ್ದರೆ.... ಈ ಊರಿನಲ್ಲಿ ಬಾಡಿಗೆ ಮನೇಗೆ ಏನೂ ಕೊರತೆ ಇಲ್ಲ, ತಿಳೀತೇನೂ? ಆಯ್ತು ಹೋಗಿ ಈ ದೋಸೇನ ನೀವೇ ತಿಂದುಕೊಳ್ಳಿ.''

ಮಂಜಪ್ಪನವರಿಗೆ ಏನೂ ಮಾತಾಡಲಾಗಲಿಲ್ಲ. ಇದೇನು ಪವಾಡ ಎಂದುಕೊಂಡರು. ನಿನ್ನೆಯ ತನಕ ಇಲಿ ತರಹ ಇದ್ದವನು ಈಗ ಹುಲಿಯಾಗಿಬಿಟ್ಟಿದ್ದಾನಲ್ಲ. ಆದರೂ ಸರಿಯಾಗಿ ದುಡ್ಡೆಲ್ಲಾ ಕೊಡ್ತಿದಾನಲ್ಲವೆ. ''ಸರಿ! ಮಿಸ್ಟರ್ ಸುಕುಮಾರ್'' ಎಂದು ಕೆಳಗೆ ಹೋದರು. ಸುಕುಮಾರ ಕನ್ನಡಿಯಲ್ಲಿ ತನ್ನ ಮುಖ ನೋಡಿಕೊಂಡ. ಅವನಿಗೆ ಅರಿವಾಯಿತು! ಇದು ಅತ್ತೆ ಕಳಿಸಿದ ಸಂಜೀವಿನಿಯ ಮಹಿಮೆ!

ಬೆಳಗ್ಗೆ ನಡೆಯುವುದು ಒಳ್ಳೆಯದು ಎಂದು ಸುಕುಮಾರ ದಿನವೂ ಕಾಲೇಜಿಗೆ ನಡೆದು ಹೋಗುತ್ತಿದ್ದ.

ಹಾಗೇ ಇಂದೂ ನಡೆಯುತ್ತಿದ್ದಾಗ ಮಧ್ಯ ವಯಸ್ಸಿನ ವ್ಯಕ್ತಿಯೊಬ್ಬರು ಓಡುತ್ತಿರುವುದನ್ನು ಕಂಡ. ಹಾಗೆ ಅವರ ಹಿಂದೆ ಒಂದು ನಾಯಿ ಬೊಗಳುತ್ತಾ ಅಟ್ಟಿಸಿಕೊಂಡು ಬರುತ್ತಿತ್ತು. ಕಡೆಗೆ ಆ ವ್ಯಕ್ತಿ ಹೇಗೋ ಅಲ್ಲೇ ಇದ್ದ ಮರವನ್ನು ಹತ್ತಿ ಕುಳಿತುಬಿಟ್ಟರು. ನಾಯಿ ಮರದ ಕೆಳಗೆ ನಿಂತು ಬೊಗಳುತ್ತಲೇ ಇದ್ದಿತು.

''ಏನು ಸ್ವಾಮೀ! ಈ ನಾಯಿ ತೊಂದರೆ ಕೊಡುತ್ತಿದೆಯೇ?''

''ಹೌದು ರೀ! ಏನಾದರೂ ಮಾಡಿ.''

''ಹೆದರಬೇಡಿ ಸಾರ್, ನಾನಿದ್ದೇನೆ'' ಎಂದು ಅಲ್ಲೇ ಬಿದ್ದಿದ್ದ ಕಲ್ಲನ್ನು ತೆಗೆದುಕೊಂಡ. ಒಂದು ಕ್ಷಣ ಸುಕುಮಾರ ತನ್ನನ್ನೇ ನೋಡಿಕೊಂಡ. ಇದುವರೆವಿಗೆ ಅವನು ಎಂದೂ ಯಾವ ನಾಯಿಗೂ ಕಲ್ಲು ಹೊಡೆದವನಲ್ಲ, ನಾಯಿ ಎಂದರೆ ಮೊದಲಿಂದಲೂ ಹೆದರುತ್ತಿದ್ದವನು ಇವನು! ಆದರೆ ಈಗ! ಅಂತಹ ಮನುಷ್ಯ ಈ ಭಯಂಕರ ನಾಯಿಯ ಎದುರು ನಿಂತು ಕಲ್ಲು ಹೊಡೆಯಲು ಕೈ ಎತ್ತಿದ್ದ. ಆ ನಾಯಿಯೂ ಸಾಮಾನ್ಯವಾದದ್ದೇನಲ್ಲ, ಆ ಊರಿನ ಏರಿಕೇರಿಗಳಲ್ಲೆಲ್ಲ ಬಹಳ ಕುಖ್ಯಾತಿಗಳಿಸಿತ್ತು ಈ ಶ್ವಾನ. ಆದರೇನಂತೆ ಸುಕುಮಾರ ಆ ನಾಯಿಯ ಮೇಲೆ ಕಲ್ಲು ಎಸೆದ. ಆ ನಾಯಿ, ಏಟು ಬಿದ್ದ ನಾಯಿಗಳಂತೆ, ಕುಯ್ ಕುಯ್ ಎಂದು ಓಡಿ ಹೋಯಿತು.

ಸುಕುಮಾರ ಮೇಲೆ ಹತ್ತಿದ್ದ ವ್ಯಕ್ತಿಯ ಬಳಿ ಹೋಗಿ, 'ಬನ್ನಿ ಸಾರ್! ನಾಯಿ ಹೋಯಿತು' ಎಂದ.

ಮರದಿಂದ ಇಳಿದು ಬಂದವರನ್ನು ನೋಡಿ ಸುಕುಮಾರನಿಗೆ ಆಶ್ಚರ್ಯವಾಯಿತು. ಇಷ್ಟು ತೂಕವನ್ನಿಟ್ಟುಕೊಂಡೂ ಅವರು ಹೇಗೆ ಮರವನ್ನು ಹತ್ತಿದರೋ ಎಂದುಕೊಂಡ.

''ನನ್ನ ಜೀವ ಉಳಿಸಿದಿರಿ ನೀವು.''

''ಅಂತಹದ್ದೇನಿಲ್ಲ ಸಾರ್.''

''ಇಲ್ಲ, ನಿಮ್ಮ ಉಪಕಾರವನ್ನು ನಾನೆಂದೂ ಮರೆಯುವನಲ್ಲ.''

''ಸಾರ್, ನೀವು ಎಲ್ಲಿಗೆ ಹೋಗುತ್ತಿದ್ದೀರಿ.''

''ನಾನು ನಿನ್ನೆ ರಾತ್ರಿ ಬಂದೆ. ಕಾಲೇಜಿನ ಗೆಸ್ಟ್ ಹೌಸಿನಲ್ಲಿ ಉಳಿದುಕೊಂಡಿದ್ದೇನೆ. ಹಳ್ಳಿಗಾಡಿನ ಬೆಳಗಿನ ಜಾವದ ಸೊಬಗನ್ನು ಸವಿಯೋಣ ಎಂದು ವಾಕ್ ಹೊರಟೆ... ಆದರೆ ಆ ಪ್ರಾಣಿ ನನ್ನ ಹಿಂದೆ ಬರಲು...''

''ಸಾರ್, ನೀವು ಸೆಕ್ರೆಟರಿ ನರಹರಿ ರಾಯರಲ್ವೆ..''

''ಹೌದು, ನೀವು...''

''ನಾನು ಎ.ಎಸ್. ಸುಕುಮಾರ್. ಇಲ್ಲಿಯ ಕಾಲೇಜಿನ ಇಂಗ್ಲಿಷ್ ಲೆಕ್ಚರರ್.''

''ಬಹಳ ಸಂತೋಷ! ನಾನು ಈವತ್ತೆಲ್ಲ ಇಲ್ಲಿಯೇ ಇರುತ್ತೇನೆ. ಆ ವರದನ ಹತ್ತಿರ ಜಗಳಾ ಬೇರೆ ಆಡ್ಬೇಕಲ್ಲ.''

''ನಾನೂ ಅವರ ಹತ್ತಿರಾನೇ ಹೋಗ್ತಾ ಇದ್ದೀನಿ. ಅವರ ಮಗಳನ್ನ ಮದುವೆ ಮಾಡಿಕೊಡಿ ಅಂತ ಕೇಳಿಕೋಬೇಕು.''

''ರೋಹಿಣೀನ? ವಂಡರ್‌ಫುಲ್! ನಿಮ್ಮಂತಹ ಧೈರ್ಯವಂತರು ಮೇಲಕ್ಕೆ ಹೋಗುತ್ತೀರ.''

''ಸಾರ್, ನೀವು ಈಗ ಹೋಗಿದ್ದಂತೆ.''

''ಹ ಹ! ಜೋಕೂ ಮಾಡ್ತೀರ! ಎಲ್ಲ ಒಳ್ಳೆಯದಾಗಲಿ.''

ನರಹರಿ ರಾಯರು ಕಾಲೇಜಿನತ್ತ ಹೋಗುವುದನ್ನು ಕಂಡು ಸುಕುಮಾರ ರೋಹಿಣಿಯ ಮನೆಯತ್ತ ನಡೆದ. ರೋಹಿಣಿ ಬಾಗಿಲು ತೆಗೆದು ಹೊರಬಂದ ತಕ್ಷಣ ಅವಳಿಗೆ ಮುತ್ತಿಟ್ಟು ತಿರುಗಿ ನೋಡದೆ ಖುಷಿಯಿಂದ ಕಾಲೇಜಿನತ್ತ ನಡೆದ.

---

ಕಾಲೇಜಿನೊಳಗೆ ಕಾಲಿಟ್ಟ ಸುಕುಮಾರನಿಗೆ ಪ್ರಿನ್ಸಿಪಾಲ್ ರೂಮಿನಿಂದ ಕಿರುಚಾಟಗಳು ಕೇಳಿಸಿದವು. ಆಗಲೇ ಪ್ರಿನ್ಸಿಪಾಲರ ರೂಮಿನ ಮುಂದೆ ಕೆಲವು ವಿದ್ಯಾರ್ಥಿಗಳು, ನೌಕರರು ಸೇರಿದ್ದರು. ಅವರನ್ನೂ ದೂರ ಕಳಿಸಿ ಸುಕುಮಾರ ಅಲ್ಲಿಯೇ ನಿಂತು.

ಒಳಗಿನ ವಾಗ್ಯುದ್ಧವನ್ನು ಆಲಿಸಿದ.

'ವರದಾ! ನೀನು ಬದಲೇ ಆಗಿಲ್ಲವಲ್ಲೋ'

'ನರಹರಿ, ನೀನು ಮತ್ತೆ ನನಗೆ ಕೋಪ ಬರಿಸಬೇಡ.'

'ಆ ಮೂಗಿನ ಮೇಲಿನ ಕೋಪ ಇದೆಯಲ್ಲಾ, ಅದೇ ನಿನ್ನ ದೊಡ್ಡ ತೊಂದರೆ. ಇಲ್ಲದಿದ್ದರೆ...'

''ಏನು ನಿನ್ನ ತರಹ ಅವರಿವರನ್ನು ಪುಸಲಾಯಿಸಿ ಮೇಲಕ್ಕೆ ಹೋಗಬಹುದಾಗಿತ್ತು ಅಂತಾನಾ?''

'ಈ ತರಹ ಇದ್ದರೆ ನಿನ್ನ ಹತ್ತಿರ ಏನು ಮಾತಾಡೋಕೆ ಆಗುತ್ತೆ. ಈ ನಿನ್ನ ಕೋಪ ತಡೆಯಲಾರದೆಯೆ ಕೌಸಲ್ಯ ಬೇಗ ಹೊರಟು ಹೋದಳು.'

''ಬೇಡ! ನರಹರಿ!''

ಅಷ್ಟರಲ್ಲಿ ಸುಕುಮಾರ ಪ್ರಿನ್ಸಿಪಾಲರ ಕೋಣೆಯ ಬಾಗಿಲನ್ನು ತೆಗೆದು ಒಳಪ್ರವೇಶಿಸಿದ. ಅದನ್ನು ನೋಡಿದ ವರದಾಚಾರ್ಯರು 'ಏನ್ರೀ ಕೆಲಸ ನಿಮಗೆ ಇಲ್ಲಿ? ಹೊರಗೆ ಹೋಗಿ...'

ಸುಕುಮಾರ 'ನನಗೆ ಕೆಲಸ ಇದೆ! ಅದಕ್ಕೇ ಇಲ್ಲಿ ಬಂದಿರೋದು' ಎಂದು ಖಾರವಾಗಿಯೇ ಹೇಳಿದ.

ಇದನ್ನು ಕೇಳಿದ ವರದಾಚಾರ್ಯರಿಗೆ ಆಶ್ಚರ್ಯವಾಯಿತು. ಇದುವರೆವಿಗೆ 'ಎಸ್ ಸಾರ್, ಎಸ್ ಸಾರ್' ಅನ್ನುತ್ತಿದ್ದ ಆ ಮೂಕ ಪ್ರಾಣಿ ಹೇಗಾಗಿ ಬಿಟ್ಟಿದ್ದಾನೆ' ಎಂದುಕೊಂಡರು.

'ನೋಡಿ ಇಲ್ಲಿ! ನೀವಿಬ್ಬರೂ ಬಹಳ ಓದಿದವರು. ಸಮಾಜದಲ್ಲಿ ಗಣ್ಯವ್ಯಕ್ತಿಗಳು. ಹೀಗೆ ಬೀದಿಯ ನಾಯಿಗಳ ತರಹ ಜಗಳವಾಡುವುದು ನಾಚಿಕೆಯ ವಿಷಯವಲ್ಲವೇ?'

''ಈ ವರದನಿಗೆ ಹೇಳಿ ಮಿಸ್ಟರ್ ಸುಕುಮಾರ್.''

''ಹೇಳ್ತೀನಿ ನರಹರಿ ರಾಯರೇ! ಆದರೆ ನೀವೂ ಸೇರಿಗೆ ಸವಾಸೇರು ಅಂತ ಮಾತು ಹೆಚ್ಚು ಮಾಡ್ತಾ ಇದ್ದೀರಲ್ವೆ.''

''ನೋಡ್ರಿ ವರದಾಚಾರ್''

''ಹಾ!'' ಎಂದರು ಪ್ರಿನ್ಸಿಪಾಲ್ ಸಾಹೇಬರು.

''ಹೌದು, ನಿಮಗೇ ಹೇಳುತ್ತಿರುವುದು. ಈಗ ಜಗಳವಾಡುವುದನ್ನು ತಕ್ಷಣವೇ ನಿಲ್ಲಿಸಿ. ನೀವು ಹಳೆಯ ಸ್ನೇಹಿತರು ಕೂಡ. ಹಳೆಯ ಒಳ್ಳೆಯ ದಿನಗಳನ್ನು ಜ್ಞಾಪಿಸಿಕೊಳ್ಳಿ. ಕಾಲೇಜಿನಲ್ಲಿ ನೀವಿಬ್ಬರು, ಅತ್ತೆಯವರು.''

'ಅತ್ತೆಯವರಾ?'

'ಹೌದು, ಆಮೇಲೆ ಆ ವಿಷಯಕ್ಕೆ ಬರುತ್ತೇನೆ! ಈಗ ನೀವು ರಾಜಿ ಮಾಡಿಕೊಳ್ಳಿ.'

'ಆಗಲಪ್ಪ, ಮಹಾನುಭಾವ' ಎಂದು ನರಹರಿ ರಾಯರು ಇನ್ನೂ ಸುಕುಮಾರನನ್ನು ವಿಸ್ಮಯದಿಂದ ನೋಡುತ್ತಿದ್ದ ವರದಾಚಾರ್ಯರ ಕೈಯನ್ನು ಕುಲುಕಿದರು.'

''ನೋಡು ವರದ! ಈ ಯುವಕ ಮಹಾ ಧೈರ್ಯವಂತ! ಈವತ್ತು ಬೆಳಗ್ಗೆ ನನ್ನನ್ನು ಒಂದು ಮಹಾ ಶ್ವಾನದಿಂದ ಬಚಾವ್ ಮಾಡಿದ.''

''ಅಂದರೆ ನಾಯಿ.''

''ಹೌದು! ಎಂತಹ ನಾಯಿ! ತೋಳದ ಹಾಗೆಯೆ ಇತ್ತು ಅದು. ಅಂತಹ ಕಾಡುಪ್ರಾಣಿಯ ಎದುರು ಧೈರ್ಯದಿಂದ ನಿಂತು ಅದಕ್ಕೆ ಕಲ್ಲು ಹೊಡೆದ... ನಿಜವಾಗಿಯೂ ಧೈರ್ಯನಪ್ಪ ಈ

ಹುಡುಗನಿಗೆ. ಅದಲ್ಲದೆ ನೋಡು ನಮ್ಮಿಬ್ಬರ ಜಗಳವನ್ನು ಹೇಗೆ ನಿಲ್ಲಿಸಿದ! ನೋಡ್ತಾ ಇರು ವರದ, ಈ ಹುಡುಗ ಹೇಗೆ ಮೇಲಕ್ಕೆ ಹೋಗುತ್ತಾನೆ ಅಂತ. ಬೆಂಗಳೂರಿಗೆ ಹೋದ ನಂತರ ಇವನನ್ನು ಅಲ್ಲಿಯ ಒಂದು ದೊಡ್ಡ ಕಾಲೇಜಿಗೇ ವರ್ಗ ಮಾಡಿಸ್ತೀನಿ... ಆದಿರಲಿ ನೀನು ಏನೂ ಯೋಚನೆ ಮಾಡದೆ ರೋಹಿಣಿಯನ್ನು ಇವನಿಗೆ ಮದುವೆ ಮಾಡಿಕೊಡು.''

''ನರಹರಿ!''

''ಯಾಕೆ ಅಷ್ಟು ಯೋಚನೆ ಮಾವಯ್ಯ'' ಎಂದ ಸುಕುಮಾರ.

''ಏನಿಲ್ಲ..''

''ಮತ್ತೇನು, ಶುಭಸ್ಯ ಶೀಘ್ರಮ್'' ಎಂದು ನರಹರಿ ರಾಯರು ಸುಕುಮಾರನ ಕಡೆ ನೋಡಿ ಕಣ್ಣು ಮಿಟುಕಿಸಿದರು.

---

ಮನೆಗೆ ವಾಪಸ್ಸು ಬಂದ ಸುಕುಮಾರನನ್ನು ನೋಡಿ ಮನೆಯ ಮಾಲೀಕ ಮಂಜಪ್ಪನವರು ಹೆದರುತ್ತಾ ನಮಸ್ಕಾರ ಹೇಳಿದರು. ಅವನಿಗೆ ಅಂದು ಬಂದಿದ್ದ ಒಂದು ಕಾಗದವನ್ನು ಕೊಟ್ಟರು. ಅದು ಅವನ ಮಾವ ಪವಮಾನ ಪಂಡಿತರಿಂದ ಇದ್ದಿತು.

ಅದರಲ್ಲಿ ''ಚಿ. ಸುಕುಮಾರನಿಗೆ ಆಶೀರ್ವಾದಗಳು. ಒಂದು ದೊಡ್ಡ ತಪ್ಪಾಗಿದೆ. ನಾನು ಇತ್ತೀಚೆಗೆ ದೇಹವನ್ನು ಮತ್ತು ಮನಸ್ಸನ್ನು ರಿಪೇರಿ ಮಾಡುವ ಒಂದು ಔಷಧ ಕಂಡುಹಿಡಿದಿದ್ದೇನೆ. ಅದರಲ್ಲಿ ಎರಡು ವಿಧ. ಒಂದು ಮನುಷ್ಯರಿಗೆ, ಇನ್ನೊಂದು ಪ್ರಾಣಿಗಳಿಗೆ. ಮುಖ್ಯವಾಗಿ ಆನೆಯಂತಹ ದೊಡ್ಡ ಪ್ರಾಣಿಗಳಿಗೆ. ಈಗ್ಯಾಕೋ ಆನೆಗಳು ಸೋತುಬಿಟ್ಟಿರುತ್ತವೆ ಎಂದು ವನ್ಯಾಧಿಕಾರಿಗಳು ನನಗೆ ಬರೆದಿದ್ದರು. ಅದು ಬಹಳ ಶಕ್ತಿಶಾಲಿ ಔಷಧ. ನಿಮ್ಮ ಅತ್ತೆ ನನಗೆ ಹೇಳದೆ ನಿನಗೆ ಒಂದು ಬಾಟಲ್ ಕಳಿಸಿದ್ದಾಳೆ. ಅದು ಪ್ರಾಣಿಗಳ ಅಂದರೆ ಎರಡನೆಯ ತರಹದ ಔಷಧಿ. ನೀನು ಕುಡಿಯಬೇಡ, ಬಿಸಾಕಿಬಿಡು.''

ಇದನ್ನು ಓದಿದ ಸುಕುಮಾರ 'ಪರವಾಗಿಲ್ಲ, ನನಗೆ ಇನ್ನೆರಡು ಬಾಟಲ್ ಇದೇ ಔಷಧಿಯನ್ನು ಕೊಡಿ' ಎಂದು ಬರೆದು ಕಳಿಸಿದ.

❋

## ನಗುವಿನ ದಿನಗಳು

ಇಂದು, ನಾಳೆ, ನಾಡಿದ್ದು, ಆಚೆ ನಾಡಿದ್ದು ಒಂದೇ
ನಗುವಿನ ಭಾವದವರಿಗೆ ಎಲ್ಲಾ ದಿನ ಒಂದೇ
ನಕ್ಕರಷ್ಟು ನಿರಾಳ ಎಲ್ಲರ ಅಂತರಾಳ
ಆಗಲಿ ನಗದಿರುವ ದಿನಗಳೇ ತುಂಬಾ ವಿರಳ